ಪ್ರಜಾಸತ್ತಾತ್ಮಕ ಮಹಿಳಾಸಂಘಟನೆಯ ಎರಡನೆಯ ರಾಜ್ಯ ಸಮ್ಮೇಳನದ ಸಂದರ್ಭಕ್ಕಾಗಿ 'ಐಕ್ಯರಂಗ'ದ ವಿಶೇಷ ಸಂಚಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 12 ಸಂಚಿಕೆ 35 ಸೆಪ್ಟೆಂಬರ್ 2,1990 ರೂ 1.50



ವರ್ಣದ್ವೇಷಕ್ಕೆ
ಎಲ್ಲಾ ಮಹಿಳೆಯರ ಸಹಕಾರ

ಮಹಿಳಾ ಚಳುವಳಿಯಲ್ಲಿ ಒಂದು ಮಹತ್ವದ ಹೆಜ್ಜೆ

ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಎರಡನೆ ರಾಜ್ಯ ಸಮ್ಮೇಳನ

ದೆಹಲಿಯಲ್ಲಿ ಅಧಿಕಾರ ನಡೆಸುತ್ತಿದ್ದ ಸರ್ವಾಧಿಕಾರಿ ಶಕ್ತಿ, ದೇಶದಲ್ಲಾ ಪ್ರಜಾಸತ್ತಾತ್ಮಕ ಚಳವಳಿಯ ದಾರಿಯಲ್ಲಿ ಹೆಬ್ಬಂಡೆಯಾಗಿದ್ದ ಭೀಕರ ಶಕ್ತಿ, ಮಹಿಳೆಯರ ಮೇಲಿನ ಅತ್ಯಾಚಾರ, ಅನ್ಯಾಯಗಳಿಗೆ ಕಾರಣವಾದ ಶಾಬಾನು ಪ್ರಕರಣದಲ್ಲಿ ಮುಸ್ಲಿಂ ಮಹಿಳೆಯರನ್ನು ಅಂಧಕಾರದ ಯುಗದ ಕತ್ತಲ ಕೂಪಕ್ಕೆ ನೂಕಿದ, 'ಸತಿ' ಪ್ರಕರಣದಲ್ಲಿ ಮಹಿಳೆಯರನ್ನು ಹಾಡು ಹಗಲೇ ಸುಡಲು ನಾಂದಿ ಹಾಕಿದ ಕ್ರೂರ ಶಕ್ತಿ ಅಧಿಕಾರದಿಂದ ಹಿಂದೆ ಸರಿದಿದೆ.

ಮಹಿಳಾ ಸಂಘಟನೆಗಳೆಲ್ಲವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಚರ್ಚಿಸಿದ, ಖಾಯಂ ಮಹಿಳಾ ಆಯೋಗವನ್ನು ನ್ಯಾಯಾಲಯದ ಅಧಿಕಾರವಿತ್ತು ನೇಮಿಸಿರುವ ರಾಷ್ಟ್ರೀಯ ರಂಗ ಸರ್ಕಾರ ಅಧಿಕಾರಕ್ಕೆ ಬಂದಿದೆ.

ಆದರೂ ವರದಕ್ಷಿಣೆ ಕೊಲೆಗಳು, ಮಹಿಳೆಯರ ಮೇಲಿನ ಅತ್ಯಾಚಾರಗಳು ಅವ್ಯಾಹತವಾಗಿ ನಡೆದಿವೆ. ಎಲ್ಲಕ್ಕಿಂತ ಮಿಗಿಲಾಗಿ ಮಹಿಳೆಯರ ಸಮಸ್ಯೆಗಳಿಗೆ ಸಂಬಂಧಿಸಿ ಅತ್ಯಂತ ಹಳೆ. ಕಂದಾಚಾರಗಳಿಗೆ ಬೆಂಬಲವೀಯುವ ಹಿಂದೂ ಮೂಲಭೂತವಾದಿಗಳ ಶಕ್ತಿ ಗಣನೀಯವಾಗಿ ಹೆಚ್ಚಿದೆಯೆಂಬುದನ್ನು ಕಡೆಗಣಿಸುವಂತಿಲ್ಲ.

ರಾಮ ಜನ್ಮಭೂಮಿ-ಬಾಬರಿ ಮಸೀದಿ ವಿವಾದವನ್ನು ಇಡೀ ದೇಶದ ತುಂಬೆಲ್ಲಾ ಹಬ್ಬಿಸುವ ಪ್ರಯತ್ನ- ಪಂಜಾಬ್, ಜ.ಕಾಶ್ಮೀರಗಳಲ್ಲಿ ಎದ್ದಿರುವ ದಳ್ಳುರಿಯನ್ನು ದೇಶದ ಒಳಗೆಲ್ಲಾ ದಾವಾನಲವಾಗಿ ಹಬ್ಬಿ ದೇಶವನ್ನೇ ಉರಿಸುವ ಪ್ರಯತ್ನ ಈ ದಳ್ಳುರಿಯನ್ನು ಹಬ್ಬಿಸುವುದರಲ್ಲಿ ಮೂಲಭೂತವಾದಿಗಳು ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತಾರೋ ಅಷ್ಟರಮಟ್ಟಿಗೆ ತೀವ್ರ ಪೆಟ್ಟು-- ಮೊದಲ ಪೆಟ್ಟು ಬೀಳುವುದು ಮಹಿಳೆಯರ ಮೇಲೆಯೇ.

ಈಗಾಗಲೇ ಕಂದಾಚಾರದ ಹಿಡಿತದಿಂದ ಇನ್ನೂ ಹೊರಗೆ ಬರದಿರುವ ಈಗ ತಾನೇ ಹೊರಗೆ ಬರುತ್ತಿರುವ ಮಹಿಳಾ ವಿಭಾಗಗಳ ಮೇಲೆ, ಅವರ ಮನಸ್ಸಿನ ಮೇಲೆಯೇ ಮೊದಲ ಪರಿಣಾಮವಾಗುತ್ತದೆ. ಮತ್ತಷ್ಟು ಕಂದಾಚಾರದ ಹಿತಕ್ಕೆ ತಾವೇ ಸಿಕ್ಕಿಕೊಳ್ಳುತ್ತಾರೆ ಹಾಗೂ ಮುಂದಿನ ತಲೆಮಾರನ್ನು ಸಿಕ್ಕಿಸುತ್ತಾರೆ.

ಅಲ್ಲದೆ ಇಡೀ ಸಮಾಜದ ಮೇಲೆ ಕಂದಾಚಾರದ ಹಿಡಿತ ಬಲವಾಗುವುದರಿಂದ ಮಹಿಳೆಯ ಸ್ವಾತಂತ್ರ್ಯಕ್ಕೆ ದೊಡ್ಡ ಪೆಟ್ಟಾಗುತ್ತದೆ. ಕೋಮು ಗಲಭೆಗಳಾದರಂತೂ ಹೇಳಲೇಬೇಕಿಲ್ಲ. ಅದರಲ್ಲಿ ಹೆಂಗಸರು ಮಕ್ಕಳೇ ಬೇಯುವವರು ಎಂಬ ಬಗ್ಗೆ

ಇಂತಹ ಸನ್ನಿವೇಶದಲ್ಲಿಯೇ ದೇಶ ಮಟ್ಟದಲ್ಲಿ ಪ್ರಗತಿಪರ ಮಹಿಳಾಸಂಘಟನೆಗಳ ಶಕ್ತಿಯೂ ಬೆಳೆಯುತ್ತಿರುವ ರಾಷ್ಟ್ರದ ರಾಜಕೀಯದಲ್ಲಿ ತಮ್ಮ ಸ್ಥಾನವನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನ ನಡೆದಿದೆ.

ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ಚಳವಳಿ ಮೇಲೆ ಧಾಳಿಯೆಸಗದ ವಿಧವಾ ವೇತನ ಮುಂತಾದ ತಾತ್ಕಾಲಿಕ ಪರಿಹಾರಗಳನ್ನು ಕೊಡಲು ಪ್ರಯತ್ನಿಸಿದ ಜನತಾಪಕ್ಷ-ಜನತಾದಳ ಅಧಿಕಾರ ಕಳೆದು ಕೊಂಡಿದೆ. ಈ ಎಲ್ಲಾ ಅನುಕೂಲಗಳನ್ನು ಕಿತ್ತುಕೊಳ್ಳಲು ಪ್ರಯತ್ನಿಸುತ್ತಿರುವ ಸರ್ವಾಧಿಕಾರಿ ಪಕ್ಷ ಅಧಿಕಾರಕ್ಕೆ ಬಂದಿದೆ. ರಾಜ್ಯದಲ್ಲಿಯೂ ಕುದುರೆ ಮೋತಿಯಂತಹ ಕರಾಳ ಪ್ರಸಂಗಗಳು ಮಾತ್ರವಲ್ಲ ವರದಕ್ಷಿಣೆ ಹತ್ಯೆಗಳ ವಿರುದ್ಧಮತ್ತು ಮಹಿಳೆಯರಂತಯೇ ಪಾಳೆಯಗಾರಿ ದಬ್ಬಾಳಿಕೆಗೆ ತುತ್ತಾದ ಹರಿಜನ-ಗಿರಿಜನರ ಮೇಲಿನ ಧಾಳಿಗಳ ವಿರುದ್ಧ-ಬೆಂಡಿಗೇರಿ, ತುತ್ತೂರು ಪ್ರಕರಣದಲ್ಲಿ-ಪ್ರತಿಭಟನೆ ಮೊಳಕೆಯೊಡೆಯುತ್ತಿದೆ.

ಬೆಲೆ ಏರಿಕೆ ಮಹಿಳೆಯರನ್ನು ಉದ್ಯೋಗದತ್ತ ದೂಡುತ್ತಿರುವ, ಮಹಿಳೆಯರ ವಿದ್ಯಾಭ್ಯಾಸ ಮತ್ತು ಉದ್ಯೋಗ ನಿಧಾನವಾಗಿ ಹೆಚ್ಚುತ್ತಿದ್ದ ಸಂದರ್ಭದಲ್ಲಿಯೇ ಲೇ ಆಫ್ ರಿಟ್ರೆಂಚ್‌ಮೆಂಟ್‌ಗಳಿಗೆ ಮಹಿಳೆಯರೇ ಮೊದಲ ಆಹುತಿಗಳಾಗುತ್ತಿದ್ದಾರೆ. ಹೀಗಾಗಿ ಮಹಿಳೆಯರು ಸಂಘರ್ಷಕ್ಕಿಳಿದಿದ್ದಾರೆ, ಇಳಿಯುತ್ತಿದ್ದಾರೆ.

ಇಂತಹ ಸಂದರ್ಭದಲ್ಲಿಯೇ ಮಹಿಳಾವಾದಿಗಳು ತಮ್ಮ ಪ್ರಭಾವ ಹೆಚ್ಚಿಸಿಕೊಳ್ಳಲು ತೀವ್ರ ಪ್ರಯತ್ನ ಮಾಡುತ್ತಿದ್ದಾರೆ. ಕ್ರಿಶ್ಚಿಯನ್ ಎಡಸಂಘಟನೆಗಳು ಮಹಿಳಾ ಚಳುವಳಿಯಲ್ಲಿ ನುಸುಳಲು ಪ್ರಗತಿಪರ ಚಳವಳಿಯನ್ನು ಒಡೆಯಲು ತೀವ್ರ ಪ್ರಯತ್ನ ನಡೆಸುತ್ತಿದ್ದಾರೆ.(ಈ ಹಿಂದೆ ಪಕ್ಷ ಸ್ವಲ್ಪ ಎಚ್ಚರ ತಪ್ಪಿದರೆ ಯಶಸ್ವಿಯಾಗಿಯೇ ಬಿಡುತ್ತಿರೆಂಬುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು.) ಇದು ಒಂದೆಡೆಯಾದರೆ ರಾಜ್ಯದಲ್ಲಿರುವ ಇತರ ಎಡಶಕ್ತಿಗಳು ಸಿಪಿಐ ಮತ್ತು ಅಳಿದುಳಿದ ಸಮಾಜವಾದಿಗಳು ಮಹಿಳಾ ಚಳವಳಿಯ ಬಗ್ಗೆ ಸಂಪೂರ್ಣ ಉದಾಸೀನರಾಗಿರುವುದೂ ಮಹಿಳಾ ಚಳವಳಿಯನ್ನು ಹಿಂದಳೆಯುತ್ತಿದೆ. ಬಂಡವಾಳಶಾಹಿ ಭೂಮಾಲಿಕ ಪಕ್ಷಗಳು ಮಹಿಳೆಯರಿಗೆ ಚುನಾಯಿತ ಸ್ಥಾನಗಳಲ್ಲಿರುವ ಮೀಸಲಾತಿಯನ್ನು ಪಡೆಯುವುದಕ್ಕಾಗಿ ಹಿಂದಿಗಿಂತ ಹೆಚ್ಚು ಚುರುಕಾಗಿದ್ದಾರೆ.

ಈ ಸನ್ನಿವೇಶದಲ್ಲಿ ನಮ್ಮ ರಾಜ್ಯದಲ್ಲಿ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಎರಡನೇ ಸಮ್ಮೇಳನ ನಡೆಯುತ್ತಿದೆ. ವಿವಿಧ ಜಿಲ್ಲೆಗಳಲ್ಲಿ ನಡೆಯುತ್ತಿದ್ದ ಚಟುವಟಿಕೆಗಳನ್ನು ದೃಢಗೊಳಿಸುವ ಕ್ರೋಢೀಕರಿಸುವ ದಾರಿಯಲ್ಲಿ ಇದೊಂದು ಮಹತ್ವದ ಹೆಜ್ಜೆ. ಈ ಹೆಜ್ಜೆ ಮಹಿಳಾ ಚಳವಳಿ ಆರೋಗ್ಯಕರವಾದ ಹಾದಿಯಲ್ಲಿ ಪ್ರಜಾಸತ್ತಾತ್ಮಕ ಚಳವಳಿಯ ಭಾಗವಾಗಿ, ದಾಪುಗಾಲಿಡುತ್ತಾ ಬೆಳೆಯುವ, ರಾಜ್ಯಾದ್ಯಂತವಿಸ್ತರಿಸುವ ಗುರಿಯತ್ತ ಕಂಡೊಯ್ಯಲಿ.

ಕೊಲ್ಲಿ ಬಿಕ್ಕಟ್ಟು

ಅರಬ್ಬರು, ಅಲಿಪ್ತ ಆಂದೋಲನ ತಮ್ಮ ಹೊಣೆ ನಿರ್ವಹಿಸಬೇಕು.

(ಪಿ.ಡಿ. ಸಂಪಾದಕೀಯ)

ಮೂರನೇ ಜಗತ್ತೇ ಇಡಿಯಾಗಿ ಸಾಮ್ರಾಜ್ಯಶಾಹಿ ಪ್ರಾಬಲ್ಯದ ವಿರುದ್ಧ, ನವ-ವಸಾಹತುಶಾಹಿ ಶೋಷಣೆಯ ವಿರುದ್ಧ ಹೋರಾಡುತ್ತಿರುವಾಗ ಇರಾಕ್ ಇನ್ನೊಂದು ಮೂರನೇ ಜಗತ್ತಿನ ದೇಶವಾದ ಪುಟ್ಟ ಕುವೈತ್‌ನ ಅತಿಕ್ರಮಣ ನಡೆಸಿರುವುದು ಅತ್ಯಂತ ದೂಷಣೀಯ ಕೃತ್ಯ. ಏಕೆಂದರೆ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಸೂರ್ಯಮುಳುಗಿದ ಮಧ್ಯಪೂರ್ವ ಪ್ರದೇಶದಲ್ಲಿ ಅದರ ಸ್ಥಾನ ಆಕ್ರಮಿಸಿ ಕೊಂಡಿರುವುದು ಅಮೇರಿಕಾ. ಆದ್ದರಿಂದ ಇರಾಕೀ ಕಾರ್ಯಾಚರಣೆ ಅಮೆರಿಕಾದ ಹಸ್ತಕ್ಷೇಪಕ್ಕೆ ಬಾಗಿಲು ತೆರೆಯಿತು , ಎಂಬುದನ್ನು ಅರ್ಥಮಾಡಿಕೊಳ್ಳುವುದು ಕಷ್ಟದ ಸಂಗತಿಯಲ್ಲ. ಅವಕಾಶ ಸಿಕ್ಕಿದ್ದೇ ತಡ ಅಧ್ಯಕ್ಷ ಬುಷ್‌ರ 50 ಸಾವಿರ ಪಡೆಗಳು ಧಾವಿಸಿದವು. ಪಶ್ಚಿಮ ಏಷ್ಯಾದ ದೇಶದ ಸ್ವಾತಂತ್ರ್ಯದ, ಸಾರ್ವಭೌಮತ್ವದ ನೆಪವೊಡ್ಡಿ. ಆದರೆ ಅಮೆರಿಕಾದ ಈ ಡಂಭ ಕೇವಲ ನಾಚಿಕೆಯಿಲ್ಲದ ಗೋಸುಂಬೆತನ ಎಂಬುದು ಎಲ್ಲರಿಗೂ ಗೊತ್ತು. ಪನಾಮಾದಲ್ಲಿ ಅವರ ಆಕ್ರಮಣದ ನೆನಪು ಇನ್ನೂ ಹಸಿರಾಗಿಯೇ ಇದೆ.

ಕುವೈತ್‌ನ ಅತಿಕ್ರಮಣ ಅತ್ಯಂತ ಖಂಡನೀಯವಾದರೂ ಅರಬ್ ದೇಶಗಳ ಆಂತರಿಕ ವಿಷಯ. ಅದನ್ನು ಅರಬ್ ದೇಶಗಳೇ ಪರಿಹರಿಸಿಕೊಳ್ಳಬೇಕು. ಅಲಿಪ್ತ ಆಂದೋಲನಕ್ಕೆ ಇದರಲ್ಲಿ ಪಾತ್ರವಿದೆ. ದುರದೃಷ್ಟವಶಾತ್ ಅಲಿಪ್ತ ಆಂದೋಲನದ ಮುಖಂಡತ್ವ ಈ ಬಿಕ್ಕಟ್ಟಿನ ಪರಿಹಾರ ಕಂಡುಹಿಡಿಯುವ ತನ್ನ ಜವಾಬ್ದಾರಿ ನಿರ್ವಹಿಸುತ್ತಿಲ್ಲ.

ಕಳೆದ ಇಪ್ಪತ್ತೈದು ವರ್ಷಗಳಲ್ಲಿ, ಅಮೆರಿಕನ್ ಸಾಮ್ರಾಜ್ಯಶಾಹಿಗಳು ಅರಬ್ ಜನಗಳು ಅತ್ಯಂತ ದ್ವೇಷಿಸುವ ಶತ್ರುಗಳು ಎಂಬುದನ್ನು ಕ್ರಮೇಣ ಸಾಬೀತು ಮಾಡಿಕೊಟ್ಟಿದ್ದಾರೆ. ಈಗ ಅರಬರ ನಡುವೆ ವೈಷಮ್ಯ ಬಿತ್ತಿ ಅವರ ಐಕ್ಯತೆ ಒಡೆಯುವ, ಪಶ್ಚಿಮ ಏಷ್ಯಾದ ರಾಜಕೀಯದಲ್ಲಿ ಮಹಾನ್ ರಕ್ಷಕನ ಪಾತ್ರ ಆಡುವ ಅವಕಾಶ ಅವರು ಗಿಟ್ಟಿಸಿದ್ದಾರೆ. ಈ ಪ್ರದೇಶದಿಂದ ಅಮೆರಿಕಾ ಆಮದು ಮಾಡುವ ಕಚ್ಚಾತೈಲದ ಪ್ರಮಾಣಕ್ಕೆ ಹೋಲಿಸಿದರೆ ಅದು ಅಷ್ಟೊಂದು ಪಡೆಗಳನ್ನು ಅಲ್ಲಿಗೆ ಏಕೆ ಕಳುಹಿಸಬೇಕಾಗಿತ್ತು ಎಂಬುದಕ್ಕೆ ವಿವರಣೆಸಿಗುವುದಿಲ್ಲ. ಅದರ ತಂತ್ರ ಇನ್ನೂ ಆಳವಾಗಿದೆ. ಈ ಗಂಭೀರ ಸ್ಥಿತಿ ಬಹುರಾಷ್ಟ್ರೀಯ ಕಂಪೆನಿಗಳಿಗಂತೂ ವರದಾನವಾಗಿ ಬಿಟ್ಟಿದೆ. ಪೆಟ್ರೋಲ್ ಬೆಲೆಯೇರಿಸಿ ಲಾಭ ಸೂರೆಗೊಳ್ಳುತ್ತಿದ್ದಾರೆ ಅವರು.

ಕೊಲ್ಲಿಯ ಪರಿಸ್ಥಿತಿ ಭಾರತವನ್ನು ಕಠಿಣ ಸ್ಥಿತಿಗೆ ಈಡು ಮಾಡಿದೆ. ಪೆಟ್ರೋಲ್ ಮತ್ತು ಪೆಟ್ರೋಲಿಯಂ ಉತ್ಪನ್ನಗಳು ಇನ್ನು ಎಷ್ಟು ಸಮಯಕ್ಕೆ ಸಾಕೋ ಯಾರಿಗೂ ಗೊತ್ತಿಲ್ಲ. ಅಮೆರಿಕಾವಂತೂ ಯುದ್ಧ ಜ್ವಾಲೆ ಎಬ್ಬಿಸಲು ಸರ್ವತಯಾರಿ ನಡೆಸಿದಂತೆ ಕಾಣುತ್ತಿದೆ. ಶೀತಲ ಸಮರ ತಣ್ಣಗಾಗುತ್ತಿದ್ದಂತೆ ತನ್ನ ಮರಣಾಂತಿಕ ಶಸ್ತ್ರಾಸ್ತ್ರಗಳ ಸಂಗ್ರಹದ ವಿರುದ್ಧ, ಮಿಲಿಟರಿ ಬೂರ್ಜ್ವಾ ವಿರುದ್ಧ ತನ್ನ ದೇಶದಲ್ಲೇ ಹೆಚ್ಚುತ್ತಿರುವ ಸಾರ್ವಜನಿಕ ಆಕ್ರೋಶವನ್ನು ಬದಿಗೆ ತಳ್ಳಲು ಈ ಅವಕಾಶವನ್ನು ಬಳಸಿಕೊಳ್ಳುತ್ತಿದೆ.

ಸಾಮ್ರಾಜ್ಯಶಾಹಿ ಹಿಂದಿನಂತೆಯೇ ಈಗಲೂ ಇದೆ. ಅವಕಾಶ ಸಿಕ್ಕಿತೆಂದ ಕೂಡಲೇ ಅರಬ್ ನಾಡುಗಳಿಗೆ ನುಸುಳಿ ಬಿಟ್ಟಿದೆ. ಕೊಳ್ಳೆ ಹೊಡೆಯುವ ಆಕಾಂಕ್ಷೆ ತೃಪ್ತಿಯಾಗುವವರೆಗೆ ಅಲ್ಲಿಂದ ಕಾಲು ಕೀಳುವ ಉದ್ದೇಶವೇ ಅದಕ್ಕಿದ್ದಂತಿಲ್ಲ.

ಅರಬ್ ದೇಶಗಳೇ ಸ್ವತಃ ಈ ಸಮಸ್ಯೆಯ ಪರಿಹಾರಕ್ಕೆ ದಾರಿ ಕಂಡುಕೊಳ್ಳದಿದ್ದರೆ ಅಮೆರಿಕಾ ಅಂತರಾಷ್ಟ್ರೀಯ ಕಾವಲುಭಟ ಪೋಲೀಸ್ ನಾಯಿಯಾಗಿ ಅಲ್ಲೇ ನಿಂತಿರುತ್ತದೆ.

ಪಂಜಾಬ್ ಸಮಸ್ಯೆ ದಿಲ್ಲಿಯಲ್ಲಿ ಬೃಹತ್ ರ್‍ಯಾಲಿ

ಪಂಜಾಬ್ ಸಮಸ್ಯೆಗೆ ರಾಜಕೀಯ ಇತ್ಯರ್ಥ ಕಂಡುಕೊಳ್ಳಲು ತುರ್ತುಕ್ರಮಗಳನ್ನು ಕೈಗೊಳ್ಳುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸಲಿಕ್ಕಾಗಿಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷ ಮತ್ತು ಭಾರತ ಕಮ್ಯುನಿಸ್ಟ್ ಪಕ್ಷಗಳ ನೇತೃತ್ವದಲ್ಲಿ ದಿಲ್ಲಿಯಲ್ಲಿ ಆಗಸ್ಟ್ 27 ರಂದು ಬೃಹತ್ ರ್‍ಯಾಲಿಯೊಂದು ನಡೆಯಿತು.

ಭಯೋತ್ಪಾದಕರ ಬೆದರಿಕೆಗಳಿಗೂ ಜಗ್ಗದೆ ಜುಲೈ 27 ರಂದು ಚಂಡೀಗಢದಲ್ಲಿ ಉಭಯ ಪಕ್ಷಗಳು ನಡೆಸಿದ ರಾಜ್ಯ ಸಮಾವೇಶದಲ್ಲಿ ಈ ರ್‍ಯಾಲಿ ತೀರ್ಮಾನ ಕೈಗೊಳ್ಳಲಾಗಿತ್ತು.

ರಾಷ್ಟ್ರೀಯ ಐಕ್ಯತೆ- ಸಮಗ್ರತೆ ರಕ್ಷಣೆಗೆ ಪಣತೊಟ್ಟು ರ್‍ಯಾಲಿಗೆ ಬಂದ ದೇಶಪ್ರೇಮಿಗಳ ಸಂಖ್ಯೆ ಸುಮಾರು 50 ಸಾವಿರದಷ್ಟಿತ್ತು.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಇ.ಎಂ.ಎಸ್ ನಂಬೂದಿರಿಪಾದ್ , ಪಾಲಿಟ್‌ಬ್ಯುರೊ ಸದಸ್ಯ ಕಾಮ್ರೇಡ್ ಹರಿಕಿಷನ್ ಸಿಂಗ್ ಸುರ್ಜಿತ್ ಮತ್ತು ಸಿಪಿಐ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಇಂದ್ರಜಿತ್ ಗುಪ್ತಾ ರ್‍ಯಾಲಿಯಲ್ಲಿ ಭಾಗವಹಿಸಿದವರನ್ನುದ್ದೇಶಿಸಿ ಮಾತನಾಡಿದರು.

ಮಹಿಳಾ ಸಾಹಿತಿಗಳು ಮಿಡಿದಾಗ

ಹೆಣ್ಣು ಮಗುವಿನ ನೋವಿನ ಬಗ್ಗೆ ಚಿಂತಿಸಬೇಕೆಂದು ಮಾಸಲುಸ್ತಿರುವ ವರ್ಷವಿದು. ಕಥೆಯೊಂದರ ನಾಯಕಿ ಅಂಬಕ್ಕ ಮಾತ್ರವಲ್ಲ ಎಂ.ಕೆ.ಇಂದಿರಾರವರಂತಹ ಮಹಿಳೆಯರ ನೋವಿಗೆ ಮಿಡಿದ ಸಾಹಿತಿ ಶಿಕ್ಷಣವಂಚಿತರಾದವರ ಬಗೆಗೂ ನೀವು ಇಲ್ಲಿ ಓದುತ್ತೀರಿ. ತ್ರಿವೇಣಿಯವರ ಸಾಹಿತ್ಯದ ಒಂದು ಮೌಲ್ಯಮಾಪನವನ್ನು ಇಲ್ಲಿ ಕೊಟ್ಟಿದೆ. ಮಹಿಳೆಯರ ನೋವಿಗೆ ಮಿಡಿದ ಮಹಿಳಾ ಕವಿಗಳ ಕವನಗಳು ಈ ಸಂಚಿಕೆಯಲ್ಲಿ ಅಲ್ಲಲ್ಲಿ ಚೆದುರಿವೆ.

ಮಹಿಳೆಯರ ಪ್ರಶ್ನೆಗಳೂ ತ್ರಿವೇಣಿಯವರ ಕಾದಂಬರಿಗಳು

.......ಶೀಲ- ಪಾತಿವ್ರತ್ಯ, ತ್ಯಾಗ, ಮುಂತಾದ ಮೌಲ್ಯಗಳು ಹೆಣ್ಣಿಗೆ ಮಾತ್ರ ಅನ್ವಯಿಸಲ್ಪಡುವ ಸ್ಥಿತಿಯನ್ನು ತ್ರಿವೇಣಿ ಪ್ರಶ್ನಿಸಿದ್ದಾರೆ. ಪರಿಸ್ಥಿತಿಯ ವಶವಾಗಿ, ಶರೀರದ ಬಯಕೆಗಾಗಿ ಸಮಾಜದ ಸ್ವೀಕೃತ ದಾರಿತಪ್ಪಿ 'ಅಡ್ಡ' ಹಾದಿ ಹಿಡಿದ ಸ್ತ್ರೀಯರ ಸಮಸ್ಯೆಗಳನ್ನು ವಿಶ್ಲೇಷಿಸಲು ಯತ್ನಿಸುತ್ತವೆ. ಹರೆಯದಲ್ಲೇ ಪತಿಯ ಅಕಾಲಿಕ ಮರಣದಿಂದಾಗಿ ಕಿತ್ತು ತಿನ್ನುವ ಬಡತನದಿಂದಾಗಿ ವೇಶ್ಯೆಯಾಗುವ 'ಹೂವು' ಹಣ್ಣುವಿನ ರಮಾ, ಕಪ್ಪು ಬಣ್ಣದಿಂದಾಗಿ, ಬಡತನದಿಂದಾಗಿ ಮದುವೆಯ ಅವಕಾಶ ತಪ್ಪಿ ಒಬ್ಬ ಲಫಂಗನ ವಂಚನೆಯಿಂದ ಗರ್ಭಿಣಿಯಾಗಿ, ಶಿಶು ಹತ್ಯೆ ಮಾಡಿ ಜೈಲು ಸೇರುವ 'ಮೊದಲ ಹೆಜ್ಜೆ'ಯ ನಾಯಕಿ, ಕೌಟುಂಬಿಕ ಬದುಕಿನಲ್ಲಿ ಹುಟ್ಟಿದ ಲೈಂಗಿಕ ಅತೃಪ್ತಿಯಿಂದ ಹೊರಗೆ ಹೆಜ್ಜೆ ಹಾಕಿದ 'ಅವಳ ಮಗಳು'ವಿನ ವನಜಾ ಮತ್ತು 'ಸೋತುಗೆದ್ದವಳು'ವಿನ ನಾಯಕಿ ಭಾರತಿ, ವಿವಾಹ ಬಾಹಿರ ಪ್ರೇಮಕ್ಕೊಳಗಾದ 'ತಾವರೆಯ ಕೊಳದ ರತ್ನ ಇವರೆಲ್ಲರ ಬದುಕಿನ ಸಂದರ್ಭಗಳು ವಿಭಿನ್ನವಾಗಿರುವುದನ್ನು, ಮತ್ತು ಪರಿಸ್ಥಿತಿಯ ವಿವಶತೆ ಅವರ ದಾರಿ ಬದಲಾಗುವಂತೆ ಮಾಡುವುದನ್ನು ಸಮಾಜವು ಅವಹೇಳನಕರವಾಗಿ ನೋಡಬೇಕಾಗಿಲ್ಲವೆಂದೂ, ಇವರ ಪರಿಸ್ಥಿತಿಗಳು ಈ ರೀತಿಯಲ್ಲೇ ವರ್ತಿಸುವ ಪುರುಷರ ಸ್ಥಿತಿಗಳು ಹೇಗೋ ಅದೇ ಬಗೆಯ ಸಹಾನುಭೂತಿಗೆ ಒಳಗಾಗಬೇಕೆಂದೂ ಸಾಧಿಸುವ ಪ್ರಯತ್ನ ತ್ರಿವೇಣಿ ಮಾಡಿದ್ದಾರೆ. ಆದರೆ ಎಲ್ಲ ಸಮಸ್ಯಗಳಿಗೂ ಈ ರೀತಿ ಸ್ತ್ರೀಯರೇ 'ಬಲಿ'ಯಾಗುವುದರ ಹಿಂದಿರುವ ಸಾಮಾಜಿಕ ವ್ಯವಸ್ಥೆಯ ಮೂಲದಲ್ಲೇ ವಿಷಮತೆಯಿರುವುದನ್ನು ಅವರು ಗ್ರಹಿಸಲಾರರು. (ಶ್ರೀಮತಿ ಎನ್. ಗಾಯತ್ರಿ ಸಂಪಾದಿತ 'ತ್ರಿವೇಣಿ'ಯಲ್ಲಿ ಡಾ. ಬಿ.ಎನ್. ಸುಮಿತ್ರಾಬಾಯಿಯವರ ಲೇಖನದಿಂದ)

ಎಲ್ಲ ಸಮಸ್ಯೆಗಳಿಗೂ ಈ ರೀತಿ ಸ್ತ್ರೀಯರೇ 'ಬಲಿ'ಯಾಗುವುದರ ಹಿಂದಿರುವ ಸಾಮಾಜಿಕ ವ್ಯವಸ್ಥೆಯ ಮೂಲದಲ್ಲೇ ವಿಷಮತೆಯಿರುವುದನ್ನು ಅವರು ಗ್ರಹಿಸಲಾರರು.

ವಿಕ್ಷಿಪ್ತ

ಬಿ.ಎಸ್.ನಾಗರತ್ನಕುಮಾರಿ

ನನ್ನ ಹತ್ತು ಕವಿತೆಗಳನ್ನು ಕಿತ್ತುಕೊಟ್ಟೇನು
ಬಿಟ್ಟುಬಿಡಿ
ನಿಮ್ಮ ಒಪ್ಪೊತ್ತಿನ ಸಾರಿಗಾಗುವುದಿಲ್ಲ
ನಾನು
ನಿಮ್ಮೆಲ್ಲ ಕಣ್ಣುಗುಡ್ಡೆಗಳ ಒರೆಸುವ
ಜಿತ್ತು ಅರಿವೆಯಲ್ಲ
ಇಕ್ಕಿರ ಮಡಿಯನ್ನೇ ಮೂಸಿ
ಮೂಗಿಕ್ಕಿ ಮಹದಾನಂದ ಪಡುವ ನಿಮಗೆ
ಹಸುವಾಗಬಲ್ಲೆನೆ
ಆಡಾಗಬಲ್ಲೆನೆ
ಮೊಟ್ಟೆಯ ಕೋಳಿಯಾಗಬಲ್ಲೆನೆ
ಒಣಗಿದ ರೊಟ್ಟಿ ಕಡಿದಷ್ಟು ಸುಖ
ನಿಮಗಿಲ್ಲ

"ಫಣಿಯಮ್ಮ"ದ ಲೇಖಕಿ ಬರೆಯಲಾರಂಭಿಸಿದ್ದು 44 ನೇ ವಯಸ್ಸಿನಲ್ಲಿ!

ತುಂಗಭದ್ರ, ಸದಾನಂದ, ಫಣಿಯಮ್ಮ, ಗೆಜ್ಜೆಪೂಜೆ ಮುಂತಾದ ಕಾದಂಬರಿಗಳಿಂದ ಪ್ರಸಿದ್ಧರಾಗಿರುವ ಕನ್ನಡದ ಪ್ರಮುಖ ಲೇಖಕಿ, ಕಾದಂಬರಿಗಾರ್ತಿ ಎಂ.ಕೆ.ಇಂದಿರಾ ಬರೆಯಲು ಆರಂಭಿಸಿದ್ದು ತಮ್ಮ 44 ನೇ ವಯಸ್ಸಿನಲ್ಲಿ. ಮೊಮ್ಮಗ ಹುಟ್ಟಿದ ಮೇಲೆ. ಅದೂ ಆಕಸ್ಮಿಕವಾಗಿ.

1917 ರಲ್ಲಿ ಹುಟ್ಟಿದ ಇಂದಿರಾ ವಿದ್ಯಾಭ್ಯಾಸ ಮಿಡ್ಲ್ 2 ನೇ ತರಗತಿಗೇ ಮುಗಿಯಿತು. ಅವರ ಕ್ಲಾಸಿನಲ್ಲಿ ಇದ್ದವರು ಇಬ್ಬರು ಹುಡುಗಿಯರು ಮಾತ್ರ - ಇಂದಿರಾ ಯಾವಾಗಲೂ ತರಗತಿಗೆ ಮೊದಲು - ಶಾಲೆಯ ಪುಸ್ತಕ ಭಂಡಾರದಿಂದ ಬಂಕಿಮ ಚಂದ್ರ, ಈಶ್ವರ ಚಂದ್ರ ವಿದ್ಯಾಸಾಗರ, ಹರಿಶ್ಚಂದ್ರ, ರವೀಂದ್ರನಾಥ ಠಾಗೋರ್ - ಎಲ್ಲರ ಸಾಹಿತ್ಯವನ್ನು ಆಶ್ಚರ್ಯದಿಂದ, ಆನಂದದಿಂದ ಓದಿದ್ದವರು ಶಾಲೆಯ ಭಂಡಾರದಿಂದ ಇಷ್ಟು ಪುಸ್ತಕ ತೆಗೆದುಕೊಂಡು ಹೋಗಿ ಓದಿದ ಏಕ ಮಾತ್ರ ವಿದ್ಯಾರ್ಥಿನಿ ಇವರು. ಆದರೂ ಮಿಡ್ಲ್ 2 ನೇ ತರಗತಿಯ ಅನಂತರ ಎಷ್ಟು ಅತ್ತು ಕರೆದರೂ ತಂದೆ ಮುಂದೆ ಓದಿಸಲು ಒಪ್ಪಲಿಲ್ಲ.

1961-62 ರ ಸುಮಾರಿಗೆ ತೀರ್ಥಹಳ್ಳಿಯ ಸನಿಹದ ಬಂಧುವೊಬ್ಬರು ಮನೆಗೆ ಬಂದಾಗ ಬಾಲ್ಯದ ದಿನಗಳ, ನೆಂಟರಿಷ್ಟರ ಬಗ್ಗೆ ನೆನಪಿಸಿಕೊಳ್ಳುತ್ತಾ ಕುಳಿತಾಗ ಇದ್ದಕ್ಕಿದ್ದಂತೆ

.......ಶೀಲ- ಪಾತಿವ್ರತ್ಯ, ತ್ಯಾಗ, ಮುಂತಾದ ಮೌಲ್ಯಗಳು ಹೆಣ್ಣಿಗೆ ಮಾತ್ರ ಅನ್ವಯಿಸಲ್ಪಡುವ ಸ್ಥಿತಿಯನ್ನು ತ್ರಿವೇಣಿ ಪ್ರಶ್ನಿಸಿದ್ದಾರೆ.

ಎಂಜಲು ಗೋಮಯ ಮಾಡುತ್ತಾ

ಹಾಗೇ ಒಲೆಯ ಮುಂದೆ ಕುಕ್ಕುರು ಕೂತು, ಹಿಂದಕ್ಕೂ ಮುಂದಕ್ಕೂ ತೂಗುತ್ತಾರೆ. ಚಿಕ್ಕಂದಿನಲ್ಲಿ ಯಾವುದಕ್ಕೂ ಅವಕಾಶವಿರಲಿಲ್ಲ. ವಿದ್ಯೆ ಮುಂದುವರಿಸಲು ಆಶೆ. ಆದರೆ, ಹಡಾಣಿ ಅಮ್ಮನಲ್ಲಿ ಕೇಳಲು ಭಯವಾಗಿ ಅಪ್ಪನಲ್ಲಿ ಕೇಳಿದ್ದೆ. "ನನ್ನ ಹತ್ತಿರ ದುಗ್ಗಾಣಿಯಿಲ್ಲ. ಗಂಡುಮಗನ್ನೇ ಓದಿಸಕ್ಕೆ ಆಗ್ತಿಲ್ಲ.ನಿನಗೊಂದು ಮದುವೆ ಮಾಡೋದು ಈಗ ಬ್ರಹ್ಮಾಂಡದಷ್ಟಾಗಿದೆ" ಎಂದು ಬಿಟ್ಟಿದ್ದ.' ಅಪ್ಪ ಹೇಳಿದ್ದು ಸುಳ್ಳಾಗಿರಲಿಲ್ಲ. ಅಣ್ಣ ವೇದಾಂತನನ್ನು ಓದಿಸಲೇ, ಕಾಸಿಲ್ಲ. ಇನ್ನು ತನ್ನ ಭವಿಷ್ಯ? ಅಂಗೈ ನೆಲ್ಲಿಯಂತೆ ಸ್ಪಷ್ಟವಾಯಿತು. ಆದರೂ ಪಾಠ ಶಾಲೆಯ ಮೇಷ್ಟ್ರ ಎಂಜಲ ಗೋಮಯ ಮಾಡುತ್ತಾ, ಮಾಡುತ್ತಾ, ಹೆಚ್ಚು ಹೆಚ್ಚು ಓದಿದೆ. ಬಿ. ವೆಂಕಟಾಚಾರ್ಯರ, ಗಳಗನಾಥರ ಪುಸ್ತಕ ಓದುವಷ್ಟಾದೆ. ಅದಕ್ಕೆಲ್ಲಾ ಅಮ್ಮನ ಪ್ರೋತ್ಸಾಹವಿಲ್ಲದಿದ್ದರೂ ಅಪ್ಪಹಿಗ್ಗುತ್ತಿದ್ದ.

ಶ್ರೀಮತಿ ಕಮಲಾ ಹೆಮ್ಮಿಗೆಯವರ ಕಥಾ ಸಂಕಲನ 'ಮಾಘ ಮಾಸದ ದಿನ'ಕಿಂದ

ಸಂಸಾರ, ಸಮಾಜ ಮತ್ತು ನಾನು.

-ಮೀನಾಕ್ಷಿ ಹೆಂಗವಳ್ಳಿ

ವಿಚಿತ್ರ ಆದರೂ ನಿಜ
ಕ್ಕೆ
ಹಚ್ಚಬಹುದಾದ ಹಚ್ಚ ಹಸಿ ಮಾತು
ಗಳು ಇವು:
ಈ ಮನೆಗೆ ನಾನೇ ಒಡತಿ;
ನನ್ನ ಮನೆಯಲ್ಲಿ ನನ ಗಂಡನೂ .ರುವನು
ನನ್ನ ಮೈದುನ ನಾದಿನಿಯರೂ ಇರುವರು
ನಾನೂ ನನ್ನ ಗಂಡನೂ ಎರಡು ಗಾಲಿಗಳಿದ್ದಂತೆ
ಆದರೂ ಆತನೇ ನನಗೆ ಒಡೆಯ:
ಅವನ ಒಡಬುಟ್ಟಿದವರೇ ನನ ಕಣ್ಣು ಬಾಯಿಗಳು
(ಯಾಕೆಂದರೆ ನಾನು ಗೃಹಿಣಿ);
ಈ ಗಂಡ ಈ ಮಕ್ಕಳು ಈ ಮನೆಯ ನಂಟು
ಗಳಾಗಿ ದಿನಾ ದಿನಾ
ನಾ
ನು ಪಾತ್ರೆಗಳ ಬೆಳಗುವೆ
ಬಟ್ಟೆಗಳ ತೊಳೆಯುವೆ
ಬಾತ್‌ರೂಂಗೂ ಅಡಿಗೆ ಮನೆಗೂ
ಪಂದ್ಯಾಟ ಮಾಡುವೆ
ಗಂಡನಿಗೆ ಮಾಲೀಸು ಮಾಡಿ ಮನೆ
ಗೂ ಧೂಳು ಹೊಡೆಯುವೆ ಅನ್ನಿ
ತರಕಾರಿ ಹೆಚ್ಚುವೆ
ಗ್ಯಾಸು, ಸ್ಟೌ, ಪತ್ರ ಇತ್ಯಾದಿ
ಗಳ ಜತೆ ನನ್ನ ಬಳೆಯೂ ಸೇರಿ
ತುಟಿ ಮುಚ್ಚಿ ಮಾತು-ಕಥೆ
ಕಸ ಮುಸುರೆ ಗಲೀಜುಗಳ ಜತೆ ಕೆಲಹೊತ್ತು
ಹೊತ್ತು ಸರಸ ವಿರಸ ಮಧ್ಯದ ಬಿಡು
ವಲ್ಲಿ ನಾಲ್ವರ ದಿನಚರಿಯ ಮುಕ್ಕಾಲು
ಪಾಲು ಪನ್ನೀ ದೇಹದಲ್ಲಿ ಹೆಪ್ಪ ಗಟ್ಟಿ
ಪೇಪರು ರೇಡಿಯೋದ ಕಣ್ಣೆತ್ತಿ ನೋಡಿದಷ್ಟು ಜಡ
ತ್ವ. ತುರ್ತು ಪರಿಸ್ಥಿತಿ ಘೋಷಿಸದೆ ಪಕ್ಕಾ
ಗೃಹಬಂಧನ ಈ ಇಂಥ
ಏಕತಾನದ ಗಾಲಿಯೋದ ತುದಿ
ಯಲ್ಲಿ. ಕಾರ್ಖಾನೆಯಿಂದ ದಿನಾ ಖಾಲಿಯಾಗಿ ಬರುವ
ನ ಕೈ ಕಾಲು ಮುಖಕ್ಕೆ ನಗು ತುಂಬುವ
ಎಲ್ಲೆ
ಯಿಲ್ಲದ ನನ್ನ ಕೆಲಸಕ್ಕೆ ಪ್ರತಿಫಲ
ಎಲ್ಲಿ
ಕಾರ್ಖಾನೆಯ ಕ್ಯಾಷ್‌ಬಾಕ್ಸ್‌ನಲ್ಲೆ
ಬಂಡವಾಳ ಹೂಡಿದ ಸಾಹುಕಾರನ
ಒಳ ಜೇಬಿನಲ್ಲೆ ?

ನಾಲ್ಕು ದಶಕದ ಯೋಜಿತ ಬೆಳವಣಿಗೆಯ ನಂತರವೂ

ಮಹಿಳೆಯ ಆರ್ಥಿಕ ಸ್ಥಾನಮಾನದ ಕರಾಳ ವಾಸ್ತವತೆ

ಭಾರತದ ಮಹಿಳೆಯರಲ್ಲಿ 14% ಮಾತ್ರವೇ ಪೂರ್ಣ ಉದ್ಯೋಗದಲ್ಲಿದ್ದಾರೆ. ಇವರಲ್ಲಿ 83% ಕೃಷಿ ಮತ್ತು ಕಟ್ಟಡ ಕೆಲಸಗಾರರು 90% ಕ್ಕಿಂತಲೂ ಹೆಚ್ಚು ಅಸಂಘಟಿತ ವಲಯದಲ್ಲಿದ್ದಾರೆ. ಉದ್ಯೋಗ ವಿನಿಮಯ ಕಛೇರಿಗಳಲ್ಲಿ, ದಾಖಲಾದ ಮಹಿಳೆಯರಲ್ಲಿ 51 ಲಕ್ಷ ಮಂದಿ ಮ್ಯಾಟ್ರಿಕ್ ಶಿಕ್ಷಣ ಪಡೆದವರು. 75 ಶೇಕಡಾ ಮಹಿಳೆಯರು ಅನಕ್ಷರಸ್ಥರು. ಇದು ನಾಲ್ಕು ದಶಕಗಳ ನಂತರ ಮಹಿಳೆಯರ ಸ್ಥಾನಮಾನದ ಕರಾಳ ವಾಸ್ತವತೆ.

1971 ಮತ್ತು 1981 ರ ನಡುವೆ ಮಹಿಳಾ ಕೆಲಸಗಾರರ ಸಂಖ್ಯೆ ಸ್ವಲ್ಪ ಹೆಚ್ಚಿತು. ಆದರೆ ಈ ಹೆಚ್ಚಳ ಬಹುಪಾಲು ಕಂಡುಬಂದುದರ ಹಿಂದೆ ಮಹಿಳೆಯರ ಭಾಗವಹಿಸುವಿಕೆಯೇ ಇಲ್ಲದ ರಾಜ್ಯಗಳಲ್ಲಿ ಮತ್ತು ಅರೆ-ಉದ್ಯೋಗದ ಅಂದರೆ ವರ್ಷಕ್ಕೆ 183 ದಿನಗಳಿಗಿಂದ ಕಮ್ಮಿ ಕೆಲಸವಿರುವ ವಲಯಗಳಲ್ಲಿ ಈ ಹೆಚ್ಚಳ ಜಾಸ್ತಿ. ಪೂರ್ಣ ಕೆಲಸ ಅಂದರೆ ವರ್ಷದಲ್ಲಿ 183 ದಿನಗಳಿಗಿಂತ ಹೆಚ್ಚು ಕೆಲಸ ದೊರೆಯುವ ವಲಯಗಳಲ್ಲಿ ಈ ಹೆಚ್ಚಳ ಸುಮಾರಾಗಿ ನಗಣ್ಯ.

ಏಕೆ ಈ ರೀತಿ? ಅರೆ ಉದ್ಯೋಗದ ಹೆಚ್ಚಳ ಎಂದರೆ ವಾಸ್ತವವಾಗಿ ನಿರುದ್ಯೋಗದ ಹೆಚ್ಚಳವೇ? ಇನ್ನು ಕೃಷಿ ಕಾರ್ಮಿಕರಲ್ಲಿ ಮಹಿಳೆಯರ ಸಂಖ್ಯೆ ಏಕೆ ಹೆಚ್ಚಿದೆ? ಉತ್ತರ ಸ್ಪಷ್ಟ. ಗ್ರಾಮೀಣ ಜನಗಳ ಬಡತನ ಹೆಚ್ಚಳದ ಒತ್ತಡದಿಂದಾಗಿ. ಕೈಗಾರಿಕಾ ವಲಯದಲ್ಲಿ ಮಹಿಳೆಯರ ಪಾಲು ಅತೀ ಕಮ್ಮಿ. ಆಧುನಿಕ ಕೈಗಾರಿಕೆಗಳಲ್ಲೂ ಕಮ್ಮಿ. ಅವರ ಸಂಖ್ಯೆ ಸ್ವಲ್ಪ ಮಟ್ಟಿಗೆ ಹೆಚ್ಚಿರುವುದು ರೇಷ್ಮೆ, ಉಣ್ಣೆ, ಸಿಂಥೆಟಿಕ್ ನೂಲು ಕೈಗಾರಿಕೆಗಳಲ್ಲಿ, ಆಹಾರ ಸಂಸ್ಕರಣ ಉದ್ದಿಮೆಯಲ್ಲಿ. ಇಲ್ಲಿಯೂ ಶೋಷಣೆಯ ನೆರಳು ಸ್ಪಷ್ಟ. ಈ ವಲಯಗಳಲ್ಲಿ ಕೆಲಸಗಳನ್ನು ಕಾಂಟ್ರಾಕ್ಟ್ ಕೊಟ್ಟು ಮನೆಯಲ್ಲೇ ಮಾಡಿಸುವ ವ್ಯವಸ್ಥೆ ವ್ಯಾಪಕವಾಗುತ್ತಿದೆ. ಆದ್ದರಿಂದಲೇ ಮಹಿಳೆಯರ ಸಂಖ್ಯೆ ಹೆಚ್ಚಿದೆ. ಈ ಮೂಲಕ ಇದು ಮಹಿಳೆಯರನ್ನು ಪೂರ್ಣ ಪ್ರಮಾಣದ ಕಲಸಗಾರರ ಸ್ಥಾನಮಾನವನ್ನು ವಂಚಿಸಿದೆ!.

ಕೈಗಾರಿಕಾ ವಲಯದಲ್ಲಿ ಮಹಿಳೆಯರ ಪಾತ್ರ ಕಡಿಮೆಯಾಗಲು ಕಾರಣ ಸರ್ಕಾರದ ಆರ್ಥಿಕ ಧೋರಣೆಗಳು. ಬಹುಪಾಲು ಮಹಿಳೆಯರು ಕೆಲಸ ಮಾಡುತ್ತಿರುವುದು ಸಾಂಪ್ರದಾಯಿಕ ಉದ್ದಿಮೆಗಳಲ್ಲಿ. ಆ ಸರ್ಕಾರದ ಧೋರಣೆಗಳು ಇಂತಹ ಉದ್ದಿಮೆಗಳನ್ನು ಸಾಯಿಸಿ ಆಧುನಿಕ ಉದ್ದಿಮೆಗಳಿಗೆ ಪ್ರೋತ್ಸಾಹ ನೀಡಿದವು. ಅಭಿವೃದ್ಧಿ ವೇಗ ಹೆಚ್ಚಿಸಲು ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಲಾಯಿತು. ಈ ಆಧುನಿಕ ತಂತ್ರಜ್ಞಾನ ಶ್ರಮಿಕರ ಕಠಿಣ ಶ್ರಮದ ಹೊರೆ ಇಳಿಸುವ ಬದಲು ಮಹಿಳೆಯರನ್ನು ದೊಡ್ಡ ಪ್ರಮಾಣದಲ್ಲಿ ಉದ್ಯೋಗದಿಂದ ಹೊರತಳ್ಳುವ ಕೆಲಸ ಮಾಡಿತು. ಇದು ಅತ್ಯಂತ ಸ್ಪಷ್ಟವಾಗಿ ಕಂಡು ಬಂದಿರುವುದು ನಾರು, ಬೆಂಕಿಪೊಟ್ಟಣ, ಬೀಡಿ ಮತ್ತಿತರ ಕಡೆ. ಹತ್ತಿ ಬಟ್ಟೆ ವಲಯದಲ್ಲಿ 1974 ರಿಂದ 1981 ರ ನಡುವೆ 14 ಲಕ್ಷ ಮಹಿಳೆಯರು ಇದರಿಂದಾಗಿ ಕೆಲಸ ಕಳೆದುಕೊಂಡರು. ಇಲೆಕ್ಟ್ರಾನಿಕ್ಸ್, ಔಷಧಿ, ಭಾರೀ ಕಾರ್ಖಾನೆಗಳಲ್ಲಿ ಮಹಿಳೆಯರ ಪಾತ್ರ 50% ದಷ್ಟು ಕಡಿಮೆಯಾಗಿದೆಯೆಂದು ವರದಿಯಾಗಿದೆ.

ಮಹಿಳೆಯರ ಸರಾಸರಿ ಕೂಲಿ ಕೂಡಾ ಗಂಡಸರ ಅರ್ಧದಷ್ಟು ಎಂದು 1987 ರ ರಾಷ್ಟ್ರೀಯ ಸ್ಯಾಂಪಲ್ ಸರ್ವೇ ತಿಳಿಸುತ್ತದೆ.(ಕೋಷ್ಟಕ 2 ನೋಡಿ)

ಸಂಘಟಿತ ವಲಯದಲ್ಲಿ ಬಹುಪಾಲು ಮಹಿಳೆಯರು ಕೆಲಸ ಮಾಡುತ್ತಿರುವುದು ನಿಪುಣತೆ ಬೇಕಿಲ್ಲದ ಅಥವಾ ಅರೆ ನಿಪುಣ ಉದ್ಯೋಗಗಳಲ್ಲಿ. ಅಂದರೆ ಹೆಚ್ಚೆಚ್ಚು ಮಹಿಳಾ ಕಾರ್ಮಿಕರು ಕಡಿಮೆ ನಿಪುಣತೆಯ, ಕಡಿಮೆ ಸಂಬಳದ ಅತ್ಯಂತ ಅಭದ್ರವಾದ ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಕಾರಣ ಮಹಿಳೆಯರಿಗೂ ತರಬೇತಿ, ಸಾಕ್ಷರತೆ ನೀಡುವಲ್ಲಿ ಸರಕಾರದ ವಿಫಲತೆ.

ಮಹಿಳೆಯರೇ ಮುಖ್ಯಸ್ಥರಾಗಿರುವ ಕುಟುಂಬಗಳ ಸಂಖ್ಯೆ 30-35 ಶೇಕಡಾ ಇರುವಾಗ ಈ ವಿಫಲತೆ ಇನ್ನಷ್ಟು ಆಳವಾಗುತ್ತದೆ.

ಮಹಿಳೆಯರ ಸ್ಥಾನಮಾನ ಸುಧಾರಿಸಲು ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯದ ಭರವಸೆ ನೀಡುವುದು ಅಗತ್ಯ. ಇದು ಸಾಧ್ಯವಾಗಬೇಕಾದರೆ ಸರಕಾರದ ಸಾಮಾಜಿಕ ಧೋರಣೆಗಳ ಆದ್ಯತೆಗಳು, ಬದಲಾಗಬೇಕು. ಇಂತಹ ಒಂದು ರಾಜಕೀಯ ಇಚ್ಛಾಶಕ್ತಿ ಸದ್ಯದ ರಾಷ್ಟ್ರೀಯ ಸರಕಾರದಲ್ಲಿಯೂ ಇದೆಯೇ? ಕಾದು ನೋಡಬೇಕು.

ಕೋಷ್ಟಕ-1
ಕೆಲಸಗಾರರಲ್ಲಿ ಮಹಿಳೆಯರ ಪಾಲು
ಆಧಾರ: 1981 ರ ಜನಗಣತಿ

	ಗಂಡಸರು	ಹೆಂಗಸರು
ಗ್ರಾಮೀಣ	52.6%	16.00%
ನಗರ	48.5%	7.3%
ಒಟ್ಟು	51.6%	14.0%

ಕೋಷ್ಟಕ - 2
ಸರಾಸರಿ ದಿನ ಸಂಬಳ - 1983 ರಲ್ಲಿ
(ರೂಪಾಯಿಗಳಲ್ಲಿ)

ವಯೋಗುಂಪು	ಗ್ರಾಮೀಣ		ನಗರ	
	ಗಂಡಸರು	ಹೆಂಗಸರು	ಗಂಡಸರು	ಹೆಂಗಸರು
ನಿಯಮಿತ ಸಂಬಳದ ನೌಕರರು				
5-14 ವರ್ಷ	4.33	4.20	4.77	4.49
15-59 ವರ್ಷ	16.09	10.85	23.72	17.36
60 ವರ್ಷಕ್ಕೆಮೇಲೆ	9.21	4.30	17.65	7.99
ಅರೆಕಾಲಿಕ ಕೂಲಿಗಾರರು				
5-14 ವರ್ಷ	5.68	3.57	5.19	3.50
15-59 ವರ್ಷ	10.53	5.11	11.89	5.30
60 ವರ್ಷಕ್ಕೆ ಮೇಲ್ಪಟ್ಟು	9.35	3.77	9.94	4.65
ಎಲ್ಲಾ ವಯಸ್ಸಿನವರಲ್ಲಿ	10.27	4.89	11.09	5.29



ಹೆಣ್ಣು ಮಗುವಿನ

ವರ್ಷ

ಅನಕ್ಷರತೆ,

ಅನಾರೋಗ್ಯ

ನಿವಾರಣೆಗೆ

ಗಜ್ರಾಲಾ ಅಪರಾಧಿಗಳಿಗೆ ಕಠಿಣ ದಂಡನೆ ಅಗತ್ಯ-

ಉಡುಪಿಯ ಮಹಿಳೆಯರ ಒತ್ತಾಯ

ದೆಹಲಿಯಿಂದ 100 ಮೈಲು ದೂರದಲ್ಲಿ ಉತ್ತರ ಪ್ರದೇಶದ ಗಜ್ರಾಲ ಎಂಬಲ್ಲಿರುವ ಸೈಂಟ್ ಮೇರಿಸ್ ಕ್ರೈಸ್ತ ಸನ್ಯಾಸಿನಿಯವರ ಮೇಲೆ ತಾ. 13 ರ ಮಧ್ಯ ರಾತ್ರಿಯಲ್ಲಿ ನಡೆಸಲಾದ ದೌರ್ಜನ್ಯವನ್ನು ತೀವ್ರವಾಗಿ ಖಂಡಿಸುವ ನಿರ್ಣಯವನ್ನು 12-8-90 ರಂದು ಜರುಗಿದ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಉಡುಪಿ ತಾಲೂಕು ಸಂಘಟನಾ ಸಮಿತಿಯ ಸಭೆಯಲ್ಲಿ ಅಂಗೀಕರಿಸಲಾಯಿತು ಅಪರಾಧಿಗಳಿಗೆ ಕಠಿಣವಾದ ಸಜೆ ನೀಡುವಂತೆಯೂ ಕೇಂದ್ರ ಮತ್ತು ಉತ್ತರ ಪ್ರದೇಶದ ರಾಜ್ಯ ಸರಕಾರವನ್ನು ಒತ್ತಾಯಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಶ್ರೀಮತಿ ಗೋಪಿಯವರು ವಹಿಸಿದ್ದರು. ಶ್ರೀಮತಿಯರಾದ ಕಲ್ಯಾಣಿ, ಲಲಿತ ಭಂಡಾರಿ ಮತ್ತು ಕುಮಾರಿ ವಸಂತಿಯವರು ಮಾತನಾಡುತ್ತಾ ಸಂಘಟನೆ ಬಲಪಡಿಸುವ ಕುರಿತೂ ಸದಸ್ಯತನವನ್ನು ಸೇರಿಸುವ ಬಗ್ಗೆಯೂ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಸಪ್ಟೆಂಬರ್ 8 ಮತ್ತು 9 ರಂದು ಬೆಂಗಳೂರಿನಲ್ಲಿ ಜರುಗಲಿರುವ ರಾಜ್ಯಮಟ್ಟದ ಸಮ್ಮೇಳನವನ್ನು ಯಶಸ್ವಿಗೊಳಿಸುವಂತೆಯೂ ಉಡುಪಿಯಿಂದ ಪ್ರತಿನಿಧಿಗಳನ್ನು ಆರಿಸಲು ಸಮಾವೇಶವನ್ನು ಜರುಗಿಸುವಂತೆಯೂ ನಿರ್ಧರಿಸಲಾಯಿತು.

ನಾವು-ನೀವು ಈ ಥಳಕು ಬಳಕಿನ ರೇನು..........? ಸೀರೆ ಉಟ್ಟ

ಕೆ. ನೀಲಾ

ಆಗ ನಾನು(1987ರಲ್ಲಿ) ಒಂದು ಕಾರಖಾನೆಯಲ್ಲಿ ಇಂಗ್ಲಿಷ್ ಬೆರಳಚ್ಚುಗಾರ್ತಿಯಾಗಿ ಕೆಲಸ ಮಾಡುತ್ತಿದ್ದೆ. ಬಿಡುವಿನ ವೇಳೆಯಲ್ಲಿ ಓದು ಅಥವ ಬರವಣಿಗೆ ಮಾಡುತ್ತಿದ್ದೆ. ಯಾವುದೇ ಸಂಘಟನೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಮನೆಯ ಸಾಂಪ್ರದಾಯಿಕ ವಾತಾವರಣದ ಹಿಡಿತದ ಕಾರಣವಾಗಿ ಸಾಧ್ಯವಾಗಿರಲಿಲ್ಲ. ಹೀಗಾಗಿ ಮಹಿಳಾ ಸಂಘಟನೆಯಲ್ಲಿ ಪಾಲ್ಗೊಳ್ಳಬೇಕೆಂಬ ಉತ್ಕಟೇಚ್ಛೆ ಕೂಡ ಹಾಗೇ ಇತ್ತು. ಆದರೆ ಕಡೆಗೊಮ್ಮೆ ಸಂಘಟನೆಯಲ್ಲಿ ಧುಮುಕಲು ಹಲವಾರು ಘಟನೆಗಳು ನನ್ನ ಮನ ಮುಟ್ಟಿ-ತಟ್ಟಿ ಬಡಿದೆಬ್ಬಿಸಿದಾಗ ಸಾಧ್ಯವಾಯಿತು.

ಒಂದು ದಿನ ಇದ್ದಕ್ಕಿದ್ದಂತೆ ಮಂಠಾಳ ಎಂಬ ಊರಲ್ಲಿ ಭಾಗೀರಥಿ ಎಂಬ ನರ್ಸ್ ಬಲಾತ್ಕಾರಕ್ಕೊಳಗಾಗಿ ತದನಂತರ ಆತ್ಮಹತ್ಯೆ ಮಾಡಿಕೊಂಡಳೆಂಬ ಸುದ್ದಿ ಬಂದಿತು ಅಲ್ಲದೆ ಭಾಗೀರಥಿ ಎಂದ ಕೂಡಲೆ ಕುತೂಹಲ ಹೆಚ್ಚಾಗಿ ಇನ್ನಷ್ಟು ವಿಷಯ ಸಂಗ್ರಹಿಸಿದರೆ ಅವಳು ಕೂಗಳತೆಯವಳಾಗಿದ್ದಳು ಮತ್ತು ಬಸವಕಲ್ಯಾಣದಲ್ಲಿ ನಮ್ಮ ಮನೆಯ ಪಕ್ಕಕ್ಕೆ ಬಾಡಿಗೆಗೆ ಇದ್ದವಳೇ ಇವಳು ಎಂದು ತಿಳಿದು ಕುಪಿತಳಾದೆನು.

ಒಂದೆರಡು ದಿನದಲ್ಲಿಯೇ ಸಮುದಾಯ ಮತ್ತಿತರ ಪ್ರಗತಿಪರ ವಿಚಾರದವರು ಸೇರಿ 'ಭಾಗೀರಥಿ ಪ್ರಕರಣದ ಹೋರಾಟ ಸಮಿತಿ' ಎಂದು ರಚಿಸಿ ಬೀದರಿನ ಕೆಲವು ಮಹಿಳಾ ಮಂಡಳಿಗಳಿಗೂ ಆಹ್ವಾನಿಸಿದೆವು, ಆದರೆ ಇದೇ ಸಮಿತಿಯಲ್ಲಿ ಮೂವರು ಮಹಿಳೆಯರು ಬಿಟ್ಟರೆ ಪುರುಷರೇ ಇದ್ದರು.

ಭಾಗೀರಥಿ ಅಪ್ರತಿಮ ಚೆಲುವೆ. ಸ್ವಶಿಕ್ಷಣವನ್ನು ಕಟ್ಟಿಟ್ಟು ಬಲಾತ್ಕರಿಸಿದ್ದು ನಿಜ. ಆಮೇಲೆ ಅನೇಕ ಪಟ್ಟಭದ್ರರು ಸೇರಿ, ತಾವೂ ಭಾಗಿಯಾಗಿರುವುದರಿಂದ ಪ್ರಕರಣವನ್ನು ಮುಚ್ಚಿಡಲು ಪ್ರಯತ್ನಿಸಿ ಯಶಸ್ವಿಯಾದರು. ಈ ನರ್ಸಗಳೇ ಹೀಗೆ.... ಎಂದು ಹಲವಾರು ಜನ ಮೂಗು ಮುರಿದರು. ಕೂಗಳತೆಯ ಭಾಗೀರಥಿಯ ಹೆತ್ತವರು ಬರುವಷ್ಟರಲ್ಲೇ ಭಾಗೀರಥಿ ಚಿತೆಗಾಹುತಿಯಾಗಿದ್ದಳು. ಹೆತ್ತವರಿಗೆ ದುಡ್ಡು ಕೊಟ್ಟು ಬಾಯಿ ಮುಚ್ಚಿಸಲಾಯ್ತೆಂದು ವದಂತಿ ಕೇಳಿದೆವು.

ಈ ನಡುವೆ ನಮ್ಮ ಸಮಿತಿಯ ಎಂಟು ಜನರ ತಂಡವೊಂದು ಮಂಠಾಳಕ್ಕೆ ಪ್ರತ್ಯಕ್ಷ ಭೇಟಿ ನೀಡಿದ್ದಲ್ಲದೆ,ಪತ್ರಿಕೆಯಲ್ಲೆಲ್ಲಾ ಬೇಕಾದಷ್ಟು ಬರೆದೆವು. ಆದರೆ ಇನ್ನಿತರ ಒಂದೇ ಒಂದು ಸಂಘ-ಸಂಸ್ಥೆಗಳಿಂದ ಚಕಾರ ಶಬ್ದವೂ ಬರಲಿಲ್ಲ! ಈ ದೇಶದಲ್ಲಿ ಹೆಣ್ಣುಮಕ್ಕಳ ಮೇಲೆ ಏನೆಲ್ಲಾ ಅನ್ಯಾಯ ನಡೆದರೂ ಕೇಳುವವರು ಹೇಳುವವರಾರು ಇಲ್ಲವೆಂಬ ಅಳಲು ಛಲವಾಗಿ ಪರಿಣಮಿಸಿತು. ಮನೆಯಲ್ಲಿ ಹೋಗಬೇಡವೆಂದು ತಡೆ ಬಂದಾಗ ಪ್ರಥಮವಾಗಿ ಗದಿ

ನನ್ನ ಮನ ಮುಟ್ಟಿದ ಘಟನೆ

ನಾನು ಒಂದು ನೌಕರಸ್ಥ ಹೆಣ್ಣು 'ಎಂದು ಮನೆಯಲ್ಲಿಯೇ ಸಂಘರ್ಷಕ್ಕಿಳಿದು ನನ್ನಲ್ಲೇ ಗಟ್ಟಿಯಾಗತೊಡಗಿದ ಸುಮಾರು ಹದಿನೈದು ದಿವಸಗಳ ತರುವಾಯ ಬೀದರ್ ಜಿಲ್ಲಾ ನರ್ಸಗಳ ಸಂಘ ಒಂದು ಪ್ರತಿಭಟನಾ ಮೆರವಣಿಗೆ ಮಾಡಿದಾಗ ನಾವು ಅನೇಕ ಪ್ರತ್ಯಕ್ಷದರ್ಶಿಗಳನ್ನು ಸಂದರ್ಶಿಸಿದೆವು. ಭಾಗೀರಥಿ ಶವ ಪರೀಕ್ಷೆ ಸಮಯದಲ್ಲಿದ್ದ ನರ್ಸ್ ಕೂಡ 'ಹೌದು, ಭಾಗೀರಥಿ ಅತ್ಯಾಚಾರಕ್ಕೊಳಗಾಗಿದ್ದಳೆಂಬುದರಲ್ಲಿ ಸಂಶಯವಿಲ್ಲ!' ಎಂದು ಹೇಳಿದಳು. ನಾವು ಹೀಗೆ ವಿಚಾರಿಸಿಕೊಳ್ಳುತ್ತಿದ್ದಾಗ ಅವರಲ್ಲೇ ಅನೇಕರು ನಮ್ಮನ್ನು ಅನುಮಾನಾಸ್ಪದವಾಗಿ ನೋಡತೊಡಗಿದರು.

ಅಂದಿನ ನರ್ಸಗಳ ಪ್ರತಿಭಟನಾ ಮೆರವಣಿಗೆ ಕೂಡ ಸುದ್ದಿ ಮಾಡಿ ಮುಗಿಸುವ ಶಾಸ್ತ್ರದಂತಿತ್ತು. ಬಹುತೇಕ ನರ್ಸಗಳಲ್ಲಿ ಆ ಭೀಕರ ಘಟನೆ ಕುರಿತು ಕಿಂಚಿತ್ ಕಳ-ಕಳಿ ಕೂಡ ಇದ್ದಿರಲಿಲ್ಲ. ಮಹಿಳೆಯ ಕುರಿತು ಮಹಿಳೆಯೇ ಇಷ್ಟು ನಿರ್ಲಕ್ಷ್ಯ- ನಿಷ್ಠುರಳಾಗಲು ಅಸಂಘಟಿತರಾಗಿರುವುದೇ ಕಾರಣ ಎನಿಸಿತು. ಭಾಗೀರಥಿಯ ಸಾವಿನೊಂದಿಗೆ ನನ್ನೊಳಗಿನ ಭಯ, ಸಂಕೋಚ ಸಂಪ್ರದಾಯಕ್ಕೆ ಶರಣಾಗುವ ಮನೋಬುದ್ಧಿ ಒಂದೊಂದೆ ಕಳಚತೊಡಗಿತು.

ಕಳೆದ ವರ್ಷವೇ ಇನ್ನೊಂದು ತೀರ ನಾಚಿಕೆಗೇಡು ಮತ್ತು ಹೇಯ ಘಟನೆ ಒಂದು ನಡೆದು ಹೋಯ್ತು. ಕಮಲನಗರದ 60 ವರ್ಷ ವಯಸ್ಸಿನ ಮುನಿಯಮ್ಮಳನ್ನು ಆಂತರಿಕ ಜಗಳದಿಂದ ಸೇಡು ತೀರಿಸಿಕೊಳ್ಳಲು ನಡು ರಸ್ತೆಯ ಮೇಲೆ ಬೆತ್ತಲೆಗೊಳಿಸಲಾಯ್ತು. ಮಾತು ಮಾತಿಗೂ ಮಹಿಳೆಯನ್ನು ಬೆತ್ತಲೆಗೊಳಿಸಿ ಬೆದರಿಕೆ ಒಡ್ಡುವುದು ಅವಳು ಶೀಲಕ್ಕೆ ಹೆದರುವವಳೆಂದಲ್ಲವೇ....? ಮುನಿಯಮ್ಮಳ ಬೆತ್ತಲೆ ಪ್ರಕರಣ ನೆನದಾಗಲ್ಲ ಮೈ ಜುಮ್ಮೆನ್ನುತ್ತದೆ.

ಸೋದರಿಯರೇ,' ಮುನಿಯಮ್ಮಳ ಸೀರೆ ಕಿತ್ತೆಸೆದಾಗ ನಾವು-ನೀವು ಈ ಥಳಕು -ಬೆಳಕಿನ ಸೀರೆ ಉಟ್ಟರೇನು..........? ಸ್ತ್ರೀ ಕುಲವನ್ನೇ ಬೆತ್ತಲಾಗಿಸಿದಂತೆ. ಈ ಕೆಟ್ಟ ವ್ಯವಸ್ಥೆ ತೊಲಗಿಸಲು ಸೊಂಟ ಕಟ್ಟಿ ನಿಲ್ಲಬೇಕಿದೆ....' ಎನ್ನುವಾಗ ಗಂಟಲು ಗದ್ಗದಿತವಾಗಿ, ಭಾಗೀರಥಿ, ಮುನಿಯಮ್ಮ, ವರದಕ್ಷಿಣೆಯ ಭೂತಕ್ಕೆ ಬಲಿಯಾಗುತ್ತಿರುವ ಹಸಿ-ಹಸಿ ಹರೆಯದ ಹುಡುಗಿಯರು....ಹೀ.......ಗೇ..... ಕಣ್ಣಿಗೆ ಕಟ್ಟಿ ಮನ ಕಲಕಿಸುತ್ತಾರೆ.

ಸಂವೇದನಾಚಿತ್ತದಿಂದ ಕೆದಕುತ್ತಾ-ಬೆದಕುತ್ತಾ ಹೋದಂತೆ, ಹಜ್ಜೆ ಹೆಜ್ಜೆಗೂ ಸಂಭವಿಸುತ್ತಿರುವ ಅನೇಕಾನೇಕ ಘಟನೆಗಳು ಮನ ಮಿಡುಯುತ್ತವೆ, ಬಡಿದೆಬ್ಬಿಸುತ್ತವೆ. ಹೀಗೆಲ್ಲಾ ಘಟಿಸಿದಾಗ ನಮ್ಮಲ್ಲುಂಟಾದ ಮಿಡಿತ-ತುಡಿತ-ಬಡಿತ, ಆವೇಶ-ರೊಚ್ಚು-ಕೆಚ್ಚು-ಛಲಗಳು ಸರಿಯಾದ ದಿಟ್ಟದಲ್ಲಿ ರೂಪುಗೊಳಿಸಬೇಕಾದಲ್ಲಿ ಪ್ರಜಾಸತ್ತಾತ್ಮಕ ಧೋರಣೆಯುಳ್ಳ ಸಂಘಟಿತರಾಗಿ, ಸಂಘಟಿಸಬೇಕೆನ್ನುವುದು ನಾನು ಕಂಡುಕೊಂಡ ಸತ್ಯ.

ಸಂಸತ್ತಿನಲ್ಲಿ ನಮ್ಮವರು



ಸಮಾನ ದುಡಿತ ಆದರೂ ತುಳಿತ

ಸಿಪಿಐ(ಎಂ) ಮುಖಕ್ಕೆ ಮಸಿ ಬಳಿಯಲು ಯತ್ನಿಸಿದ್ದ ಕಾಂಗ್ರೆಸ್(ಐ) ಸದಸ್ಯರ ಮುಖಕ್ಕೆ ಮಂಗಳಾರತಿ ಆದ ಘಟನೆ ಸಂಸತ್ತಿನ ಅಧಿವೇಶನದ ಮೂರನೇ ವಾರದ ಮೊದಲ ದಿನ ರಾಜ್ಯ ಸಭೆಯಲ್ಲಿ ನಡೆಯಿತು. ಎರಡನೇ ವಾರದಲ್ಲಿ, ಕಾಂಗ್ರೆ ಸದಸ್ಯರು ಮಾಜಿ ಎಂ.ಪಿ. ಮಮತಾ ಬ್ಯಾನರ್ಜೀ ಸಿಪಿಐ(ಎಂ) ಹಲ್ಲೆಯಿಂದ ಸಾವಿಗೀಡಾದರು ಎಂದು ಆರೋಪಿಸಿದ್ದರು. (ಈ ಬಗೆಗಿನ ವಿವರಕ್ಕೆ ಬಾಕ್ಸ್ ನೋಡಿ)

ಆಗಸ್ಟ್ 20 ರಿಂದ 24 ರವರೆಗೆ ನಡೆದ ಕಲಾಪಗಳಲ್ಲಿ ಮಹಿಳೆಯರಿಗೆ ಅನೇಕ ವಿಷಯಗಳು ಪ್ರಸ್ತಾಪವಾದವು; ಬಿಸಿಬಿಸಿ ವಾಗ್ವಾದಕ್ಕೆ ಎಡೆ ಮಾಡಿತು. ಮಹಿಳಾ ಆಯೋಗಕ್ಕೆ ಸಂಸತ್ತಿನ ಅನುಮೋದನೆ ದೊರಕಿತು....

. ಹಿಂದಿನ ವಾರ ಮಮತಾ ಬ್ಯಾನರ್ಜೀ ಕೊಲೆಗೀಡಾದರೆಂದು ಸದನಕ್ಕೆ ಸುಳ್ಳು ಮಾಹಿತಿ ನೀಡಿದ್ದಕ್ಕಾಗಿ ರತ್ನಾಕರ ಪಾಂಡೆ ಕ್ಷಮೆ ಕೋರಬೇಕೆಂದು ಕಾಮ್ರೇಡ್ ಗುರುದಾಸ್ ಘೋಷ್ ಆಗ್ರಹಿಸಿದರು. ಕ್ಷಮೆ ಕೇಳುವ ಅಗತ್ಯವಿಲ್ಲ ಎಂದು ಕಾಂಗ್ರೆ ಸದಸ್ಯರು ವಾದಿಸಿದರು. ಆದರೆ ಇಂಥ ತಪ್ಪು ಮಾಹಿತಿಯನ್ನು ನೀಡಿದ ಸದಸ್ಯರ ಬಗ್ಗೆ ಕಾಂಗ್ರೆಸ್(ಐ)ಗೆ ನಾಚಿಕೆಯಾಗಬೇಕು ಎಂದು ಗುರುದಾಸ್ ಛೀಮಾರಿ ಹಾಕಿದರು. ಏನೇ ಆಗಲಿ ತಮ್ಮ ಪಕ್ಷದ ಸದಸ್ಯರಿಂದ ದೋಷ ಸಂಭವಿಸಿದೆ ಎಂದು ಕಾಂಗ್ರೆಸ ಎನ್.ಕೆ.ಪಿ.ಸಾಳ್ವೆ ಹೇಳಿದರು. ಕೊನೆಗೂ ಕ್ಷಮೆಯನ್ನು ಕೋರಿದರು. ಆದಾಗ್ಯೂ ಸಿಪಿಐ (ಎಂ) ನ ಎಂ.ಎ.ಬೇಬಿ ಅವರು, ರತ್ನಾಕರ ಪಾಂಡೆ ತಮ್ಮ ಸುಳ್ಳು ಸುದ್ದಿಯ ಮೂಲ ಯಾವುದೆಂದು ತಿಳಿಸಬೇಕೆಂದು ಆಗ್ರಹಿಸಿದರು.

ಮಹಿಳೆಯರ ಅಭಿವೃದ್ಧಿಗೆ, ಅವರ ಮಾನ ರಕ್ಷಣೆಗೆ ರಚನಾತ್ಮಕವಾಗಿ ಏನೂ ಮಾಡದಿರುವ ಕಾಂಗ್ರೆನವರು ಮಹಿಳೆಯೊಬ್ಬರನ್ನು ನೆಪವಾಗಿ ಮುಂದಿಟ್ಟುಕೊಂಡು ಇನ್ನೊಂದು ಪಕ್ಷದ ಘನತೆಗೆ ಕುಂದು ತರಲು ಹೊರಟಿದ್ದು ನಾಚಿಕೆಗೇಡಿನ ವಿಚಾರವಾಗಿದೆ. ಬೇರೆ ಪಕ್ಷಗಳ ಸದಸ್ಯರು ಕೂಡಾ ಈ ವಿಚಾರದಲ್ಲಿ ಕಾಂಗ್ರೆಯನ್ನು ತರಾಟೆಗೆ ತೆಗೆದುಕೊಂಡರು.

ಆಗಸ್ಟ್21: ಲೋಕಸಭೆಯಲ್ಲಿ ಪ್ರಸಾರ ಭಾರತಿ ಮಸೂದೆ ಅಂಗೀಕಾರವಾಗುವುದನ್ನು ವಿಳಂಬಿಸುವ ತಂತ್ರವಾಗಿ ಕಾಂಗ್ರೆನವರು ಒರಟು ವರ್ತನೆ ತೋರಿಸತೊಡಗಿದರು. ಮಹಿಳೆಯರ ಮೇಲಿನ ದೌರ್ಜನ್ಯಗಳ ಬಗ್ಗೆ ಇಂದೇ ಚರ್ಚೆ ನಡೆಯಬೇಕೆಂದು ಅವರ ಪಟ್ಟಾಗಿತ್ತು. ಆದರೆ ಗೊತ್ತುವಳಿ ಮಂಡಿಸಿದ ತಮ್ಮ ವಿನಂತಿ ಮೇರೆಗೆ ಅದನ್ನು ಬುಧವಾರಕ್ಕೆ ಮುಂದೂಡಲಾಗಿದೆ ಎಂದು ಸಿಪಿಐನ ಗೀತಾ ಮುಖರ್ಜಿ ಹೇಳತೊಡಗಿದಾಗ ಕಾಂಗ್ರೆನ ಕೆಲವರು ಅವರ ಮಾತು ಮುಂದುವರಿಸಲು ಅಡ್ಡಿ ಪಡಿಸತೊಡಗಿದರು. ಆಗ ಕಾಮ್ರೇಡ್ ಸುಭಾಷಿಣಿ ಅಲಿಯವರು ಗೀತಾರ ಬೆಂಬಲಕ್ಕೆ ಧಾವಿಸಿದರು. ಕೇವಲ ಕೆಲವೇ ದಿನಗಳ ಹಿಂದೆ ರಾಷ್ಟ್ರೀಯ ಮಹಿಳಾ ಆಯೋಗದ ಮಸೂದೆ ಬಗ್ಗೆ ಚರ್ಚಿಸಲು ಸಂಜೆ 6 ಗಂಟೆಯ ನಂತರವೂ ಕುಳಿತುಕೊಳ್ಳಲು ಕಾಂಗ್ರೆ ಸದಸ್ಯರು ನಿರಾಕರಿಸಿದ್ದನ್ನು ಸುಭಾಷಿಣಿ ಅಲಿಯವರು ನೆನಪಿಗೆ ತಂದರು. ಈಗ ಮಹಿಳೆಯರ ಹಿತರಕ್ಷಕರಂತೆ ವರ್ತಿಸುತ್ತಿದ್ದಾರೆ ಎಂದು ಟೀಕಿಸಿದರು. ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆ ಸಿಪಿಐ(ಎಂ)ಗೆ ಕಳವಳವಿದೆ. ಆದರೆ ಅದನ್ನು ಪ್ರತಿಪಕ್ಷ ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಬಿಡದು ಎಂದು ಅವರು ನುಡಿದರು.

ಮಹಿಳೆಯರ ಮೇಲಿನ ದೌರ್ಜನ್ಯಗಳ ಬಗ್ಗೆ ಕಾಂಗ್ರೆಗ ನಿಜವಾಗಿಯೂ ಕಳಕಳಿಯಿದ್ದರೆ ಆ ಕುರಿತು ಚರ್ಚಿಸಲು ಸದನದ ಕೂಟ ಸಂಜೆಯ ನಂತರವೂ ಮುಂದುವರಿಯಬಹುದು ಎಂದು ಸಿಪಿಐ(ಎಂ)ನ ಸೋಮನಾಥ ಚಟರ್ಜೀ ಹೇಳಿದರು.

ಬಹುತೇಕ ಎಲ್ಲಾ ಪಕ್ಷಗಳ ಸದಸ್ಯರು ಇದೇ ನಿಲುವನ್ನು ತಳೆದಿದ್ದರಿಂದ ಕಾಂಗ್ರೆಸವರು ಪ್ರತ್ಯೇಕಗೊಂಡಂತೆ ಕಂಡಿತು. ಸರಕಾರಕ್ಕೆ 'ರಚನಾತ್ಮಕ ಸಹಕಾರ' ನೀಡುವ ಭರವಸೆಯನ್ನು ಕಾಂಗ್ರೆ ಉಳಿಸಿಕೊಳ್ಳುತ್ತಿಲ್ಲ ಎಂದು ಸೋಮನಾಥ ಚಟರ್ಜೀ ಆರೋಪಿಸಿದರು.

ಆಗಸ್ಟ್ 23: ಮಹಿಳಾ ಆಯೋಗಕ್ಕೆ ಅಸ್ತು

; ರಾಷ್ಟ್ರೀಯ ಮಹಿಳಾ ಆಯೋಗ ಸ್ಥಾಪಿಸುವುದಕ್ಕೆ ಇಂದು ಸಂಸತ್ತು ಅನುಮೋದನೆಯ ಮುದ್ರೆ ಒತ್ತಿತು. ಈಗಾಗಲೇ ಲೋಕಸಭೆ ಅಂಗೀಕರಿಸಿರುವ ಈ ಮಸೂದೆಗೆ ರಾಜ್ಯಸಭೆ ಇಂದು ಒಪ್ಪಿಗೆ ನೀಡಿತು. ಮಸೂದೆಯನ್ನು ಉಭಯಸದನದಲ್ಲಿ ಸಿಪಿಐ(ಎಂ) ಸದಸ್ಯರು ಬೆಂಬಲಿಸಿದ್ದನ್ನು ನೆನಪಿಸಬಹುದು.

ಆಗಸ್ಟ್ 25: ಲೋಕಸಭೆ ಮಂಡಲ್ ಆಯೋಗದ ವರದಿಯ ಜಾರಿ ಕುರಿತು ಪ್ರಧಾನಿಯವರ ಘೋಷಣೆಯ ನಂತರ ದೇಶಾದ್ಯಂತ ಮೀಸಲಾತಿ ವಿರೋಧಿ ಚಳವಳಿ ಹೊಸ ರೂಪ ತಾಳಿದೆ. ಜನರ ಏಕತೆ ಮುರಿಯುವ ಶಕ್ತಿಗಳಿಗೆ ಹೊಸ ಅಸ್ತ್ರ ಒದಗಿಸಿದಂತಾಗಿದೆ.

ಈ ಹಿನ್ನಲೆಯಲ್ಲಿ, ಮೀಸಲಾತಿ ಬಗ್ಗೆ ರಾಷ್ಟ್ರೀಯ ಸಹಮತವೊಂದನ್ನು ರೂಪಿಸಲು ಎಲ್ಲಾ ಪಕ್ಷಗಳ ಸಭೆ ಕರೆಯಬೇಕೆಂದು ಸಿಪಿಐ ಸದಸ್ಯರ ನಿಲುವನ್ನು ಸೈಫುದ್ದೀನ್ ಚೌಧುರಿ ಸ್ಪಷ್ಟೀಕರಿಸಿದರು. ಸೂಕ್ತ ವಾತಾವರಣದಲ್ಲಿ ಸೂಕ್ತ ಚರ್ಚೆಯ ಮೂಲಕ ಸಹಮತ ಕಂಡುಕೊಳ್ಳೋಣ ಎಂದು ಸೋಮನಾಥ ಚಟರ್ಜೀ ಹೇಳಿದರು.

> ಕಾಂಗ್ರೆಸ್ (ಐ) ನವರು ಪಶ್ಚಿಮ ಬಂಗಾಳದಲ್ಲಿ ಸಿ.ಪಿ.ಐ(ಎಂ)ನೇತೃತ್ವದ ಎಡರಂಗವನ್ನು ಉರುಳಿಸಲು 'ತಲೆಕೆಳಗೆ ಕಾಲ್ ಮೇಲೆ' ಕುಸ್ತಿ ಮಾಡುತ್ತಿದ್ದು ಆ. ೧೬ ರಂದು ೧೨ ಗಂಟೆಗಳ ಕಲ್ಕತ್ತ ಬಂದ್ ಆಯೋಜಿಸಿತ್ತು.
>
> ಆ. ೧೭ ರಂದು ರಾಜ್ಯಸಭೆಯಲ್ಲಿ ಆ ವಿಚಾರ ಪ್ರಸ್ತಾಪಕ್ಕೆ ಬಂತು. ಹೇಗೆ ಗೊತ್ತಾ? ಬಂದ್ ಸಂದರ್ಭದಲ್ಲಿ ಸಿ.ಪಿ.ಐ(ಎಂ) ನವರ ಹಲ್ಲೆಗೆ ಒಳಗಾದ ಲೋಕಸಭೆಯ ಮಾಜಿ ಸದಸ್ಯೆ ಮಮತಾ ಬ್ಯಾನರ್ಜೀ ಅವರು ಇಂದು ಮಧ್ಯಾಹ್ನ ೧.30 ಕ್ಕೆ ಆಸ್ಪತ್ರೆಯಲ್ಲಿ 'ನಿಧನರಾದರು' ಎಂದು ಕಾಂಗ್ರೆ ಸದಸ್ಯರೊಬ್ಬರು ಹೇಳಿದರು. ಅದೇ ದಿನ ಲೋಕಸಭೆಯಲ್ಲಿ ಕೂಡ ಕಾಂಗ್ರೆನವರು ಇದನ್ನು ಪ್ರಸ್ತಾಪಿಸಿದರು. ತಾವು ಮುಖ್ಯಮಂತ್ರಿ ಜ್ಯೋತಿಬಸುರೊಂದಿಗೆ ಫೋನಿನಲ್ಲಿ ಮಾತನಾಡಿದ ಸಂಸದೀಯ ವ್ಯವಹಾರಗಳ ಸಚಿವ ಪಿ.ಉಪೇಂದ್ರ ಸದನಕ್ಕೆ ತಿಳಿಸಿದರು.

ಬಾಯಲ್ಲಿ ತಾಯಿಯೇ ದೇವರು' ಆದರೆ, ಚಿತೆಗೆ ವಿಧವೆ

'ತಾಯಿಯೇ ದೇವರು' ಎಂದು ಬೋಧನೆ ಮಾಡುವ ಭಾರತೀಯ ಜನತಾ ಪಕ್ಷದ ಉಪಾಧ್ಯಕ್ಷೆ, ಸಂಸತ್ ಸದಸ್ಯೆ ವಿಜಯರಾಜೇ ಸಿಂಧ್ಯಾ ಅವರು ವಿಧವೆಯನ್ನು ಪತಿಯ ಚಿತೆಗೆ ದೂಡುವ ಅನಾಗರೀಯ 'ಸತಿ' ಪದ್ಧತಿಯನ್ನು ಬೆಂಬಲಿಸುತ್ತಿರುವ ವಿಷಯ ರಾಜ್ಯಸಭೆಯಲ್ಲಿ ಪ್ರಸ್ತಾಪಕ್ಕೆ ಬಂದಿತ್ತು. ಸತಿಯನ್ನು ನಿಷೇಧಿಸಿ ಸರಕಾರ ಕಾನೂನು ಮಾಡಿದಾಗ ಕೂಡ ಸತಿಯನ್ನು ಸಮರ್ಥಿಸುವ ಸಂಸತ್ ಸದಸ್ಯೆಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು [illegible] ಪ್ರಸ್ತಾಪಿಸಿ ಸಿಪಿಐನ ಗುರುದಾಸ್ [illegible] ಗುಪ್ತ ಒತ್ತಾಯಿಸಿದರು. [illegible] ಪಕ್ಷಗಳ ಸದಸ್ಯರು ಬೆಂಬಲಿಸಿದರು.

ಕರ್ನಾಟಕದ ಪ್ರಜಾಸತ್ತಾತ್ಮಕ ಚಳುವಳಿ ಮತ್ತು ಮಹಿಳೆ

ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳಿಗಾಗಿ, ದೇಶದಲ್ಲ ಜನರ ಸಮಾನತೆಗಾಗಿ ಹೋರಾಟ ಗರಿಕಟ್ಟತೊಡಗಿದಾಗ ಮಹಿಳಾ ಸಮುದಾಯವೂ ಅದರಲ್ಲಿ ಧುಮುಕಿತು.

ಪಾಳೆಯಗಾರಿ ನೊಗವನ್ನು, ಅದರ ಮೇಲೆ ಹೇರಿಕೊಂಡಿದ್ದ ಬ್ರಿಟಿಷ್ ಸಿವಾರದನ್ನು ಕಿತ್ತೊಗೆದು ಪ್ರಜಾಸತ್ತೆಯತ್ತ ಇಡೀ ದೇಶವೇ ಧಾವಿಸುವ ಆ ಮಹಾನ್ ಸಾಮೂಹಿಕ ಚಲನೆ ತನ್ನರ್ಧ ಭಾಗವಾದ ಮಹಿಳೆಯರನ್ನು ಒಳಗೊಳ್ಳದೆ ವಿಧಿಯಿರಲಿಲ್ಲ. ಇದಕ್ಕಾಗಿ ಅವರ ಮೇಲೆ ಪಾಳೆಯಗಾರಿ ಸಮಾಜ ಹಾಕಿದ ಸಂಕೋಲೆಗಳನ್ನು ಒಂದೊಂದಾಗಿ ಕಡಿದೊಗೆದು ಅವರನ್ನು ಆಧುನಿಕ ಸಮಾಜದತ್ತ ಕೊಂಡೊಯ್ಯಲನುವಾಗುವ ಸಮಾಜ ಸುಧಾರಣೆಗಳಿಂದಲೇ- ಬಾಲ್ಯ ವಿವಾಹ, ಸತಿ, ವಿರುದ್ಧ ಸಮರಸಾರುವುದರಿಂದ, ವಿಧವಾ ವಿವಾಹ, ಮಹಿಳೆಯರ ಶಿಕ್ಷಣಕ್ಕಾಗಿ ನಿರಂತರ ಶ್ರಮಿಸುವುದರಿಂದಲೇ ಈ ಮಹಾನ್ ಚಲನೆ ಆರಂಭವಾಯಿತು.

ಬಂಗಾಲದಲ್ಲಿ ಆರಂಭವಾದ ಈ ಸಮಾಜಸುಧಾರಣೆಯಿಂದ ಆರಂಭವಾಗಿ ಸ್ವಾತಂತ್ರ್ಯಹೋರಾಟದಲ್ಲಿ ಕೊನೆಗೊಂಡ ಮೊದಲ ಘಟ್ಟದ ಹೋರಾಟ ಹಾಗೂ ಸ್ವಾತಂತ್ರ್ಯ ನಂತರದಲ್ಲಿ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ನಡೆಯುತ್ತಿರುವ ಚಳುವಳಿ ಮಹಿಳೆಯರ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ನಡೆದ ಚಳುವಳಿ ಕರ್ನಾಟಕದಲ್ಲಿ ಪ್ರತಿಫಲಿತವಾದ ಬಗೆ ಹೇಗೆ?

ಇದು ಕರ್ನಾಟಕದಲ್ಲಿ ಮಹಿಳೆಯರ ಪ್ರಜಾಸತ್ತಾತ್ಮಕ ಚಳುವಳಿಯನ್ನು ಬೆಳೆಸಬೇಕೆನ್ನುವವರೆಲ್ಲರೂ, ಕರ್ನಾಟಕದಲ್ಲಿ ಇಂದಿಗೂ ಉಳಿದಿರುವ ಪಾಳೆಯಗಾರಿ ಅವಶೇಷಗಳ ವಿರುದ್ಧ ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ಹೋರಾಡಬೇಕೆನ್ನುವವರೆಲ್ಲರೂ ಎದುರಿಸಬೇಕಾದ ಅನಿವಾರ್ಯವಾದ ಪ್ರಶ್ನೆ.

ಭಾರತದ ಪುನರುತ್ಥಾನ-ನವೋದಯ (Renaissance ಎಂದೆಲ್ಲಾ ಕರೆಯಲಾದ ಸಮಾಜದಸುಧಾರಣಾ ಚಳವಳಿ ಬಂಗಾಲದಲ್ಲಿ 18 ನೇ ಶತಮಾನದಲ್ಲಿಯೇ ಆರಂಭವಾಯಿತು. 'ಸತಿ' ಯ ವಿರುದ್ಧ ರಾಜಾರಾಮ ಮೋಹನರಾಯ್‌ರವರು ಖಡ್ಗ ಝಳಪಿಸಿದರು. ಈಶ್ವರಚಂದ್ರ ವಿದ್ಯಾಸಾಗರ್ , ಕೇಶವ್ ಚಂದ್ರ ಸೇನ್, ದೇವೇಂದ್ರನಾಥ ಠಾಕೂರ್‌ರಂತವರು ಸ್ತ್ರೀ ಶಿಕ್ಷಣಕ್ಕಾಗಿ, ವಿಧವಾ ವಿವಾಹಕ್ಕಾಗಿ, ಬಾಲ್ಯವಿವಾಹದ ವಿರುದ್ಧ ಕಾಳಗ ಹೂಡಿದರು. ಇಡೀ ಬಂಗಾಲ ವಿಚಾರಗಳ ಸಂಘರ್ಷದ ರಂಗವಾಯಿತು.- ಅಲ್ಲಿ ಬ್ರಹ್ಮ ಸಮಾಜವೆಂಬ ಹೊಸ ಚಳುವಳಿಯೇ ಆರಂಭವಾದರೆ ಮಹಾರಾಷ್ಟ್ರದಲ್ಲಿ' ಪ್ರಾರ್ಥನಾ ಸಮಾಜ', ಗೋಖಲೆ, ರಾನಡೆ ಮೊದಲಾದವರ ಧುರೀಣತ್ವದಲ್ಲಿ ವಿವಿಧ ತೀಕ್ಷ್ಣತೆಯ ಸಮಾಜ ಸುಧಾರಣೆ ಆರಂಭವಾಯಿತು. ಕೇರಳದಲ್ಲಿ ನಂಬೂದರಿಗಳಿಂದ ಹಿಡಿದು 'ಎಳವ' ಸಮಾಜದವರೆಗೂ ಸುಧಾರಣೆಯ ಗಾಳಿ ಬೀಸಿತು. ಆಂಧ್ರದಲ್ಲಿ ವಿಜಯವಾದ ಕೇಂದ್ರವಾಗಿಟ್ಟುಕೊಂಡು ವೀರೇಶಲಿಂಗಂ ಪಂತುಲು ಇವರ ನೇತೃತ್ವದಲ್ಲಿ ಸಮಾಜಸುಧಾರಣೆ ಆರಂಭವಾಯಿತು.ತಮಿಳುನಾಡಿನಲ್ಲಿ ಈ ಮಟ್ಟದಲ್ಲಿಲ್ಲದಿದ್ದರೂ ಸಮಾಜಸುಧಾರಣೆಯ ಗಾಳಿ ಜಾತೀಯತೆಯ ವಿರುದ್ಧ ಹೋರಾಟ ಅಲ್ಲಿಯೂ ವ್ಯಾಪಿಸಿದೆ.

ಆದರೆ, ಕರ್ನಾಟಕದಲ್ಲಿ ?

ಈ ಸಮಾಜದ ಈ ಎಲ್ಲಾ ಸುಧಾರಕ ಚಳುವಳಿಗಳೂ ಅಂಚನ್ನು ಮುಟ್ಟಿದುವೇ ಹೊರತು ಸಮಾಜದಲ್ಲಿ ಅಲ್ಲೋಲಕಲ್ಲೋಲವೆಬ್ಬಿಸುವ ಧಾಳಿಯೆಸಗಲಿಲ್ಲ, ಹಳೆಯ ವಿಚಾರಗಳನ್ನು ಪ್ರಶ್ನಿಸಲಿಲ್ಲ.

ಸಮಾಜಸುಧಾರಣೆಯಿಂದ ಆರಂಭವಾಗಿ ಸ್ವಾತಂತ್ರ್ಯಹೋರಾಟದಲ್ಲಿ ಕೊನೆಗೊಂಡ ಮೊದಲ ಘಟ್ಟದ ಹೋರಾಟ ಹಾಗೂ ಸ್ವಾತಂತ್ರ್ಯ ನಂತರದಲ್ಲಿ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ನಡೆಯುತ್ತಿರುವ ಚಳುವಳಿ ಮಹಿಳೆಯರ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ನಡೆದ ಚಳುವಳಿ ಕರ್ನಾಟಕದಲ್ಲಿ ಪ್ರತಿಫಲಿತವಾದ ಬಗೆ ಹೇಗೆ?

ಹೀಗಾಗಿ ಪಾಳೆಯಗಾರಿ ಹಿಡಿತದಿಂದ ಮಹಿಳೆಯರ ಮುಕ್ತಿಯಾಗದೆ- ಬಾಲಕಿಯರು ಬಾಲ್ಯವಿವಾಹದ ಬಂಧನದಿಂದ ಬಿಡುಗಡೆಯಾಗದೆ ಸ್ತ್ರೀಶಿಕ್ಷಣಕ್ಕಾಗಿ ಚಳುವಳಿಯೊಂದು ರೂಪುಗೊಂಡು ಜನರ ಮನಸ್ಸನ್ನು ಹದಗೊಳಿಸದೆ ವ್ಯಾಪಕ ಶಿಕ್ಷಣ ಸಿಗುವ ಸಾಧ್ಯತೆಗಳಿರಲಿಲ್ಲ. ಮೈಸೂರಿನ ಮಹಾರಾಜರೋ, ಬ್ರಿಟಿಷ್ ಸರ್ಕಾರವೋ ತಾವೇ 'ಉದಾರವಾಗಿ' ಆರಂಭಿಸಿದ ಬಾಲಕಿಯರ ಶಾಲೆಗಳಿಗೆ ಮಾತ್ರ ಮಹಿಳೆಯರ ಶಿಕ್ಷಣ ಸೀಮಿತವಾಗಿತ್ತು. ಇದಕ್ಕೊಂದು ಉದಾಹರಣೆ ಬಾಂಬೆ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ 1920-30ದಶಕಗಳಲ್ಲಿ 220-280 ವಿದ್ಯಾರ್ಥಿನಿಯರು ಮಾತ್ರ ಪ್ರಾಥಮಿಕ ಶಾಲೆಗಳಲ್ಲಿದ್ದರು.

ವೀರಶೈವ ಮಹಾ ಸಭಾ (1916), ಒಕ್ಕಲಿಗರ ಸಂಘ ಇತ್ಯಾದಿ ವಿವಿಧ ಜಾತಿಗಳ ಹೆಸರಿನಲ್ಲಿ ಆರಂಭವಾದ ಚಳುವಳಿ ಬಹಳ ಕ್ಷೀಣವಾಗಿ ಈ ಕಡೆಗೆ ಗಮನ ಹರಿಸಿದ್ದವಷ್ಟೆ.

ವಿಶೇಷ ಗಮನ ನೀಡಲೇಬೇಕು

ಹರ್ಯಾಣ, ಜಮ್ಮು-ಕಾಶ್ಮೀರ, ಉತ್ತರ ಪ್ರದೇಶ ಮತ್ತು ಕರ್ನಾಟಕ ಇತ್ಯಾದಿ ಮಹಿಳಾ ಸಂಘಟನೆ ಇಲ್ಲದ ಅಥವಾ ಅತ್ಯಲ್ಪ ಸದಸ್ಯತ್ವವುಳ್ಳ ರಾಜ್ಯಗಳಲ್ಲಿ ಪಾರ್ಟಿ ಸಮಿತಿಗಳು ಮಹಿಳಾ ಸಂಘಟನೆ ಬೆಳೆಸಲು ವಿಶೇಷ ಗಮನ ನೀಡಲೇಬೇಕು.

- ಸಿ.ಪಿ.ಐ.(ಎಂ) ನ ಹನ್ನೆರಡನೇ
ಮಹಾಧಿವೇಶನ (ಡಿಸೆಂಬರ್ 25-30, 1985, ಕಲ್ಕತ್ತಾ
ರಾಜಕೀಯ-ಸಂಘಟನಾ ವರದಿಯಲ್ಲಿ,
ಮಹಿಳಾ ರಂಗದಲ್ಲಿ, ಪಕ್ಷದಸಂಘಟನಾತ್ಮಕ
ಕರ್ತವ್ಯ ಕುರಿತು ಹೇಳುತ್ತಾ.

ಹೀಗೆ ಪ್ರಜಾಸತ್ತಾತ್ಮಕ ಚಳುವಳಿಯ ಒಂದು ಮುಖ್ಯ ಮಜಲಾದ ಸುಧಾರಕ ಚಳುವಳಿ ಕರ್ನಾಟಕದಲ್ಲಿ ಕಾವೇರಲೇ ಇಲ್ಲ. ಇದು ಇಂದಿಗೂ ಮಹಿಳೆಯರ ಚಳುವಳಿಯ ಬೆಳವಣಿಗೆಯಲ್ಲಿ ಒಂದು ದೊಡ್ಡ ಅಡ್ಡಿಯಾಗಿದೆ.

ಸ್ವಾತಂತ್ರ್ಯ ಚಳುವಳಿ

ಇನ್ನು ಸ್ವಾತಂತ್ರ್ಯ ಚಳುವಳಿಯ ಕಡೆ ನೋಡೋಣ. ಕರ್ನಾಟಕ ಅಂದು ಹತ್ತು ಹಲವು ಆದಳಿತದಲ್ಲಿ ಹಂಚಿಹೋಗಿ ಇಂದಿನ 19 ಜಿಲ್ಲೆಗಳಲ್ಲಿ 4 ಜಿಲ್ಲೆಗಳು ಬಾಂಬೆಪ್ರಾಂತದಲ್ಲಿ, 2 ಪ್ರಾಂತಗಳು ಮದ್ರಾಸ್ ಪ್ರಾಂತದಲ್ಲಿ ಕೊಡಗು ಜಿಲ್ಲೆ ಒಂದು ವಿಶಿಷ್ಟ ಪ್ರಾಂತವಾಗಿ ಒಟ್ಟು 7 ಜಿಲ್ಲೆಗಳು ಬ್ರಿಟಿಷರ ನೇರ ಆದಳಿತದಲ್ಲಿದ್ದುವು. ಈ ಜಿಲ್ಲೆಗಳಲ್ಲಿ ಕೂಡ (ಸೊಂಡೂರು,

ಮಹಿಳೆಯರ ಪ್ರಶ್ನೆಗಳತ್ತ ಇಡೀ ಪಕ್ಷ ಗಮನ ನೀಡಬೇಕು

ಪ್ರಜಾಸತ್ತಾತ್ಮಕ ಮಹಿಳಾ ಆಂದೋಲನವನ್ನು ಮತ್ತಷ್ಟು ಬಲಗೊಳಿಸಲು, ಪಕ್ಷದಲ್ಲಿ ಮಹಿಳೆಯರ ಭರ್ತಿಯನ್ನು ವೃದ್ಧಿಸಲು, ಅವರ ರಾಜಕೀಯ ಅರಿವನ್ನು ಹೆಚ್ಚಿಸಲು ಮಹಿಳೆಯರ ಪ್ರಶ್ನೆಗಳನ್ನು ಈಗ ಸಾಮಾನ್ಯವಾಗಿರುವಂತೆ ಕೇವಲ ಮಹಿಳಾ ಕಾರ್ಯಕರ್ತೆಯರಿಗೆ ಅಥವಾ ಮಹಿಳಾ ಸಂಘಟನೆಗಳಿಗೆ ಬಿಡದೆ ಅವುಗಳು ಪಕ್ಷದ ಸಾರ್ವತ್ರಿಕ ಪ್ರಚಾರ-ಪ್ರಕ್ಷೋಭೆಯ ಅಭಿನ್ನ ಅಂಗವಾಗಬೇಕು.

ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲೂ ಪಕ್ಷದ ಸಂಘಟನೆ, ಮಹಿಳಾ ಸಂಘಟನೆಯ ಅವಶ್ಯಕತೆಗೆ ಅನುಗುಣವಾಗಿ ಮಹಿಳಾ ಕಾಯಕರ್ತೆಯರನ್ನು ಬೆಳೆಸುವತ್ತ ಹಾಗೂ ಮಹಿಳೆಯರು ಪೂರ್ಣಕಾಲದ ಕಾರ್ಯಕರ್ತೆಯರಾಗಲು ನೆರವಾಗುವತ್ತ ಸೂಕ್ತ ಗಮನ ನೀಡಬೇಕು. ಅವರನ್ನು ನೇತೃತ್ವದ ಸಮಿತಿಗಳಿಗೆ ಭರ್ತಿಗೊಳಿಸುವುದಕ್ಕೂ ಸರಿಯಾದ ಗಮನ ನೀಡಬೇಕು.

ಮುಂಬರುವ ದಿನಗಳಲ್ಲಿ ಮಹಿಳಾ ರಂಗ ಹಿಂದೀ ಪ್ರದೇಶಗಳಲ್ಲಿ ಬೆಳವಣಿಗೆ ಮತ್ತು ಗ್ರಾಮೀಣ ಮಹಿಳೆಯರ ಸಮಸ್ಯೆಗಳನ್ನು ಎತ್ತಿಕೊಳ್ಳಲು ವಿಶೇಷ ಗಮನ ನೀಡಬೇಕು. ಸ್ವತಂತ್ರ ಚಟುವಟಿಕೆಗಳಲ್ಲಿ, ಸಂಯುಕ್ತ ಹೋರಾಟಗಳನ್ನು ವಿಸ್ತರಿಸುವಲ್ಲಿ ಸಾಧಿಸಿದ ಪ್ರಗತಿಯನ್ನು ಕಾಯ್ದುಕೊಂಡು ಹೊಸ ಮುನ್ನಡೆಗಳಿಂದ ಅವನ್ನು ತೀವ್ರಗೊಳಿಸಬೇಕು.

ಸಿ.ಪಿ.ಐ. (ಎಂ) 13 ನೇ ಮಹಾಧಿವೇಶನದ
ರಾಜಕೀಯ-ಸಂಘಟನಾತ್ಮಕ ವರದಿಯಲ್ಲಿ
(ಡಿ.27 ರಿಂದ 1.1.89)

ರಾಮದುರ್ಗ, ಜಮಖಂಡಿಗಳಂತಹ) ಉತ್ತರ ಕರ್ನಾಟಕದ 5 ಜಿಲ್ಲೆಗಳಲ್ಲಿ ಮಧ್ಯೆ ಮಧ್ಯೆ ಸಣ್ಣ ಪುಟ್ಟ ಸಂಸ್ಥಾನಗಳು , ಜಹಗೀರುಗಳು . ಉಳಿದ 12 ಜಿಲ್ಲೆಗಳು ಪೂರ್ಣವಾಗಿ ಸಂಸ್ಥಾನಿಕರ 9 ಜಿಲ್ಲೆಗಳು -ಮೈಸೂರು ಅರಸರ , 3 ಜಿಲ್ಲೆಗಳು ನಿಜಾಮನ ಆಡಳಿತದಲ್ಲಿದ್ದವು.

ಬ್ರಿಟಿಷರ ನೇರ ಆದಳಿತದಲ್ಲಿದ್ದ ಪ್ರದೇಶಗಳಲ್ಲಿ ಮಾತ್ರ ಚಳುವಳಿ ಹೂಡಬೇಕು ಅದೇ ಬ್ರಿಟಿಷರ ಆದಳಿತದ ಆಧಾರಸ್ತಂಭಗಳಾಗಿದ್ದ ರಾಜಾಧಿರಾಜರನ್ನು ಮಿತ್ರರಂತೆ ಪರಿಗಣಿಸಬೇಕು. ಅಲ್ಲಿ ಯಾವುದೇ ಚಳುವಳಿ ಸಲ್ಲ ಎಂಬ ಕಾಂಗ್ರೆಸ್‌ನೀತಿ, ಮೈಸೂರು ಮಹಾರಾಜರನ್ನು, ಸೊಂಡೂರು ಸಂಸ್ಥಾನಿಕರನ್ನು 'ಮಾದರಿ' ಸಂಸ್ಥಾನಗಳೆಂದು ಬೆನ್ನು ತಟ್ಟುವ ಕಾಂಗ್ರೆಸ್ ನೀತಿ ಕರ್ನಾಟಕಕ್ಕೆ ಸೇರಿದ್ದ ವಿಶಾಲ ಪ್ರದೇಶಗಳನ್ನು ಸುಮಾರು 12 ಕ್ಕೂ ಹೆಚ್ಚು ಜಿಲ್ಲೆಗಳನ್ನು ಸ್ವಾತಂತ್ರ್ಯ ಚಳುವಳಿಯಿಂದ 3-4 ದಶಕಗಳ ಕಾಲ ದೂರವಿಟ್ಟಿತು.

ಈ ಪಾಳೆಯಗಾರಿ ಸಂಸ್ಥಾನಗಳಲ್ಲಿ ಪಾಳೆಯಗಾರಿ ಪ್ರಾಬಲ್ಯ ಮಹಿಳೆಯರನ್ನು ಅದುಮಿ ಹಿಡಿದಿತ್ತು ಎನ್ನುವುದರ ಜೊತೆಗೆ ತಿಲಕರಾದಿಯಾಗಿ ಗಾಂಧಿಯವರೂ ಸೇರಿದಂತೆ ಪಾಳೆಯಗಾರಿ ಕಂದಾಚಾರದ ಜೊತೆ ರಾಜಿ ಮಾಡಿಕೊಂಡುದು ಪ್ರಜಾಸತ್ತೆಗಾಗಿ ನಡೆದ ಸ್ವಾತಂತ್ರ್ಯ ಆಂದೋಳನವನ್ನು ಅದರಲ್ಲಿ ಭಾಗವಹಿಸಿದ್ದ ಜನ ಸಮುದಾಯದ ಮನಸ್ಸುಗಳನ್ನು ಹಿಂದೆಳೆಯಿತು.



ಕರ್ನಾಟಕದಲ್ಲಿ ಸ್ವಾತಂತ್ರ್ಯಾಂದೋಳನ ತೀವ್ರ ಸ್ವರೂಪ ತಾಳಿ ಸಾವಿರಾರು ಜನರು ಭಾಗವಹಿಸುವಂತ ಉತ್ಸಾಹವನ್ನು ತುಂಬಿದ್ದು 1930 ರ ಉಪ್ಪಿನ ಸತ್ಯಾಗ್ರಹದ ಸಮಯದಲ್ಲಿಯೇ ಕರ ನಿರಾಕರಣೆಯ ಚಳುವಳಿ ಉತ್ತರಕನ್ನಡ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಹಬ್ಬಿ ಅನೇಕ ಗ್ರಾಮಗಳೂ ಇಡಿಯಾಗಿ ಆಂದೋಲನದಲ್ಲಿ ಭಾಗವಹಿಸಿದುವು. ಇದರಲ್ಲಿ ಸಹಸ್ರಾರು ಮಹಿಳೆಯರು ಪಾಲ್ಗೊಂಡರು.

ಇದೇ ಸಂದರ್ಭದಲ್ಲಿ ಪೋಲೀಸರು ರೈತರ ಎಮ್ಮೆ,ಹಸು, ಭೂಮಿ-ಕಾಣಿಗಳನ್ನು ಜಪ್ತಿ ಮಾಡತೊಡಗಿದಾಗ ರೈತ ಮಹಿಳೆಯರ ಹೋರಾಟ ತಾರಕಕ್ಕೇರಿತು. ಸೊರಬ ತಾಲ್ಲೂಕಿನ ಹಿಚ್ಚೆ ಗ್ರಾಮದಲ್ಲಿ ಗೌರಮ್ಮ ಎಂಬಾಕೆ ಪಟೇಲರ ಮನೆ ಮುಂದೆ ಉಪವಾಸ ಸತ್ಯಾಗ್ರಹ ಹೂಡಿದರೆ, ಶಿರಾಳಗಿಯಲ್ಲಿ ಒಂದು ಮಹಿಳೆಯರ ತಂಡವೇ ಜಪ್ತಿಯಲ್ಲಿ ಆಸ್ತಿಯನ್ನು ಕೊಂಡವರನೇಕರ ಮನೆಯ ಮುಂದೆ ಸತ್ಯಾಗ್ರಹ ಹೂಡಿದರು. ಪೋಲೀಸರು ಬಂಧಿಸಿದಾಗ ಅಲ್ಲಿಯೇ ಸತ್ಯಾಗ್ರಹ ಮುಂದುವರೆಸಿದರು. ಈ ಉಪವಾಸಗಳು 22ದಿನಗಳವರೆಗೂ ಆದದ್ದುಂಟು. ಹೀಗೆ ಮಹಿಳೆಯರ ಹೋರಾಟ ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯ ಜ್ವಲಂತ ಭಾಗವಾಗಿದೆ.

ಕರ್ನಾಟಕದ ವಿವಿಧ ಬಾಗಗಳ ಅನೇಕ ಮಹಿಳೆಯರು ಕಾಂಗ್ರೆಸ್‌ನ ನಾಯಕರಾಗಿ ಚಳುವಳಿಯಲ್ಲಿ ಭಾಗವಹಿಸಿದ್ದಾರೆ.

ಕಮಲಾದೇವಿ ಚಟ್ಟೋಪಾಧ್ಯಾಯ, ಉಮಾಬಾಯಿ ಕುಂದಾಪುರ, ಕೃಷ್ಣಾಬಾಯಿ ಪಣಜೀಕರ್, ಯಶೋಧರಮ್ಮ ದಾಸಪ್ಪ,ನಾಗಮ್ಮ ಪಟೇಲ ಎಂಬ ಹೆಸರುಗಳು ಜನಜನಿತವಾಗಿವೆ. ಆದರೆ ಈ ಚಳುವಳಿ ತೀವ್ರವಾಗಿದ್ದುದು ಬಾಂಬೆ ಕರ್ನಾಟಕದ 4 ಜಿಲ್ಲೆಗಳು ಹಾಗೂ ದ.ಕ.ದಲ್ಲಿ ಮಾತ್ರ . ಅಲ್ಲಿನ ಜನಸಾಮಾನ್ಯರನ್ನು, ಮಹಿಳೆಯರನ್ನು ಬಡಿದೆಬ್ಬಿಸಿತು. ಸ್ವಾತಂತ್ರ್ಯ ಸಂಗ್ರಾಮ ತೀವ್ರವಾಗಿಲ್ಲದ ಕಡೆಗಳಲ್ಲಿ ಮುಖ್ಯವಾಗಿ ಹೈದರಾಬಾದ್ ಕರ್ನಾಟಕವೆಂದು ಕರೆಯ್ಪಡುವ 3 ಜಿಲ್ಲೆಗಳು ಶಿಕ್ಷಣದಲ್ಲಿಯೂ ಪ್ರಜಾಸತ್ತಾತ್ಮಕ ಚಳುವಳಿಯಲ್ಲೂ ಹಿಂದುಳಿದುವು. ಮೈಸೂರು ಸಂಸ್ಥಾನದ ಹಲವು ಜಿಲ್ಲೆಗಳಿಗೂ ಸ್ವಾತಂತ್ರ್ಯ ಚಳುವಳಿಗೆ ಸಂಬಂಧಪಟ್ಟ ಮಾತನ್ನು ಅನ್ವಯಿಸಬಹುದು.

ಭೂಮಿ

ಭಾರತದ ಅನೇಕ ಕಡೆಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ಜೊತೆ ಜೊತೆಯಲ್ಲಿಯೇ ಹಳ್ಳಿಗಳಲ್ಲಿನ ಜಾಗೀರದಾರ, ಜೋಡಿದಾರರ ಇತರ ಅನೇಕ ಭೂಮಾಲಿಕರ ಪಾಳೆಯಗಾರೀ ದರ್ಪದ ವಿರುದ್ಧ ಶೋಷಣೆಯ ವಿರುದ್ಧ ಮಹಿಳೆಯರನ್ನು ಕೀಳಾಗಿ ನಡೆಸಿಕೊಳ್ಳುವುದರ ವಿರುದ್ಧ ಇಡೀ ರೈತಾಪಿ ಜನತೆ ಪ್ರತಿಭಟಿಸಿತು. ಅದು ಧೀರ ತೆಲಂಗಾಣ , ಪುನ್ನಪ್ರವಯಲಾರ್, ತೇಭಾಗ, ಕಯ್ಯೂರು ಹೋರಾಟಗಳಲ್ಲಿ ತನ್ನ ಉತ್ತುಂಗ ಶಿಖರವನ್ನು ಮುಟ್ಟಿತು. ಕರ್ನಾಟಕದಲ್ಲಿ ಇಂತಹ ಭೂಮಾಲೀಕತ್ವದ ವಿರುದ್ಧ ಹೋರಾಟ

ಮಹಿಳಾ ಚಳುವಳಿ ಸ್ವತಂತ್ರವಾಗಿ ಮತ್ತು ಪ್ರಜಾಸತ್ತಾತ್ಮಕ ಚಳುವಳಿಯ ಭಾಗವಾಗಿ ಪಾಳೆಯಗಾರಿ ಅವಶೇಷಗಳು, ಮೌಲ್ಯಗಳ ವಿರುದ್ಧ ತೀವ್ರ ಹೋರಾಟ ಹೂಡುತ್ತಲೇ ವಿಸ್ತಾರಗೊಳ್ಳಬೇಕಾಗಿದೆ.

ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ ತೀವ್ರಗೊಳ್ಳಲಿಲ್ಲ. ಪಾಳೆಯಗಾರಿ ವ್ಯವಸ್ಥೆಯ ವಿರುದ್ಧಜನರ ಆಕ್ರೋಶ ಸಿಡಿಯಲಿಲ್ಲ.(ಇದಕ್ಕೆ ಹಲವಾರು ಕಾರಣಗಳಿವೆ. ಅದು ಇಲ್ಲಿ ಅಪ್ರಸ್ತುತ.)

ಸ್ವಾತಂತ್ರ್ಯಾ ನಂತರದ ಕರ್ನಾಟಕದಲ್ಲಿಯೂ ಅತ್ಯಂತ ತೀವ್ರ ಭೂ ಸುಧಾರಣೆಗಳು ಎಂದು ಹೇಳಿಕೊಂಡ 70 ರ ದಶಕದ ಭೂಸುಧಾರಣೆಗಳಲ್ಲಿಯೂ ಭೂಕೇಂದ್ರೀಕರಣದ ಮೇಲೆ ಹೆಚ್ಚಿನ ಪರಿಣಾಮವಾಗಲಿಲ್ಲ. ಇದರಿಂದ ಭೂಕೇಂದ್ರೀಕರಣ ವಿಪರೀತವಾಗಿರುವ ದೇಸಾಯಿ ಸರ್‌ದೇಸಾಯಿಗಳ ದೊಡ್ಡ ಗೌಡ ಪಾಟೀಲರ ದರ್ಬಾರು ಉತ್ತರ ಕರ್ನಾಟಕದ ಹಲವೆಡೆ, ದಕ್ಷಿಣ ಕರ್ನಾಟಕದ ಕೆಲವೆಡೆ ಅವ್ಯಾಹತವಾಗಿ ಮುಂದುವರೆದಿದೆ.

ಅಕ್ಷರ ಬಲ್ಲ ಗ್ರಾಮೀಣ ಸ್ತ್ರೀಯರು ಅತ್ಯಂತ ಕಡಿಮೆ ಪ್ರಮಾಣದಲ್ಲಿರುವ ಗುಲ್ಬರ್ಗಾ (ಶೇ.7.80) ರಾಯಚೂರು (ಶೇ9.82) ಜಿಲ್ಲೆಗಳೇಅತ್ಯಂತ ಹೆಚ್ಚು ಕೃಷಿಕಾರ್ಮಿಕರಿರುವ ಅವರಲ್ಲಿಯೂ ಮಹಿಳಾ ಕೃಷಿಕಾರ್ಮಿಕರೇ ಅತ್ಯಂತ ಹೆಚ್ಚಿರುವ ಪ್ರದೇಶ ಹೀಗೆ **ಕರ್ನಾಟಕದ ಪ್ರಜಾಸತ್ತಾತ್ಮಕ ಚಳುವಳಿಯ ಈ ಮೂರು ಮುಖ್ಯ ದೌರ್ಬಲ್ಯಗಳು- ಒಂದನೆಯದಾಗಿ ಸಮಾಜಸುಧಾರಣಾ ಚಳುವಳಿಯ ಕೊರತೆ , ಎರಡನೆಯದಾಗಿ ಕಾಂಗ್ರೆಸ್‌ನ ನೀತಿಯ ಫಲವಾಗಿ ಕರ್ನಾಟಕದ ಹಲವೆಡೆ ಸ್ವಾತಂತ್ರ್ಯ ಚಳುವಳಿ ತೀವ್ರಗೊಳ್ಳದಿರುವುದು, ಮೂರನೆಯದಾಗಿ ಭೂಮಿ ಇನ್ನೂ ಪಾಳೆಯಗಾರಿ ಭೂಮಾಲಿಕರಲ್ಲಿ ಕೇಂದ್ರೀಕರಣಗೊಂಡಿರುವುದು- ಇವೆಲ್ಲಾ ಮಹಿಳೆಯರ ಹೋರಾಟದ ಮುಂದಿರುವ ಪ್ರಮುಖ ಅಡ್ಡಿಗಳಾಗಿವೆ.** ಆದ್ದರಿಂದ ಮಹಿಳಾ ಚಳುವಳಿ ಸ್ವತಂತ್ರವಾಗಿ ಮತ್ತು ಪ್ರಜಾಸತ್ತಾತ್ಮಕ ಚಳುವಳಿಯ ಭಾಗವಾಗಿ ಪಾಳೆಯಗಾರಿ ಅವಶೇಷಗಳು, ಮೌಲ್ಯಗಳ ವಿರುದ್ಧ ತೀವ್ರ ಹೋರಾಟ ಹೂಡುತ್ತಲೇ ವಿಸ್ತಾರಗೊಳ್ಳಬೇಕಾಗಿದೆ.

ಹೊಸ ಜಾಗೃತಿ, ಮಹಿಳೆಯರ ದಮನಕ್ಕೆ ಪ್ರತಿರೋಧದ ಕೆಚ್ಚು, ಮಹಿಳಾ ಸಂಘಟನೆಗಳನ್ನು ಊಳಿಗಮಾನ್ಯ ಪದ್ಧತಿಗಳ, ದಮನದ ವಿರುದ್ಧ, ಸತಿಪದ್ಧತಿ, ವರದಕ್ಷಿಣೆ ಅಪರಾಧಗಳ, ದಲಿತ ಗ್ರಾಮೀಣ ಜನಸಮೂಹಗಳ ವಿರುದ್ಧ ಒಂದು ಹೋರಾಟ ನಡೆಸಲು ಒಟ್ಟಿಗೆ ತರುತ್ತಿವೆ. ಧರ್ಮದ ಹೆಸರಿನಲ್ಲಿ ಮುಸ್ಲಿಂ ಮಹಿಳೆಯರ ಕೀಳು ಸ್ಥಾನಮಾನವನ್ನು ಶಾಶ್ವತಗೊಳಿಸುವ ಪ್ರಯತ್ನಗಳನ್ನು ಎದುರಿಸಬೇಕು. ಉದ್ಯೋಗ, ಭರ್ತಿ, ಸಮಾನ ವೇತನದಲ್ಲಿ ದುಡಿಯುವ ಮಹಿಳೆಯರ ವಿರುದ್ಧ ಪಕ್ಷಪಾತವನ್ನು ಬಯಲಿಗೆಳೆಯಬೇಕು, ಅದರ ವಿರುದ್ಧ ಹೋರಾಡಬೇಕು.

-ಸಿ.ಪಿ.ಐ. (ಎಂ) ಹದಿಮೂರನೇ ಮಹಾಧಿವೇಶನದ
(ಡಿಸೆಂಬರ್ 27,1988 ರಿಂದ ಜನವರಿ, 1989, ತಿರುವನಂತಪುರ)
ರಾಜಕೀಯ ವರದಿಯಿಂದ.

ಪ್ರಜಾಪ್ರಭುತ್ವ, ಸಮಾನತೆ, ಮಹಿಳಾ ವಿಮೋಚನೆಗಾಗಿ

ಮಹಿಳಾ ಆಂದೋಲನ ಸಂಘಟನಾತ್ಮಕವಾಗಿ ಭಾರತದಲ್ಲಿ ಆರಂಭವಾದದ್ದು 1927 ರಲ್ಲಿ ಎನ್ನಬಹುದು. ಪುಣೆಯಲ್ಲಿ ಆ ವರ್ಷ ಅಖಿಲ ಭಾರತ ಮಹಿಳಾ ಸಮ್ಮೇಳನ (ಎ.ಐ.ಡಬ್ಲ್ಯು.ಸಿ.) ನಡೆಯಿತು. 19 ನೇ ಶತಮಾನದ ಅಂತ್ಯದಲ್ಲೇ ಮಹಿಳೋದ್ಧಾರದ ಆಂದೋಲನ ಆರಂಭವಾಗಿತ್ತು. ಆದರೆ ಬಹುಪಾಲು ಸಮಾಜ ಸುಧಾರಕರು ಪುರುಷರೇ ಆಗಿದ್ದರು. ಎ.ಐ.ಡಬ್ಲ್ಯು.ಸಿ. ರಾಜಕೀಯದಿಂದ ದೂರ ಇರುವುದಾಗಿ ಹೇಳಿಕೊಂಡರೂ ಪರಾಹತುವಾಗಿದ್ದ ಭಾರತದಲ್ಲಂತೂ ಅದು ಸಾಧ್ಯವಿರಲಿಲ್ಲ. ಸ್ವಾತಂತ್ರ್ಯ ಚಳವಳಿ ತೀವ್ರವಾಗುತ್ತಿದ್ದಂತೆ, ಅದರಲ್ಲಿ ಮಹಿಳೆಯನ್ನು ಒಳಗೊಳ್ಳುವ ಅಗತ್ಯ ಕಾರ್ಮಿಕ ವರ್ಗಕ್ಕೆ ಕಂಡು ಬಂತು. ಬೂರ್ಜ್ವಾ ವರ್ಗಕ್ಕೂ ಕಂಡುಬಂದಿತ್ತು. ಎ.ಐ.ಡಬ್ಲ್ಯು.ಸಿ. ಮೇಲ್ವರ್ಗದ ಮಹಿಳೆಯರಿಗೆ ಸೀಮಿತವಾಗಿದ್ದ ಸಂಘಟನೆಯಾಗಿತ್ತು. ಕೇವಲ ಕೆಲವು ಸುಧಾರಣಾ ಕಾರ್ಯಕ್ರಮಗಳಿಗಷ್ಟೇ ಸೀಮಿತಗೊಂಡಿದ್ದ ಈ ಸಂಘಟನೆ ಮತ್ತು ಕಾರ್ಮಿಕ ವರ್ಗದ ರೈತಾಪಿ ವರ್ಗದ ಹಾಗೂ ಮಧ್ಯಮ ವರ್ಗದ ಮಹಿಳೆಯರ ನಡುವಿನ ಕಂದರ ಬೆಳೆಯುತ್ತಲೇ ಹೋಯಿತು.

ಎರಡನೇ ಮಹಾಯುದ್ಧದ ಹಿನ್ನೆಲೆಯಲ್ಲಿ ಪ್ರಗತಿಪರ ವಿಚಾರಧಾರಣೆಯಿಂದ ಪ್ರಭಾವಿತಗೊಂಡ ಸಮರಧೀರ ಮಹಿಳಾ ಸಂಘಟನೆಗಳು ಅಲ್ಲಲ್ಲಿ ಹುಟ್ಟಿಕೊಂಡವು - ಬಂಗಾಲ, ಅಸ್ಸಾಂ, ತ್ರಿಪುರಾ, ಆಂಧ್ರ, ಮದ್ರಾಸ್, ಮಲಬಾರ್, ತಿರುವಾಂಕೂರು, ಕೊಚ್ಚಿ, ತಮಿಳುನಾಡು, ಮಹಾರಾಷ್ಟ್ರ ಮತ್ತು ಪಂಜಾಬುಗಳಲ್ಲಿ. ಇದರಲ್ಲಿ ಮುಖ್ಯವಾದದ್ದು ಬಂಗಾಳದ ಮಹಿಳಾ ಆತ್ಮರಕ್ಷಣಾ ಸಮಿತಿ- ಈ ಸಂಘಟನೆಯ ಬೆನ್ನೆಲುಬು ಶ್ರಮಿಕ ವರ್ಗದ ಮಹಿಳೆಯರಾದರೂ ಇದೊಂದು ವ್ಯಾಪಕ ಆಧಾರದ ಸಂಘಟನೆಯಾಗಿತ್ತು. ಈ ಘಟ್ಟದಲ್ಲಿ ಮಹಿಳಾ ಆಂದೋಲನದ ಒಂದು ಪ್ರಮುಖ ಲಕ್ಷಣವೆಂದರೆ ಅದು ಸಂಘಟನಾತ್ಮಕವಾಗಿ ರೈತರ, ಕಾರ್ಮಿಕರ ಚಳುವಳಿಯಲ್ಲಿ ಭಾಗವಹಿಸಿದವು.

ಸ್ವಾತಂತ್ರ್ಯಾ ನಂತರ ಭಾರತ ಮಹಿಳಾ ಆಂದೋಲನ ಅಂತರ್ರಾಷ್ಟ್ರೀಯ ಆಂದೋಲನದೊಂದಿಗೆ ಸಂಪರ್ಕ ಪಡೆಯಲಾರಂಭಿಸಿತು. ಮಹಿಳಾ ಆತ್ಮ ರಕ್ಷಣಾ ಸಮಿತಿಯ ಕಮ್ಯುನಿಸ್ಟ್ ಕಾರ್ಯಕರ್ತರು ಒಂದು ಅಖಿಲ ಭಾರತ ಸಂಘಟನೆ ಕಟ್ಟುವ ಪ್ರಯತ್ನ ಮಾಡಿದರು. ಫಲವಾಗಿ 1953 ರಲ್ಲಿ ಅಂತರಾಷ್ಟ್ರೀಯ ಮಹಿಳಾ ಸಮ್ಮೇಳನ ಕೋಪನ್‌ಹೇಗನ್‌ನಲ್ಲಿ ನಡೆದ ಮೇಲೆ ಭಾರತದ ವಿವಿಧ ಮಹಿಳಾ ಸಂಘಟನೆಗಳ ಪ್ರತಿನಿಧಿಗಳಿದ್ದ ಒಂದು ಅಖಿಲಭಾರತ ಮಹಿಳಾ ಸಂಯೋಜಕ ಸಮಿತಿ ರೂಪಗೊಂಡಿತು. ಈ ಸಮಿತಿ ಕಲ್ಕತ್ತೆಯಲ್ಲಿ ಜೂನ್ 1954 ರಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನ ಸಂಘಟಿಸಿತು. ಈ ಸಮ್ಮೇಳನದಲ್ಲೇ ದೇಶದ ಎರಡನೇ ಪ್ರಮುಖ ಮಹಿಳಾಸಂಘಟನೆ ಭಾರತೀಯ ಮಹಿಳೆಯರ ರಾಷ್ಟ್ರೀಯ ಒಕ್ಕೂಟ(ಎನ್.ಎಫ್.ಐ.ಡಬ್ಲ್ಯು) ಸ್ಥಾಪನೆಗೊಂಡಿತು. ಸಮಾಜ ಪರಿವರ್ತನೆಯಿಂದ ಮಹಿಳೆ ಸಮಾನತೆ ಸಾಧಿಸುವುದು ಈ ಸಂಘಟನೆಯ ಗುರಿಯಾಗಿತ್ತು.

ಸ್ವಾತಂತ್ರ್ಯದ ನಂತರ ಕಾಂಗ್ರೆಸ್ ಆಳುವ ಪಕ್ಷವಾಗಿತ್ತು. ಸಾಮಾಜಿಕ ಬೆಳವಣಿಗೆಯೊಂದಿಗೆ ವರ್ಗ ಹೋರಾಟ ತೀಕ್ಷ್ಣಗೊಂಡಂತೆ ಕಾಂಗ್ರೆಸ್ ವರ್ಗಗುಣ ಸ್ಪಷ್ಟವಾಗಿ ಕಂಡು ಬರಲಾರಂಭಿಸಿತು. ಬಾಯಲ್ಲಿ ಮಹಿಳೋದ್ಧಾರದ, ಮಹಿಳೆಯ ಹಕ್ಕುಗಳ ಬಗ್ಗೆ ಮಾತನಾಡಿದರೂ ನಿಜವಾದ ಹೋರಾಟ ಬಂದಾಗ ಹಿಂದೆ ಸರಿಯಿತು ಮಾತ್ರವಲ್ಲ, ಮಹಿಳೆಯರ ಮೇಲೆಯೇ ದಬ್ಬಾಳಿಕೆ ನಡೆಸಲು ಹಿಂಜರಿಯಲಿಲ್ಲ.

ಪುಟ 8 ಕ್ಕೆ



"ಸಮಾಜದ ವಿವಿಧ ಸ್ತರಗಳಿಂದ ಬಂದಿರುವ ಭಾರತೀಯ ಮಹಿಳೆಯರು ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಮತ್ತು ಸಾಮಾಜಿಕ ಅನ್ಯಾಯಗಳ ವಿರುದ್ಧ ನಡೆಸಿದ ಹೋರಾಟಗಳಲ್ಲಿ ಭಾಗವಹಿಸಿರುವ ಹುತಾತ್ಮರ ಉಜ್ವಲ ಪರಂಪರೆಯನ್ನು ಮುನ್ನಡೆಸಲು ಮತ್ತು ಮಹಿಳೆಯರ ವಿರುದ್ಧ ಪಕ್ಷಪಾತವಿಲ್ಲದ, ಅವರ ಶೋಷಣೆಯಿಲ್ಲದ ಸಾಮಾಜಿಕ ವ್ಯವಸ್ಥೆಗಾಗಿ, ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತೇವೆ." ಎಂದು ಪ್ರತಿಜ್ಞೆ ತೊಟ್ಟ ಸಂಘಟನೆ ಎ.ಐ.ಡಿ.ಡಬ್ಲ್ಯು.ಎ.

ಪ್ರಜಾಸತ್ತಾತ್ಮಕ ಮುನ್ನಡೆಯ ಹೋರಾಟದ ಅಂಗ

ಅಸಮಾನತೆ, ಪಕ್ಷಪಾತ ಮತ್ತು ಆರೆ ಪಾಳೆಯಗಾರಿ ದೃಷ್ಟಿಕೋನದ ವಿರುದ್ಧ ಮಹಿಳೆಯರ ಹೋರಾಟ ಕೇವಲ ಸಾಮಾಜಿಕ ಪ್ರಗತಿಯ ಹೋರಾಟವಷ್ಟೇ ಅಲ್ಲ, ಅದು ಪ್ರಜಾಪ್ರಭುತ್ವ ಮತ್ತು ಸಮಾಜವಾದಕ್ಕಾಗಿ ಭಾರತೀಯ ಜನತೆಯ ಹೋರಾಟದ ಅವಿಭಾಜ್ಯ ಅಂಗ. ಈ ಹೋರಾಟಕ್ಕೆ ಒಂದು ಸಾಮೂಹಿಕ ನೆಲೆ ನೀಡಬೇಕು . ಮಹಿಳೆಯರ ಸಾಮೂಹಿಕ ಸಂಘಟನೆಗಳಿಗೆ ಪ್ರೇರಣೆ ನೀಡುವಲ್ಲಿ ಕಟ್ಟುವಲ್ಲಿ ಪಕ್ಷ ಮೊದಲಡಿಯಿಡಬೇಕು, ಮಹಿಳಾ ರಂಗದಲ್ಲಿ ತನ್ನ ಕರ್ತವ್ಯಗಳ ಬಗ್ಗೆ ಇಡೀ ಪಕ್ಷಕ್ಕೆ ಶಿಕ್ಷಣ ನೀಡಬೇಕು. ಇದರಿಂದ ಪ್ರಜಾಸತ್ತಾತ್ಮಕ ಮತ್ತು ಸಾಮಾಜಿಕ ಮುನ್ನಡೆಯ ಹೋರಾಟದಲ್ಲಿ ಬಹು ಸಂಖ್ಯೆಯ ಮಹಿಳೆಯರನ್ನು ಒಳಗೊಳ್ಳಲು ಪಕ್ಷಕ್ಕೆ ಸಾಧ್ಯವಾಗುತ್ತದೆ.

-ಸಿ.ಪಿ.ಐ. (ಎಂ) ಹತ್ತನೇ ಮಹಾಧಿವೇಶನ (ಏಪ್ರಿಲ್ 2-8,1978, ಜಾಲಂದರ್) ರಾಜಕೀಯ ವರದಿಯಿಂದ

ನಾವಿಕರ, ಕಾರ್ಮಿಕರ, ಮಹಿಳೆಯರ ರಕ್ತ ಒಂದಾಗಿ ಹರಿದಿತ್ತು!

ಇತಿಹಾಸದ ಪುಟಗಳಿಂದ

ಫೆಬ್ರುವರಿ 1946 ಅತ್ಯಂತ ಉದ್ವೇಗ ತುಂಬಿದ ವಾತಾವರಣ. ರೈತರು, ಕಾರ್ಮಿಕರ ಜೊತೆಗೆ ಬ್ರಿಟಿಷ್ ಸೇನೆಗಳಲ್ಲಿದ್ದ ಭಾರತೀಯ ಸೈನಿಕರೂ ಬ್ರಿಟಿಷರ ವಿರುದ್ಧ ಸಾಮೂಹಿಕ ಹೋರಾಟಗಳ ಕಣಕ್ಕೆ ಇಳಿದಿದ್ದರು. ಮುಂಬೈ, ಕರಾಚಿ, ಕೊಚ್ಚಿ, ಕಲ್ಕತ್ತಾ, ವಿಶಾಖಪಟ್ಟಣ ಬಂದರುಗಳಲ್ಲಿ ಬ್ರಿಟಿಶ್ ನಾವಿಕ ಪಡೆಯ ಭಾರತೀಯ ನಾವಿಕರು ತಮ್ಮ ಬಿಳಿಯ ಮಾಲಿಕರ ವಿರುದ್ಧ ಬಂಡೆದಿದ್ದರು. ನಾಲ್ಕು ವರ್ಷಗಳ ಹಿಂದಷ್ಟೇ 'ಭಾರತ ಬಿಟ್ಟು ತೊಲಗಿರಿ' ಎಂದು ಘರ್ಜಿಸಿದ್ದ ಕಾಂಗ್ರೆಸ್ ಮುಖಂಡರು ಪಟೇಲ್ ಮುಂತಾದವರು, ಲೀಗ್ ಮುಖಂಡ ಜಿನ್ನಾ ಮುಂತಾದವರು ನಾವಿಕರ ಮುಷ್ಕರವನ್ನು ವಿರೋಧಿಸಿದ್ದರು. ಆದರೆ ಕಮ್ಯುನಿಸ್ಟರು, ಮುಂಬೈಯ ಕಾರ್ಮಿಕರ ನಾವಿಕ ಬಂಧುಗಳ ಬೆಂಬಲಕ್ಕೆ ದೃಢವಾಗಿ ನಿಂತರು.

ಆ ದಿನಗಳಲ್ಲಿ ಮಹಿಳಾ ಕಾರ್ಮಿಕರ ಧೀರೋದಾತ್ತ ಪಾತ್ರ ದೇಶದ ಮಹಿಳಾ ಆಂದೋಲನದ ಇತಿಹಾಸದ ಪ್ರಮುಖ ಪುಟಗಳಲ್ಲೊಂದು.

ಬ್ರಿಟಿಷರು ಹಡುಗುಗಳಲ್ಲಿ ಬಂಡೆದ್ದಿದ್ದ ನಾವಿಕರಿಗೆ ಆಹಾರ ಪೂರೈಕೆ ನಿಲ್ಲಿಸಿದ್ದರು. ಕಮ್ಯುನಿಸ್ಟ್ ಪಕ್ಷ, ಲಾಲ್ ಬಾವುಟ ಗಿರಣಿ ಕಾಮಗಾರ್ ಯೂನಿಯನ್ ಮತ್ತಿತರ ಕಾರ್ಮಿಕ ಸಂಘಗಳು ನಾವಿಕರಿಗೆ ಆಹಾರ ಪೂರೈಸಲು ನಿರ್ಧರಿಸಿದರು. ಮಹಿಳೆಯರಿಗೆ ಈ ಜಾವಾಬ್ದಾರಿ ಒಪ್ಪಿಸಲಾಯಿತು. ಗಿರಣಿ ಮಹಿಳೆಯರು (ಇವರಲ್ಲಿ ಬಹುಮಂದಿ ಮುಸ್ಲಿಂ ಮಹಿಳೆಯರು ಈ ಜವಾಬ್ದಾರಿ ಹೊರಲು ಮುಂದೆ ಬಂದರು. ತಾವೇ ಅತ್ಯಲ್ಪ ಕೂಲಿ ಪಡೆಯುತ್ತಿದ್ದರೂ ನಸುಕಿನಲ್ಲೇ ಎದ್ದು ಆಹಾರ ಬೇಯಿಸಿ ಒಂದು ಗಂಟೆ ಟ್ರಾಮ್ ಪಯಣ ಮಾಡಿ ಗೇಟ್ ವೇ ಆಫ್ ಇಂಡಿಯಾ ತಲುಪುತ್ತಿದ್ದರು. ಯಾರಾದರೂ ದೋಣಿಯಲ್ಲಿ ಬಂದು ಆಹಾರವನ್ನು ನಾವಿಕರಿಗೆ ಒಯ್ಯುತ್ತಿದ್ದರು. ಪೊಲೀಸರು ಸದಾ ಗಸ್ತು ತಿರುಗುತ್ತಿದ್ದರೂ ಈ ಕೆಲಸ ನಡೆಯುತ್ತಿತ್ತು. ಪೋಲೀಸರು ಕೇಳಿದಾಗ ಮಹಿಳೆಯರ ಉತ್ತರ "ನಾವು ಎಲಿಫೆಂಟಾ ಗುಹೆಗಳನ್ನು ನೋಡಲು ಹೋಗುತ್ತಿದ್ದೇವೆ" (ಈ ಗುಹೆಗಳು ಸಮುದ್ರದ ನಡುವೆ ದ್ವೀಪದಲ್ಲಿರುವ ಐತಿಹಾಸಿಕ ಪ್ರೇಕ್ಷಣೀಯ ಸ್ಥಳ) ಒಂದು ದಿನ ಗಿರಣಿ ಮಹಿಳಾ ಕಾರ್ಮಿಕರ ನಾಯಕಿ ಪಾರ್ವತಿ ಬಾಯಿ ಭೋಲೆಯವರನ್ನು ಪೊಲೀಸರು ಮತ್ತೆ ಅದೇ ಪ್ರಶ್ನೆ ಕೇಳಿದರು. ಪಾರ್ವತಿ ಬಾಯಿ ಪೊಲೀಸರನ್ನೇ ಗದರಿಸಿದರು - " ನಿಮಗೇನು ತಾಯಿ ತಂಗಿಯರು ಇಲ್ಲವೇ? ನಮ್ಮೊಡನೆ ಯಾಕೆ ಹೀಗೆ ವರ್ತಿಸುತ್ತಿದ್ದೀರಿ? ಇನ್ನೊಮ್ಮೆ ನೀವು ಇಂತಹ ಪ್ರಶ್ನೆ ಕೇಳಿದರೆ ಚಪ್ಪಲಿ ತಗೊಂಡು ಹೊಡೀತೇವೆ. ಇಂತಹ ಪ್ರಶ್ನೆಗಳನ್ನು ಕೇಳುವ ಹಕ್ಕು ನಿಮಗಿಲ್ಲ, ಎಲ್ಲಿಗಾದರೂ ಹೋಗುವ ಹಕ್ಕು ನನಗಿದೆ " ಪೊಲೀಸರು ಬಂಧನದ ಬೆದರಿಕೆ ಹಾಕಿದರು "ಸರಿ ಬಂಧಿಸಿ ನಿಮ್ಮ ಜೈಲು ಸಾಕಾಗದಷ್ಟು ಮಹಿಳೆಯರು ಬರುತ್ತೇವೆ" ಎಂದು ಬಾಯಿ ಮುಚ್ಚಿಸಿದರು.

ಫೆಬ್ರುವರಿ 22 ಕಮ್ಯುನಿಸ್ಟ್ ಪಕ್ಷ ನಾವಿಕರಿಗೆ ಬೆಂಬಲವಾಗಿ ಸಾರ್ವತ್ರಿಕ ಮುಷ್ಕರದ ಕರೆ ನೀಡಿತು. ಬ್ರಿಟಿಷರ ಸರಕಾರ ಇದಕ್ಕೆ ಬಲವಾದ ಪ್ರತಿಕ್ರಿಯೆ ವ್ಯಕ್ತಪಡಿಸಲು ನಿರ್ಧರಿಸಿತ್ತು. ಎಷ್ಟು ಸಾಧ್ಯವೋ ಅಷ್ಟು ಜನರನ್ನು ಕೊಂದು ಬಿಡುವ ಹಂಚಿಕೆಯಲ್ಲಿತ್ತು. ಪರೇಲ್ ಮಹಿಳಾ ಸಂಘದ ಒಂದು ಸಭೆ ದಾಮೋದರ್ ಹಾಲ್‌ನಲ್ಲಿ ನಿರ್ಧಾರವಾಗಿತ್ತು. ಆದರೆ ಪರಿಸ್ಥಿತಿ ನೋಡಿ ಅದನ್ನು ಮುಂದೂಡಲು ನಿಶ್ಚಯಿಸಲಾಯಿತು. ಈ ಸುದ್ದಿಯನ್ನು ಸಂಘದ ಸಾವಿರಾರು ಸದಸ್ಯೆಯರಿಗೆ ತಿಳಿಸಬೇಕಾಗಿತ್ತು. ಇದನ್ನು ತಿಳಿಸಲು ಪಕ್ಷದ ಮುಖ್ಯ ಕಚೇರಿಯಿದ್ದ ಖೇತವಾಡಿಯಿಂದ ಕೃಷ್ಣನಗರಕ್ಕೆ ಹೋಗಬೇಕಾಗಿತ್ತು. ಬ್ರಿಟಿಶ್ ಪಡೆಗಳು ಜನರ ಮೇಲೆ ಮನಬಂದಂತೆ ಗುಂಡು ಹಾರಿಸಿ ಕೊಲ್ಲುತ್ತಿದ್ದರು. ವಿಮಲಾ ರಣದಿವೆ ರಸ್ತೆಗಿಳಿದಾಗ ರಸ್ತೆಗಳು ಬರಿದೋ ಬರಿದು. ಎಲ್ಲೆಲ್ಲೂ ಬ್ರಿಟಿಶ್ ಪಡೆ . ಕಾರ್ಮಿಕರು ಹೆಚ್ಚಾಗಿದ್ದ ಪ್ರದೇಶಗಳಲ್ಲಿ [illegible]ಲೊಂದಿಗೆ ಬೀದಿ ಕಾಳಗಗಳೇ [illegible] ರಸ್ತೆ ತಡೆಗಳನ್ನು ನಿರ್ಮಿಸಿ ಕಾರ್ಮಿಕರು [illegible] ನಡೆಸುತ್ತಿದ್ದರು. ಹೇಗೋ [illegible] ಮಹಿಳೆಯರಿಗೆ ಸುದ್ದಿ ತಲುಪಿಸಿ [illegible] ವಿಮಲಾರವರು ಕಚೇರಿಗೆ ಹಿಂದಿರುಗಿದ ಮರುದಿನ ಮಹಿಳಾ ನಾಯಕಿ ಕಮಲಾ ದೋಂದೆ ಬ್ರಿಟಿಷರ ಗುಂಡಿಗೆ ಬಲಿಯಾದ ಸುದ್ದಿ ಬಂತು.

ಆ ಘಟನೆಯನ್ನು ಅಹಲ್ಯಾ ರಂಗ್ನೇಕರ್ ಮಾತಿನಲ್ಲೇ ಕೇಳಿ - " ನಾಲ್ಕು ಲಕ್ಷ ಕಾರ್ಮಿಕರು ಮುಷ್ಕರ ನಡೆಸಿದ್ದರು. ಗಿರಣಿ ಕಾರ್ಮಿಕರು ಅದರ ನೇತೃತ್ವ ವಹಿಸಿದ್ದರು. ಮೈಯೆಲ್ಲಾ ಶಸ್ತ್ರಾಸ್ತ್ರಗಳನ್ನು ತುಂಬಿಸಿಕೊಂಡಿದ್ದ ಬ್ರಿಟಿಶ್ ಪಡೆಗಳು ಜನರ ಮೇಲೆ ಗುಂಡಿನಮಳೆ ಆರಂಭಿಸಿದ್ದ ಸುದ್ದಿ ಬಂದಿತ್ತು. ಅವರು ನಮ್ಮ ಕಚೇರಿಯತ್ತಲೇ ಬರುತ್ತಿದ್ದಾರೆಂಬ ಸುದ್ದಿ ಯೂ ಬಂತು. ನಾವೀಗ ಜನರ ರಕ್ಷಣೆಗೆ ಹೋಗಬೇಕು ಎಂದು ಪಕ್ಷದ ಕಚೇರಿಯಲ್ಲಿದ್ದವರೆಲ್ಲಾ ನಿರ್ಧರಿಸಿದರು. ಕಚೇರಿಯಲ್ಲಿದ್ದ ಮಹಿಳಾ ಸಂಗಾತಿಗಳೂ ವಿವಿಧ ದಿಕ್ಕುಗಳಲ್ಲಿ ಹರಡಿ ಹೋದರು. ನಾನು (ಅಹಲ್ಯಾ), ತಂಗಿ ಕುಸುಮ ರಣದಿವೆ ಮತ್ತು ಕಮಲಾ ದೋಂದೆ ರಸ್ತೆಯಲ್ಲಿ ಹೋಗುತ್ತಿದ್ದಾಗ ಇದ್ದಕ್ಕಿದ್ದಂತೆ ಮಿಲಿಟರಿ ಟ್ಯಾಂಕುಗಳು ಕಾಣಿಸಿಕೊಂಡವು. ಮಕ್ಕಳು ಹೆಂಗಸರೆಡೆ ಮನ ಬಂದಂತೆ ಗುಂಡು ಹಾರಿಸುತ್ತಾ ಬಂದವು.

ಯಾರೋ ಕೂಗಿದರು - " ಬೋರಲು ಮಲಗಿ" ನಾನು ತಕ್ಷಣ ಹಾಗೇ ಮಾಡಿದೆ. ಆದರೆ ಕಮಲಾಗೆ ಆರೆ ಕಿವುಡಾಗಿದ್ದರಿಂದ ಆ ಕೂಗು ಕೇಳಲಿಲ್ಲ. ಗುಂಡು ತಗುಲಿ ಬಿದ್ದಳು. ಹೇಗೋ ಕಮಲಾಳನ್ನು ಆಸ್ಪತ್ರೆಗೆ ಒಯ್ದೆವು. ಅಲ್ಲಿ ಆಕೆ ಕೊನೆಯುಸಿರೆಳೆದಳು. ಕುಸುಮಾಗೆ ಅದುವರೆಗೂ ತನಗೆ ಗುಂಡು ತಗಲಿದ ಬಗೆಗೆ ತಿಳಿದೇ ಇರಲಿಲ್ಲ. ಆ ದಿನ ಒಟ್ಟು 250 ಮಂದಿ ಕೊಲ್ಲಲ್ಪಟ್ಟರು. ಅಂತಹ ದೃಶ್ಯ ಹಿಂದೆಂದೂ ಕಂಡಿರಲಿಲ್ಲ. ಅದೊಂದು ಏಕಪಕ್ಷೀಯ ಯುದ್ಧವಾಗಿತ್ತು. ಎರಡು ತಿಂಗಳ ಕಾಲ ನಮಗೆ ನಿದ್ದೆಯೇ ಬರುತ್ತಿರಲಿಲ್ಲ. ಆ ದೃಶ್ಯಗಳೇ ನಮ್ಮ ಕಣ್ಣೆದುರು ನಿಲ್ಲುತ್ತಿದ್ದವು. ಆದರೂ ಜನ ಹೆದರಲಿಲ್ಲ. ಮಹಿಳೆಯರ, ಮಹಿಳಾ ಕಾರ್ಮಿಕರ, ಗಿರಣಿ ಕಾರ್ಮಿಕರ ದೊಡ್ಡ ಮಹಪ್ರದರ್ಶನಗಳು ನಡೆದವು. ರಾಜಕೀಯ ಚಿತ್ರವೇ ಆಮೇಲೆ ಬದಲಾಯಿತು."

ಈ ಮುಷ್ಕರದ ಬಗ್ಗೆ ನಾವಿಕ ಮುಷ್ಕರ ಸಮಿತಿಯ ಉದ್ಗಾರ "ಮೊತ್ತ ಮೊದಲ ಬಾರಿಗೆ ಸೇನೆಗಳಲ್ಲಿದ್ದವರ ರಕ್ತ ರಸ್ತೆಯ ಮೇಲಿದ್ದವರ ರಕ್ತದೊಂದಿಗೆ ಒಂದು ಸಮಾನ ಗುರಿಸಾಧನೆಗಾಗಿ ಒಟ್ಟಾಗಿ ಹರಿಯಿತು". ನಿಜ ಇದರಲ್ಲಿ ಮಹಿಳೆಯರದ್ದು ಹೆಮ್ಮೆಯ ಪಾತ್ರ



[illegible] ದಿನ ಸಭೆಯಲ್ಲಿ ಮಹಿಳೆಯರು , ಮುಂಬೈ 1944

ಧರ್ಮಾಂಧರ ಗುಂಡಿಗೆ ಎದೆಯೊಡ್ಡಿದಳಾ ತಾಯಿ..............

ಸಿಖ್ ಧರ್ಮದ ಹೆಸರಿನಲ್ಲಿ, ಖಲಿಸ್ತಾನ್ ರಚಿಸುವ ಹುಚ್ಚಿನಲ್ಲಿ ಸಾಮ್ರಾಜ್ಯಶಾಹಿಗಳಿಂದ ಬೆಂಬಲ ಪಡೆದ ಕೆಲವು ಧರ್ಮಾಂಧ ಮೂಢರು ಪಂಜಾಬ್‌ನಲ್ಲಿ ಹಲವಾರು ವರ್ಷಗಳಿಂದ ಮುಗ್ಧ ಜನರನ್ನು ಕೊಲ್ಲುತ್ತಿದ್ದಾರೆ. ಎಡ-ಪ್ರಜಾಸತ್ತಾತ್ಮಕ ಸಂಘಟನೆಗಳ ಮುಖಂಡರು ಅವರಿಂದ ಹತರಾಗಿದ್ದಾರೆ. ಸಿಪಿಐ(ಎಂ), ಎಸ್‌ಎಫ್‌ಐ, ಡಿವೈಎಫ್‌ಐ, ಸಿಐಟಿಯುನ ಹಲವಾರು ಸಂಗಾತಿಗಳು ಹುತಾತ್ಮರಾಗಿದ್ದಾರೆ.

ಈಗ ಬಂದಿದೆ...... ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ (ಎಐಎಡಿಡಬ್ಲ್ಯುಎ)ಸರದಿ.

ಈ ಸಂಘಟನೆಯ ಪಂಜಾಬ್ ಘಟಕವಾದ ಜನವಾದಿ ಸ್ತ್ರೀಸಭಾದ ನಾಯಕಿ ಕಾಮ್ರೇಡ್ ಧನ್ವಂತರ್ ಕೌರ್ ಮತ್ತು ಅವರ 17 ವರ್ಷದ ಮಗನನ್ನು ಭಯೋತ್ಪಾದಕರು ಆಗಸ್ಟ್ 25ರಂದು ಗುಂಡಿಟ್ಟು ಕೊಂದು ಹಾಕಿದರು. ಗುರುದಾಸ್ ಪುರ ಜಿಲ್ಲೆಯ ಖುವಾದಿನ್ ಬಳಿ ದುಷ್ಟರು ಈ ಇಬ್ಬರ ಮೇಲೆ ಗುಂಡಿನ ಮಳೆಗರೆದರು. ಮಗ ಸ್ಥಳದಲ್ಲೇ ಪ್ರಾಣ ತ್ಯಜಿಸಿದ. ಧನ್ವಂತರ್ ಆಸ್ಪತ್ರೆಗೆ ಸಾಗಿಸುವಾಗ ಕೊನೆಯುಸಿರೆಳೆದರು.

ಸಿಪಿಐ(ಎಂ) ನೇತೃತ್ವದ ಮಹಿಳಾ ಸಂಘಟನೆಯ ನಾಯಕಿಯೊಬ್ಬರು ಭಯೋತ್ಪಾದಕರಿಗೆ ಬಲಿಯಾಗಿರುವುದು ಇದೇ ಮೊದಲ ಸಲ ಆಗಿದೆಯೆಂದು ಸುದ್ದಿ ಸಂಸ್ಥೆಗಳು ವರದಿ ಮಾಡಿವೆ. ಕಾಂ. ಧನ್ವಂತರ್‌ರ ಪತಿ ಕಾಂ. ಅಜಿತ್ ಸಿಂಗ್ ಪಕ್ಷದ ನಾಯಕರಾಗಿದ್ದು ಅವರ ಹೆಸರೂ ಕೂಡ ಭಯೋತ್ಪಾದಕರ ಹತ್ಯಾಪಟ್ಟಿಯಲ್ಲಿದೆ.

ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಎತ್ತಿ ಹಿಡಿಯಲು ಭಯೋತ್ಪಾದಕರು, ಪ್ರತ್ಯೇಕತಾವಾದಿಗಳ ವಿರುದ್ಧ ಹೋರಾಟ ನಡೆಸುತ್ತಿರುವ ಸ್ತ್ರೀ ಸಭಾದ ನಾಯಕಿಯೋರ್ವರು ಹೀಗೆ ತಮ್ಮ ಪ್ರಾಣವನ್ನೇ ಅರ್ಪಿಸಿದ್ದಾರೆ.

ಕಾಮ್ರೇಡ್ ಧನ್ವಂತರ್ ಲಾಲ್ ಸಲಾಮ್.

ಗಜ್ರಾಲಾ ಅತ್ಯಾಚಾರ: ವೀಕ್ಲಿ ವಿರುದ್ಧ ಮಹಿಳಾ ಸಂಘಟನೆಯ ದೂರು.

ಉತ್ತರ ಪ್ರದೇಶದ ಗಜ್ರಾಲದಲ್ಲಿ ಇಬ್ಬರು ಮಹಿಳೆಯರ ಮೇಲೆ ನಡೆದ ಅತ್ಯಾಚಾರ ದೇಶಾದ್ಯಂತ ಪ್ರತಿಭಟನೆಯ ಅಲೆಯನ್ನು ಎಬ್ಬಿಸಿತ್ತು. ವಿಶೇಷವಾಗಿ, ಎ.ಐ.ಡಿ.ಡಬ್ಲ್ಯು.ಎ.ಮುಖಂಡರು ಮತ್ತು ಸಿಪಿಐ(ಎಂ) ಸಂಸತ್ ಸದಸ್ಯರ ತಂಡ ಘಟನೆ ಹೊರ ಜಗತ್ತಿಗೆ ತಿಳಿಯುವಂತೆ-ಮಾಡುವಲ್ಲಿ ಸಫಲವಾಗಿತ್ತು.

ಸಾಮಾನ್ಯವಾಗಿ ಅತ್ಯಾಚಾರಕ್ಕೆ ಒಳಗಾದ ಯುವತಿ, ಮಹಿಳೆಯರ ಹೆಸರನ್ನು ಬಹಿರಂಗ ಪಡಿಸುವುದಿಲ್ಲ. ಆದರೆ, ದೇಶದ ಹೆಸರಾಂತ ವಾರಪತ್ರಿಕೆ 'ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ' ತನ್ನ ಆಗಸ್ಟ್ 5-11 ರ ಸಂಚಿಕೆಯಲ್ಲಿ ಗಜ್ರಾಲದ ಅತ್ಯಾಚಾರ ಸಂತ್ರಸ್ತರಿಬ್ಬರ ಹೆಸರುಗಳನ್ನು ಪ್ರಕಟಿಸಿದೆ. ಈ ಕ್ರಮವನ್ನು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಕಟುವಾಗಿ ಖಂಡಿಸಿದೆ.

'ಆಘಾತಕರ ಹಳ್ಳಿ' ಎಂಬ ಶಿರೋನಾಮೆಯ ಈ ಲೇಖನ ಮತ್ತು ಡಾ. ಮೀರಾಸಿಂಗ್ ಅವರೊಂದಿಗೆ ನಡೆಸಿರುವ ಸಂದರ್ಶನ ಅರ್ಧ ಸತ್ಯಗಳಿಂದ ತುಂಬಿದೆ ಮತ್ತು ಅವುಗಳು ವಾಸ್ತವವಾಗಿ ಮಾನಹಾನಿಕರ ರೀತಿಯಲ್ಲಿವೆ ಎಂದು ಎ.ಐ.ಎ.ಡಿ.ಡಬ್ಲ್ಯು.ಎ ಹೇಳಿದೆ.

ಈ ಹಿನ್ನಲೆಯಲ್ಲಿ, ಸಂಘಟನೆಯು ಸಂಬಂಧಪಟ್ಟ ವ್ಯಕ್ತಿಗಳು ಮತ್ತು ನ್ಯಾಯವಾದಿ ಕೀರ್ತಿ ಸಿಂಗ್‌ರ ಜೊತೆ ಸಮಾಲೋಚಿಸಿ ಇಂಡಿಯನ್ ಪೀನಲ್ ಕೋಡ್‌ನ 228 ಅ ಸೆಕ್ಷನ್ ಪ್ರಕಾರ ದಿಲ್ಲಿ ಪೋಲೀಸರಿಗೆ ಆಗಸ್ಟ್ 13 ರಂದು ದೂರನ್ನು ಸಲ್ಲಿಸಿದೆ. ಪತ್ರಿಕೆಯ ಪ್ರಕಾಶಕ, ಸಂಪಾದಕ, ಸಂಬಂಧಿತ ವರದಿಗಾರ ಮತ್ತು ಷೈಲೆ ನೀರಾರ ವಿರುದ್ಧ ಈ ದೂರು. ಕಾನೂನು ಪ್ರಕಾರವಾಗಿ ರಾಜ್ಯ ಅಥವಾ ಕೇಂದ್ರ ಸರಕಾರ ಕೂಡಲೇ ಈ ಪ್ರಕರಣವನ್ನು ಕೈಗೆತ್ತಿಕೊಂಡು ತಪ್ಪಿತಸ್ಥರನ್ನು ಶಿಕ್ಷಿಸುವಂತೆ ಒತ್ತಾಯಿಸಿದೆ.

ಪತ್ರಿಕೆಗಳಲ್ಲಿ ತಮ್ಮ ಹೆಸರು ಪ್ರಕಟವಾಗುವುದರಿಂದ ಅನಗತ್ಯ ಪ್ರಚಾರವಾಗುತ್ತದೆ ಮತ್ತು ಅದರಿಂದಾಗಿ ವಿವಿಧ ಹಂತಗಳಲ್ಲಿ ಕಿರಿಕಿರಿ, ತೊಂದರೆ ಉಂಟಾಗುತ್ತದಾದ್ದರಿಂದ ಅತ್ಯಾಚಾರಕ್ಕೆ ಒಳಗಾದ ಮಹಿಳೆ ತನಗಾದ ಅನ್ಯಾಯವನ್ನು ಸಾಮಾನ್ಯವಾಗಿ ತಿಳಿಸುವುದಿಲ್ಲ ಎನ್ನುವುದು ಮಹಿಳಾ ಚಳುವಳಿಯ ಅನುಭವವಾಗಿದೆ. ಪ್ರತಿಕೂಲವಾದ ಸಾಮಾಜಿಕ ಕಟ್ಟುಪಾಡು-ಧೋರಣೆಗಳಿಂದಾಗಿ ಅತ್ಯಾಚಾರಕ್ಕೀಡಾದವರು ಪದೇಪದೇ ಅವಮಾನ ಅನುಭವಿಸಬೇಕಾಗಿದೆ.ಮಾನಹಾನಿಕರ ಗಾಳಿಸುದ್ದಿಯಿಂದಾಗಿ ಅಂಥವರು ದೈನಂದಿನ ಜೀವನಕ್ಕೆ ಒಗ್ಗುವುದೇ ಕಷ್ಟದ ವಿಷಯವಾಗಿದೆ.

ಈ ಅನುಭವದಿಂದಾಗಿ, ಕಾನೂನನ್ನು ಸೂಕ್ತವಾಗಿ ತಿದ್ದಬೇಕೆಂದು ವಿವಿಧ ಮಹಿಳಾ ಸಂಘಟನೆಗಳು ದೀರ್ಘ ಹೋರಾಟ ನಡೆಸಿವೆ. ಅದರ ಫಲವಾಗಿ ಅತ್ಯಾಚಾರಕ್ಕೆ ಸಂಬಂಧಿಸಿದಂತೆ ಇರುವ ಐ.ಸಿ.ಸಿ. ಸೆಕ್ಷನ್ 376 ಕ್ಕೆ ಸೆಕ್ಷನ್ 228 ಅ ಸೇರ್ಪಡೆಯಾಯಿತು.

ಹೆಸರು ಪ್ರಕಟಣೆಗೆ ನಿಷೇಧ


ಅತ್ಯಾಚಾರಕ್ಕೆ ಒಳಗಾದ ಮಹಿಳೆಯ ಅನುಮತಿಯಿಲ್ಲದೆ ಆಕೆಯ ಹೆಸರನ್ನು ಪ್ರಕಟಿಸುವುದನ್ನು ಈ ಸೆಕ್ಷನ್ 228ಅ ನಿಷೇಧಿಸುತ್ತದೆ.

ಪ್ರಸಕ್ತ ಪ್ರಕರಣದಲ್ಲಿ ಇಲ್ಲಸ್ಟ್ರೇಟೆಡ್ ವೀಕ್ಲಿ ಈ ಸೆಕ್ಷನನ್ನುಸ್ಪಷ್ಟವಾಗಿ ಉಲ್ಲಂಘಿಸಿದೆ. ಹೆಸರುಗಳ ಪ್ರಕಟಣೆಯಿಂದ ತಮಗೆ ತೀವ್ರ ವರ್ಣಿಸಲಸಾಧ್ಯವಾದ ಹತಾಶೆ ಮತ್ತು ಆಕ್ರೋಶ ಉಂಟಾಗಿದೆ ಎಂದು ಅತ್ಯಾಚಾರಕ್ಕೆ ಒಳಗಾದ ಇಬ್ಬರು ಕ್ರೈಸ್ತ ಸನ್ಯಾಸಿನಿಯರು ಸಂಘಟನೆಗೆ ತಿಳಿಸಿದ್ದಾರೆ. ಎ.ಐ.ಐ.ಡಿ.-ಡಬ್ಲ್ಯು.ಎ. ಅವರ ಜತೆಗೆ ನಿರಂತರ ಸಂಪರ್ಕ ಇರಿಸಿಕೊಂಡಿದೆ. ಹೆಸರುಗಳ ಪ್ರಕಟಣೆಯ ಪತ್ರಿಕೆಯ ಕ್ರಮ ಬೇಜವಾಬ್ದಾರಿಯುತ, ಮಾನಹಾನಿಕರ ಮತ್ತು ಕ್ರೂರವಾದುದು ಎಂದು ಎ. ಐ.ಎ.ಡಿ.ಡಬ್ಲ್ಯು.ಎ. ಅಭಿಪ್ರಾಯ ಪಟ್ಟಿದೆ.

ರೈತ-ಕೃಷಿ- ಕಾರ್ಮಿಕರಿಂದ ಧರಣಿ ಸತ್ಯಾಗ್ರಹ

ಪಂಜಾಬ್ ಕಿಸಾನ್ ಸಭಾದ ಕರೆ ನೀಡಿದ ಮೇರೆಗೆ ಕಳೆದ ತಿಂಗಳು ರಾಜ್ಯಾದ್ಯಂತ ಸಾವಿರಾರು ಸಂಖ್ಯೆಯಲ್ಲಿ ರೈತರು ಮತ್ತು ಕೃಷಿಕಾರ್ಮಿಕರು ಧರಣಿ ನಡೆಸಿದರು. ಎಲ್ಲಾ ತಹಸೀಲುಗಳ ಕೇಂದ್ರ ಸ್ಥಳಗಳಲ್ಲಿ ಈ ಕಾರ್ಯಕ್ರಮ ನಡೆಯಿತು.

ಸರಕಾರ ಭರವಸೆ ನೀಡಿರುವಂತೆ 10,000 ರೂ.ಗಳ ವರೆಗಿನ ಸಾಲಮನ್ನಾ, ಬೆಳೆಗಳಿಗೆ ನ್ಯಾಯಬೆಲೆ, ನಿರಂತರ ವಿದ್ಯುತ್ ಸರಬರಾಜು ಮೊದಲಾದ ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟು ರೈತ-ಕೃಷಿಕೂಲಿಗಾರರು ಈ ಚಳುವಳಿ ನಡೆಸಿದರು. ಗಡಿ ಜಿಲ್ಲೆಗಳು ಮತ್ತು ಬೆಟ್ಟ ಪ್ರದೇಶಗಳ ಜನರ ವಿಶೇಷ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಒತ್ತಾಯಿಸಲಾಯಿತು.



ಮೀಸಲಾತಿ ವಿರೋಧಿ ಚಳುವಳಿ

ಮಂಡಲ್ ಆಯೋಗದ ಶಿಫಾರಸಿನನ್ವಯ ಇತರ ಹಿಂದುಳಿದ ಜಾತಿಗಳವರಿಗೆ ಸರಕಾರಿ ಉದ್ಯೋಗಗಳಲ್ಲಿ ಶೇ. 27 ಮೀಸಲಾತಿ ಒದಗಿಸುವುದಾಗಿ ಪ್ರಧಾನ ಮಂತ್ರಿ ವಿ.ಪಿ.ಸಿಂಗ್ ಸಂಸತ್ತಿನಲ್ಲಿ ಪ್ರಕಟಿಸಿದ ಮೇಲೆ ದೇಶಾದ್ಯಂತ ಇನ್ನೊಮ್ಮೆ ಮೀಸಲಾತಿ ವಿರೋಧಿ ಚಳವಳಿ ಉಲ್ಬಣಗೊಂಡಿದೆ.

ಸಾಮಾಜಿಕ ನ್ಯಾಯಕ್ಕಾಗಿ ಮೀಸಲಾತಿ ಬೇಕೆನ್ನುವ ; ಆದರೆ ಮೀಸಲಾತಿಯೇ ಸಮಸ್ಯೆಗೆ ರಾಮಬಾಣವಲ್ಲವೆನ್ನುವುದು ನಮ್ಮ ಪಕ್ಷದ ನಿಲುವು.

ಮೀಸಲಾತಿಯನ್ನು ವಿರೋಧಿಸುವ ಚಳುವಳಿ ನಿಜವಾದ ಸಮಸ್ಯೆಗಳ ವಿರುದ್ಧ ಹೋರಾಡಬೇಕಾದ ಜನರ ಐಕ್ಯತೆಯನ್ನು ಮುರಿಯುವಲ್ಲಿ ಒಂದು ಸಾಧನ. ಇಂಥ ಕಳವಳಕಾರಿ ಸ್ಥಿತಿ ಈಗ ಎಲ್ಲೆಡೆ ಉದ್ಭವವಾಗಿದೆ. ದಿನಕ್ಕೊಂದು ಕಡೆ ಈ ಪಿಡುಗು ಹಬ್ಬುತ್ತಿದೆ.

ಬಹುತೇಕ ಎಲ್ಲಾ ಕಡೆಗಳಲ್ಲಿ ವಿದ್ಯಾರ್ಥಿಗಳೇ ಈ ಚಳವಳಿಯಲ್ಲಿ ಪ್ರಮುಖವಾಗಿ ಭಾಗವಹಿಸಿದ್ದಾರೆ.ದೇಶದ ರಾಜಧಾನಿ ದಿಲ್ಲಿಯಲ್ಲಿ ವಿದ್ಯಾರ್ಥಿಗಳು ಹಲವಾರು ದಿನಗಳಿಂದ ಮೀಸಲಾತಿ ವಿರೋಧಿ ಚಳವಳಿಯಲ್ಲಿ ನಿರತರಾಗಿದ್ದಾರೆ. ಪ್ರತ್ಯೇಕತಾವಾದಿ, ಭಯೋತ್ಪಾದಕ ಚಟುವಟಿಕೆಗಳಿಂದ ಜಮ್ಮು-ಕಾಶ್ಮೀರಕ್ಕೆ ಕೂಡ ಇದು ಕಾಲಿಟ್ಟಿದೆ. ಬಿಹಾರ, ಗುಜರಾತ್, ಹರ್ಯಾಣ, ರಾಜಸ್ಥಾನ, ಮಧ್ಯಪ್ರದೇಶ ಮೊದಲಾದ ರಾಜ್ಯಗಳಲ್ಲಿ ಚಳವಳಿ ನಡೆಯುತ್ತಿದೆ. ಸಾರ್ವಜನಿಕ ಆಸ್ತಿಪಾಸ್ತಿಗೆ ಅಪಾರ ಹಾನಿ ಸಂಭವಿಸಿದೆ.

ಒಂದೆಡೆ ಮೀಸಲಾತಿ ವಿರೋಧಿ ಚಳವಳಿಯಾದರೆ, ಇನ್ನೊಂದೆಡೆ ಮೀಸಲು ಪರವಾದ ಚಳವಳಿಗೆ ಸಿದ್ಧತೆಗಳು ನಡೆಯುತ್ತಿವೆ. ಒಟ್ಟಿನಲ್ಲಿ ಬಡತನದ ವಿರುದ್ಧ, ಉದ್ಯೋಗಾವಕಾಶಕ್ಕಾಗಿ ಹೋರಾಡಬೇಕಾದ ಜನರು ತಪ್ಪು ದಾರಿಗೆಳೆಯಲ್ಪಟ್ಟು ಪರಸ್ಪರ ಸಮರನಿರತರಾಗುವುದನ್ನು ಬಿಟ್ಟು ಐಕ್ಯ ಸಮರಕ್ಕೆ ಮುಂದಾಗಬೇಕಿದೆ. ಮೀಸಲಾತಿ ಬಗ್ಗೆ ರಾಷ್ಟ್ರೀಯ ಸಹಮತ ರೂಪಿಸಬೇಕೆಂದು ಸಿಪಿಐ(ಎಂ) ಪ್ರತಿಪಾದಿಸುತ್ತಿದೆ.

ನೌಕರರ ಸಂಘಟನೆಗಳ ವಿಶೇಷ ಗಮನ ಅಗತ್ಯ

1990 ಮೇ 12ರಿಂದ 15 ರವರೆಗೆ ಕೊಯಮತ್ತೂರಿನಲ್ಲಿ ನಡೆದ ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟದ 7 ನೇ ರಾಷ್ಟ್ರೀಯ ಸಮ್ಮೇಳನ ದುಡಿಯುವ ಮಹಿಳೆಯರ ಬಗ್ಗೆ ಕೈಗೊಂಡ ನಿರ್ಣಯ:

ನಮ್ಮ ದೇಶದಲ್ಲಿ ಮಹಿಳೆಯರು ಹೆಚ್ಚುಹೆಚ್ಚಾಗಿ ಉದ್ಯೋಗಳಿಗೆ, ವಿಶೇಷವಾಗಿ ಸರಕಾರಿ ಉದ್ಯೋಗಗಳಿಗೆ ಸೇರುತ್ತಿದ್ದಾರೆ ಎಂಬ ಅಂಶವನ್ನು ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟದ 7 ನೇ ರಾಷ್ಟ್ರೀಯ ಸಮ್ಮೇಳನವು ಗಮನಿಸಿದೆ. ಕೆಲವು ರಾಜ್ಯಗಳಲ್ಲಿ ಈಗ ಮಹಿಳಾ ನೌಕರರು ರಾಜ್ಯ ನೌಕರರ ಒಟ್ಟು ಸಂಖ್ಯೆಯ ಒಂದು ದೊಡ್ಡ ಭಾಗವಾಗಿ ರೂಪುಗೊಂಡಿರುತ್ತಾರೆ. ಎಲ್ಲಾ ರಾಜ್ಯಗಳಲ್ಲಿ ಟ್ರೇಡ್ ಯೂನಿಯನ್ ಚಳುವಳಿಗಳಲ್ಲಿ ಕೂಡಾ ಇವರು ಹೆಚ್ಚಾಗಿ ಭಾಗವಹಿಸುತ್ತಿದ್ದಾರೆ.

ವಿಶ್ವ ಸಂಸ್ಥೆಯ ವರದಿಯ ಪ್ರಕಾರ ಸಮಾಜದ ಜನಸಂಖ್ಯೆಯ ಅರ್ಧಭಾಗ ಮಹಿಳೆಯರು. ಪುರುಷರಿಗೆ ಹೋಲಿಸಿದರೆ ಅವರು ಕೆಲಸದ ಶೇಕಡಾ 58 ಭಾಗವನ್ನು ನಿರ್ವಹಿಸುತ್ತಾರೆ. ಮತ್ತು ವೇತನದ ಶೇಕಡಾ16 ಭಾಗವನ್ನು ಮಾತ್ರ ಸಂಪಾದಿಸುತ್ತಾರೆ. ಹಿಂದಿನ ಪಾಳೇಗಾರಿ ಪದ್ಧತಿಯ ಅನುಸರಣೆಯಂತೆ, ಇವರು ಪುರುಷ ಪ್ರಧಾನ ಸಮಾಜದಲ್ಲಿ ಸಾಮಾಜಿಕ ತುಳಿತಕ್ಕೆ ಒಳಗಾಗಿದ್ದಾರೆ. ಕೆಲಸದ ಸ್ಥಳಗಳಲ್ಲಿ ಸಮೇತ ಮಹಿಳೆಯರು ಹಲವಾರು ಸಾಮಾಜಿಕ ಭೇದಗಳಿಂದ ಕೂಡಾ ತೊಂದರೆ ಪಡುತ್ತಿದ್ದಾರೆ. ಮೇಲಾಗಿ ಅವರು ಪುರುಷರೊಂದಿಗೆ ಸಮಾನವಾದ ಸಾಮಾಜಿಕ ಹಕ್ಕುಗಳನ್ನು ಅನುಭವಿಸುತ್ತಿಲ್ಲ.ಅಮಾನುಷ ವರದಕ್ಷಿಣೆ ಸಾವುಗಳು ಮತ್ತು ಮಹಿಳೆಯರ ಮೇಲೆ ದೌರ್ಜನ್ಯಗಳ ಪ್ರಕರಣಗಳು ಹೆಚ್ಚುತ್ತಲಿವೆ.

ಪುರುಷ ನೌಕರರಿಗೆ ಇಲ್ಲದೆ ಇರುವ, ಅನೇಕ ವಿಶೇಷ ಸಮಸ್ಯೆಗಳನ್ನು ದುಡಿಯುವ ಮಹಿಳೆಯರು ಹೊಂದಿರುತ್ತಾರೆ. ಆದ್ದರಿಂದ ಅಖಿಲ ಭಾರತ ರಾಜ್ಯ ಸರಕಾರಿ ಒಕ್ಕೂಟ ಮತ್ತು ಅದರ ರಾಜ್ಯ ಸಂಘಟನೆಗಳು ಮಹಿಳಾ ನೌಕರರ ವಿವಿಧ ಸಮಸ್ಯೆಗಳಿಗೆ ವಿಶೇಷ ಗಮನ ಕೊಡಬೇಕೆಂದು ಈ ಸಮ್ಮೇಳನವು ಬಲವಾಗಿ ಅಭಿಪ್ರಾಯಪಡುತ್ತದೆ. ಹೆರಿಗೆ ರಜೆಯ ಅವಧಿಯನ್ನು ಹೆಚ್ಚಿಸುವ ಪ್ರಶ್ನೆ ಮತ್ತು ಅದನ್ನು ಉಪಯೋಗಿಸುವ ಸಮಯ, ಕೆಲಸದ ಸ್ಥಳಗಳಲ್ಲಿ ಶಿಶು ವಿಹಾರಗಳ ಸೌಲಭ್ಯ, ದೊಡ್ಡ ನಗರಗಳಲ್ಲಿ ಸಾರಿಗೆ ಸೌಲಭ್ಯಯೋಗ್ಯವಾದ ಕೆಲಸದ ಪರಿಸರ ಮತ್ತು ಕೆಲಸದ ಸ್ಥಳಗಳಲ್ಲಿ ವಿಶೇಷವಾಗಿ ಆಸ್ಪತ್ರೆಗಳಲ್ಲಿ , ಆರೋಗ್ಯ ಕೇಂದ್ರಗಳಲ್ಲಿ ಭದ್ರತೆ ಇತ್ಯಾದಿಗಳು, ಸರಕಾರಿ ನೌಕರರ ಟ್ರೇಡ್ ಯೂನಿಯನ್‌ಗಳು ವಿಶೇಷವಾಗಿ ಗಮನ ಕೊಡಬೇಕಾದ ಕೆಲವು ಸಮಸ್ಯೆಗಳು.

ತಮ್ಮ ಸರಕಾರಿ ಕೆಲಸಗಳನ್ನು ತೃಪ್ತಿಕರವಾಗಿ ನಿರ್ವಹಿಸುವಂತೆ ಮಹಿಳಾ ನೌಕರರಿಗೆ ಸಹಾಯ ಮಾಡಲು, ಈ ಎಲ್ಲಾ ಮತ್ತು ನರ್ಸಿಂಗ್ ಸಿಬ್ಬಂದಿಗಳ ಕೆಲಸದ ಗಂಟೆ ಮುಂತಾದ ಸಮಾನ ಸಮಸ್ಯೆಗಳನ್ನು ಸಮರ್ಪಕವಾಗಿ ಬಗೆಹರಿಸುವಂತೆ ಸಮ್ಮೇಳನವು ಎಲ್ಲಾ ರಾಜ್ಯ ಸಂಘಟನೆಗಳನ್ನು ಒತ್ತಾಯಿಸುತ್ತದೆ.

ಮೇಲಾಗಿ ಜೊತೆಯಲ್ಲಿ ಜೀವಿಸುವಂತಾಗಲು , ದುಡಿಯುವ ಗಂಡ ಮತ್ತು ಹೆಂಡತಿ ಇಬ್ಬರನ್ನು ಒಂದೇ ಸ್ಥಳದಲ್ಲಿ ನಿಯೋಜಿಸುವಂತೆ , ಎಲ್ಲಾ ಸಂಯೋಜನೆಗಳು ಸರಿಯಾದ ವರ್ಗಾವಣೆ ನೀತಿಗಾಗಿ ಪ್ರಯತ್ನಿಸಬೇಕು. ವಿವಾಹಿತ ಮತ್ತು ಏಕಾಂಗಿ ಮಹಿಳಾ ನೌಕರರ ವರ್ಗಾವಣೆಗಳಿಗೆ ಹೊಂದಾಣಿಕೆಯುಳ್ಳ ನೀತಿಯನ್ನು ಸ್ವೀಕರಿಸಬೇಕು.

ಮಹಿಳಾ ಕಾರ್ಯಕರ್ತರ ಬೆಳವಣಿಗೆಗೆ ಗಮನ

ಆದಾಗ್ಯೂ, ಅತ್ಯಂತ ತೊಂದರೆಗಳನ್ನು ಎದುರಿಸುತ್ತಾ ಮತ್ತು ಕುಟುಂಬದ ಕರ್ತವ್ಯಗಳನ್ನು ಪೂರೈಸುತ್ತಾ ಮಹಿಳಾ ನೌಕರರು ಟ್ರೇಡ್ ಯೂನಿಯನ್‌ಹೋರಾಟ ಮತ್ತು ದಿನನಿತ್ಯದ ಟ್ರೇಡ್ ಯೂನಿಯನ್ ಕೆಲಸದಲ್ಲಿ ಭಾಗವಹಿಸುತ್ತದ್ದಾರೆ ಎಂಬುದನ್ನು ಕೂಡಾ ಈ ಸಮ್ಮೇಳನವು ಅತ್ಯಂತ ಸಮಾಧಾನಕರವಾಗಿ ಗಮನಿಸುತ್ತದೆ. ಟ್ರೇಡ್ ಯೂನಿಯನ್ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮತ್ತು ಒಳ್ಳೆಯ ಟ್ರೇಡ್ ಯೂನಿಯನ್ ಕಾರ್ಯಕರ್ತರನ್ನಾಗಿ ಬೆಳೆಸುವಂತೆ ಮಹಿಳಾ ನೌಕರರಿಗೆ ಸಹಾಯ ಮಾಡುವ ಕೆಲಸಕ್ಕೆ ಟ್ರೇಡ್ ಯೂನಿಯನ್‌ಗಳು ಸಾಕಷ್ಟು ಗಮನ ಕೊಡುತ್ತಿಲ್ಲವೆಂದು ಸಹಾ ಈ ಸಮ್ಮೇಳನವು ವಿಷಾದದಿಂದ ಗಮನಿಸುತ್ತದೆ. ಆದ್ದರಿಂದ ಮಹಿಳಾ ನೌಕರರನ್ನು ಸಮರ್ಥ ಟ್ರೇಡ್ ಯೂನಿಯನ್ ಕಾರ್ಯಕರ್ತರನ್ನಾಗಿ ಮತ್ತು ಅವರನ್ನು ನಾಯಕತ್ವದ ಸ್ಥಾನಕ್ಕೆ ಏರಿಸಲೂ ಸಹಾ ತಯಾರುಗೊಳಿಸುವ ಕೆಲಸಕ್ಕೆ ವಿಶೇಷ ಗಮನ ಕೊಡುವಂತೆ ಈ ಸಮ್ಮೇಳನವು ಎಲ್ಲಾ ರಾಜ್ಯ ಸಂಘಟನೆಗಳನ್ನು ಒತ್ತಾಯಿಸುತ್ತದೆ.

ತಮ್ಮ ಕೆಲಸದ ಸ್ಥಳಗಳಲ್ಲಿ ದುಡಿಯುವ ಮಹಿಳೆಯರ ವಿಶೇಷ ಸಮಸ್ಯೆಗಳನ್ನು ಬಗೆಹರಿಸಲು, ಅವರಿಗೆ ಪುರುಷರಂತೆ ಸಮಾನ ಸಾಮಾಜಿಕ ಹಕ್ಕಿನ ಖಾತರಿಗಾಗಿ ಹೋರಾಡಲು ಮತ್ತು ಅವರನ್ನು ಟ್ರೇಡ್ ಯೂನಿಯನ್ ಚಳುವಳಿಯ ನಾಯಕತ್ವಕ್ಕೆ ತರಲು, ವಿಶೇಷ ಪ್ರಯತ್ನಗಳನ್ನು ಮಾಡುವುದು, ಒಕ್ಕೂಟದ ಸರಿಯಾದ ಬೆಳವಣಿಗೆಯ ದೃಷ್ಟಿಯಿಂದ ಎಲ್ಲಾ ಸಂಯೋಜನೆಗಳಿಗೆ(ಅಫಿಲಿಯೇಟ್ಸ್) ಅತೀ ಹೆಚ್ಚಿನ ಅಗತ್ಯವಾಗಿದೆಯೆಂದು ಈ ಸಮ್ಮೇಳನವು ಬಲವಾಗಿ ಅಭಿಪ್ರಾಯಪಡುತ್ತದೆ.



ಅನಕ್ಷರತೆ, ಅನಾರೋಗ್ಯ ನಿವಾರಣೆಗೆ

ಮಹಿಳೆಯರು ಭಾಗವಹಿಸದೆ ಕ್ರಾಂತಿಯಿಲ್ಲ ಕ್ರಾಂತಿಯಿಲ್ಲದೆ ಮಹಿಳಾ ವಿಮೋಚನೆಯಿಲ್ಲ

"ಮಹಿಳೆಯರು ಎಷ್ಟರ ಮಟ್ಟಿಗೆ ಒಂದು ಕ್ರಾಂತಿಯಲ್ಲಿ ಭಾಗವಹಿಸಿದ್ದಾರೆ, ಎನ್ನುವುದರ ಮೇಲೆ ಆ ಕ್ರಾಂತಿಯ ಸಫಲತೆ ಅವಲಂಬಿಸಿರುತ್ತದೆ." ಎಂದು ಲೆನಿನ್ ಕ್ರಾಂತಿಯಲ್ಲಿ ಮಹಿಳೆಯರ ಪಾತ್ರದ ಬಗ್ಗೆ ಹೇಳಿದ್ದಾರೆ. ಇದು ಪ್ಯಾರಿಸ್ ಕಮ್ಯೂನಿನ ದಿನಗಳಿಂದ ಹಿಡಿದು ಪ್ಯಾಲೆಸ್ಟೀನ್‌ನ "ಇಂತಿಫದಾ" ದಂಗೆಯವರೆಗೆ ಪದೇ ಪದೇ ಚಾರಿತ್ರಿಕ ಸತ್ಯ ಎಂದು ರುಜುವಾತಾಗಿದೆ. ಅದರ ಒಂದು ಚಿತ್ರಣ ಕೆಲವು ದೇಶಗಳ, ಕ್ರಾಂತಿಗಳ, ಚಳುವಳಿಗಳ ಜತೆ ಈ ಕೆಳಗೆ ಕೊಡಲಾಗಿದೆ. "ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಭಾಗವಹಿಸದೆ ಕ್ರಾಂತಿ ಸಾಧ್ಯವಿಲ್ಲ. ಕ್ರಾಂತಿಯಿಲ್ಲದೆ ಮಹಿಳಾ ವಿಮೋಚನೆ ಸಾಧ್ಯವಿಲ್ಲ".

ಲೆನಿನ್‌ರ ಈ ಮಾತು ಅರ್ಥಗರ್ಭಿತವಾದದು. "ಮಹಿಳೆಯರು ಸಾರ್ವಜನಿಕ ಜೀವನದಲ್ಲಿ ಭಾಗವಹಿಸದೆ, ಜನತಾ ಸೈನಿಕರಾಗದೆ, ರಾಜಕೀಯದದಲ್ಲಿ ಪಾತ್ರವಹಿಸದೆ, ಮಹಿಳೆಯರನ್ನು ಜಡ್ಡುಗಟ್ಟಿಸುವ ಮನೆ ಮತ್ತು ಅಡಿಗೆಮನೆಯ ವಾತಾವರಣದಿಂದ ಹೊರತರದೆ, ಸಮಾಜವಾದದ ಮಾತೇಕೆ, ನಿಜವಾದ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಖಾಯಂಗೊಳಿಸುವುದೂ ಸಾಧ್ಯವಿಲ್ಲ."

ನಾನು ಕ್ರಾಂತಿಯ ಮಗಳು

ಜಗತ್ತಿನ ಪ್ರಥಮ ಕಾರ್ಮಿಕ ಕ್ರಾಂತಿಯಲ್ಲಿ ಮಹಿಳೆಯರು

ಜಗತ್ತಿನ ಪ್ರಥಮ ಕಾರ್ಮಿಕ ಕ್ರಾಂತಿಯಾದ 'ಪ್ಯಾರಿಸ್ ಕಮ್ಯೂನ್'ನ ಚಾರಿತ್ರಿಕ ಹಿನ್ನೆಲೆ ಹೇಳಬೇಕಾದರೆ, ಆ ಸಮಯದಲ್ಲಿ ಪ್ಯಾರಿಸ್‌ನ ದುಡಿಯುವ ವರ್ಗಗಳ, ರೈತ ಕಾರ್ಮಿಕರ ಪರಿಸ್ಥಿತಿ ದುರ್ಭರವಾಗಿತ್ತು. ಅದರಲ್ಲೂ ಮಹಿಳೆಯರ ಪರಿಸ್ಥಿತಿ ಇನ್ನೂ ಕಠಿಣವಾಗಿತ್ತು. ಹೆಚ್ಚಿನ ಮಹಿಳೆಯರು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದರು ಅಥವಾ ಕಸೂತಿ ಕೆಲಸ ಮಾಡುತ್ತಿದ್ದರು. ಆದರೂ ಆರ್ಥಿಕ ಪರಿಸ್ಥಿತಿ ತೀರಾ ಕೆಟ್ಟದ್ದಿತು. ಎಷ್ಟೋ ಬಾರಿ ಸೂಳೆಗಾರಿಕೆ ಪೂರಕ ಆದಾಯದ ಒಂದೇ ಮಾರ್ಗವಾಗಿತ್ತು. ಮಹಿಳೆಯರಿಗೆ ಯಾವುದೇ ರಾಜಕೀಯ ಹಕ್ಕುಗಳಿರಲಿಲ್ಲ. 1789 ಮತ್ತು 1848 ರ ಫ್ರೆಂಚ್ ಕ್ರಾಂತಿಗಳು ಮಹಿಳೆಯರ ಸಮಾನತೆ ಬಗ್ಗೆ ಏನೂ ಮಾಡಿರಲಿಲ್ಲ. ಆದ್ದರಿಂದ ಮಹಿಳೆಯರ ಹಕ್ಕುಗಳನ್ನು ಸ್ಥಾಪಿಸಲು ಚಳುವಳಿ ನಡೆಯುತ್ತಿತ್ತು.

ಇಂತಹ ಹಿನ್ನೆಲೆಯಲ್ಲಿ ಫ್ರೆಂಚ್-ಪ್ರಶ್ಯನ್ ಯುದ್ಧವೂ ಆರಂಭವಾಗಿತ್ತು. ಇದರಿಂದ ಕಾರ್ಮಿಕರ ಪರಿಸ್ಥಿತಿ ಇನ್ನಷ್ಟು ದುರ್ಭರವಾಗಿ, ಭಾರಿ ಪ್ರದರ್ಶನಗಳು, ಮುಷ್ಕರಗಳು, ಸಭೆಗಳು ಆರಂಭವಾದವು. 2 ಲಕ್ಷ ಕಾರ್ಮಿಕರ ಪ್ರದರ್ಶನದಲ್ಲಿ ಸಾಕಷ್ಟು ಮಹಿಳೆಯರು ಸೇರಿದ್ದರು. ಈ ನಡುವೆ ಕೆಲವು ಸೈನಿಕರು ದಂಗೆ ಮಾಡಲು ಪ್ರಯತ್ನಿಸಿದರು. ಅವರನ್ನು ಗಲ್ಲಿಗೇರಿಸಲು ನಿರ್ಧರಿಸಲಾಯಿತು. ಈ ಹಂತದಲ್ಲಿ ಮಹಿಳೆಯರು ಅವರ ಪರವಾಗಿ ನಡೆಸಿದ 'ಸಹಿ ಕಾರ್ಯಾಚರಣೆ' ಗವರ್ನರ್ ಮೇಲೆ ನಡೆಸಿದ ಘೇರಾವೋದಿಂದಾಗಿ ಆ ನಿರ್ಧಾರ ವಾಪಸು ಪಡೆಯಬೇಕಾಯಿತು. ಎರಡೇ ದಿನಗಳಲ್ಲಿ 'ಸಾಮ್ರಾಜ್ಯ' ಬಿದ್ದು ಬೂರ್ಜ್ವಾ ಅಧಿಕಾರಕ್ಕೆ ಬಂದರು. ಈ ನಡುವೆ ಯುದ್ಧ ನಡೆದು, ಫ್ರೆಂಚರು ಸೋಲುತ್ತಾ ಜರ್ಮನ್ ಸೈನ್ಯ ಪ್ಯಾರಿಸ್‌ನ ಹೆಬ್ಬಾಗಿಲಿಗೆ ತಲುಪಿ, ಪ್ಯಾರಿಸ್‌ಗೆ ದಿಗ್ಬಂಧನ ಹಾಕಿತು. ಈ ದಿಗ್ಬಂಧನದಲ್ಲಿ ಪ್ಯಾರಿಸು ತತ್ತರಿಸುತ್ತಿರುವಾಗ ನಾತಾಲಿ ಮತ್ತು ಲೂಸಿ ಎಂಬ ಮಹಿಳಾ ನಾಯಕರು ಗಂಜಿ ಕೇಂದ್ರಗಳು, ಸೈನಿಕರ ಉಡುಪು ವಿತರಣೆಮಾಡುವ ಕೆಲಸ, ವೈದ್ಯಕೀಯ ಸಹಾಯಗಳಿಗಾಗಿ ಮಹಿಳಾ ಸಮಿತಿಗಳನ್ನು ರಚಿಸಿದರು.

ಮೊದಲ ಹಂತದಲ್ಲಿ ದಿಗ್ಬಂಧನದಲ್ಲಿದ್ದ, ಪ್ಯಾರಿಸಿನ ರಕ್ಷಣೆಗಾಗಿ ಹೋರಾಟದಲ್ಲಿ ಪೂರಕ ಕೆಲಸ ಮಾಡಿದರೆ, ಎರಡನೆಯ ಹಂತದಲ್ಲಿ ಮಹಿಳಾ ಬೆಟಾಲಿಯನ್ನುರಚಿಸಿ ಹೋರಾಡಬೇಕೆಂದು ಪೋಸ್ಟರುಗಳು ಹಾಕಿಕೊಂಡರು. ಇದನ್ನು ಆಗಿನ ಸರ್ಕಾರ ನಿರಾಕರಿಸಿತು. ಮಹಿಳೆಯರು ರಸ್ತೆ ತಡೆಗಳನ್ನು ನಿರ್ಮಿಸುವ ಮೂಲಕ ಪ್ಯಾರಿಸಿನ ರಕ್ಷಣೆಗೆ ಸಹಾಯ ಮಾಡುತ್ತಿದ್ದರೂ, ಪುರುಷರು ವೀರಾವೇಶದಿಂದ ಹೋರಾಡುತ್ತಿದ್ದರೂ, ಬೂರ್ಜ್ವಾ ಸರ್ಕಾರ ಜರ್ಮನಿಗೆ ಪ್ಯಾರಿಸನ್ನು ಬಿಟ್ಟುಕೊಡುವ ಮೂಲಕ ಶರಣಾಗತವಾಯಿತು. ಪ್ಯಾರಿಸಿನ ಕಾರ್ಮಿಕರ ನ್ಯಾಶನಲ್ ಗಾರ್ಡನ್ನು ಬಗ್ಗಿಸಲು ಸರ್ಕಾರಿ ಸೈನ್ಯ ಅವರಿಂದ 250 ತೋಪುಗಳನ್ನು ಕದಿಯಲು ಪ್ರಯತ್ನಿಸಿತು. ಇದನ್ನು ತಪ್ಪಿಸಲು ರಾತ್ರೋರಾತ್ರಿ ಮಹಿಳೆಯರು-ಮಕ್ಕಳು ಅದನ್ನು ಎತ್ತರದ ಸ್ಥಳಗಳಿಗೆ ಸಾಗಿಸಿದರು. ಇದು ಅವರ ಶಕ್ತಿಯ ದೃಷ್ಟಿಯಿಂದ ಒಂದು ದೊಡ್ಡ ಪವಾಡವೇ ಆಗಿತ್ತು. ನ್ಯಾಶನಲ್ ಗಾರ್ಡ್ ವಿರುದ್ಧ ಹೋರಾಡಲು ಬಂದ ಸರ್ಕಾರಿ ಸೈನ್ಯದ ಮುಂದೆ ಮಹಿಳೆಯರ ಮಾನವ ಗೋಡೆ ನಿರ್ಮಿಸಲಾಯಿತು. ಮಹಿಳೆಯರು ಆ ಸೈನಿಕರಿಗೆ ಮನವಿ ಮಾಡಿಕೊಂಡರು. 'ಭ್ರಾತೃತ್ವ'ದ ಕರೆ ಕೊಟ್ಟರು. ಸೈನಿಕರು ಹಿಂತೆಗೆದರು. ಆ ಮೇಲೆ ನ್ಯಾಶನಲ್ ಗಾರ್ಡ್ ಜತೆ ಕೂಡಿಕೊಂಡರು. ಅವರದೇ ಅಧಿಕಾರಿಗಳನ್ನು ಬಂಧಿಸಿದರು. ಸರ್ಕಾರ ಪಲಾಯನ ಮಾಡಿತು. ನ್ಯಾಶನಲ್ ಗಾರ್ಡ್‌ನ ನೇತೃತ್ವದಲ್ಲಿ ಜನ ಪ್ಯಾರೀಸನ್ನೂ ವಶಪಡಿಸಿಕೊಂಡರು. ಸರ್ಕಾರಿ ಆಫೀಸುಗಳಲ್ಲಿ ಕೆಂಬಾವುಟಗಳನ್ನು ಹಾರಿಸಲಾಯಿತು. ಮೊದಲ ಕಾರ್ಮಿಕ ಪ್ರಭುತ್ವ ಕಮ್ಯೂನನ್ನು ರಚಿಸಿಯಾಯಿತು. 'ಪ್ಯಾರಿಸ್ ಕಮ್ಯೂನನ್ನು' ಘೋಷಿಸಲಾಯಿತು.

'ಪ್ಯಾರಿಸ್ ಕಮ್ಯೂನು' ಉಳಿದ ಹಲವಾರು ಪ್ರಗತಿಪರ ಕ್ರಮಗಳೊಂದಿಗೆ ಮಹಿಳೆಯರ ಸಮಾನತೆಗೆ ಕ್ರಮಗಳನ್ನು ತೆಗೆದುಕೊಂಡಿತು. ಇದರಿಂದ ಮಹಿಳೆಯರು ಪ್ಯಾರಿಸ್ ಕಮ್ಯೂನ್‌ನ ಕಟ್ಟಾ ಬೆಂಬಲಿಗರಾದರು. ಕೆಲವೇ ವಾರಗಳಲ್ಲಿ ಪಲಾಯನಗೊಂಡ ಸರ್ಕಾರ ಪ್ಯಾರೀಸಿನ ರಕ್ಷಣೆಗೆ ಮಹಿಳಾ ಸಮಿತಿಗಳು, ಬೆಟಾಲಿಯನ್ನುಗಳು ಧಾವಿಸಿದವು. ರಸ್ತೆತಡೆಗಳನ್ನು ನಿರ್ಮಿಸಿ ವೈರಿಗಳನ್ನು ತಡೆಯುವುದು ಮಹಿಳೆಯರ ಪ್ರಮುಖ ರಕ್ಷಣಾ ಕ್ರಮವಾಗಿತ್ತು. ರಾತ್ರಿ ಹಗಲು ಚಿಂದಿ ಬಟ್ಟೆಯ, ಸಿಲ್ಕ್‌ಬಟ್ಟೆಯ ಯುವತಿಯರು, ಹುಡುಗಿಯರು, ಮುದುಕಿಯರು ಚೀಲಗಳನ್ನು ಹೆಣೆದರು. ಅದರಲ್ಲಿ ಕಲ್ಲುಮಣ್ಣು ತುಂಬಿಸಿ ಅಡೆತಡೆಗಳನ್ನು ನಿರ್ಮಿಸಿದರು. ಹರೆಯದ ಯುವಕರನ್ನು ಹುರಿದುಂಬಿಸಿ ಯುದ್ಧಕ್ಕೆ ಕಳಿಸಿದರು. ಆಂತರಿಕ ಶತ್ರುಗಳನ್ನು ಹಿಡಿದು ಹಾಕಿದರು. ತಾವೇ ಸ್ವತಃ ರಸ್ತೆತಡೆಗಳಲ್ಲಿ ಗಂಟೆಗಟ್ಟಲೆ ಸೈನ್ಯದ ವಿರುದ್ಧ ಹೋರಾಡಿದರು. ಈ ವೀರಾವೇಶದ ಹೋರಾಟ ಸಹ ಪ್ಯಾರಿಸ್ ಕಮ್ಯೂನು 72 ದಿನಗಳಿಗಿಂತ ಹೆಚ್ಚಿನ ಅವಧಿಗೆ ಇರಲು ಸಾಧ್ಯವಾಗಲಿಲ್ಲ. ಆದರೆ ಪ್ಯಾರಿಸಿನ ಮಹಿಳೆಯರ ರಾಜಕೀಯ ಪ್ರಥಮ ಪಾಠ, ಅವರಿಂದ ಯಾರಿಗೂ ವಾಪಸು ಪಡೆಯಲಾಗಲಿಲ್ಲ.

ಪ್ರಮುಖ ಪ್ಯಾರಿಸ್ ಕಮ್ಯೂನ್ ನಾಯಕಿ ಲೂಸಿ ಮಿಶೆಲ್ ಆಕೆಯ ವಿಚಾರಣೆ ಸಂದರ್ಭದಲ್ಲಿ ಹೇಳಿದಂತೆ 'ನಾನು ಕ್ರಾಂತಿಯ ಮಗಳು'. ನನ್ನ ಎಲ್ಲಾ ಕಾರ್ಯಾಚರಣೆಗಳು ಜವಾಬ್ದಾರಿಯುತವಾಗಿಯೂ ಮಾಡಿದ್ದು. ಆಕೆಯ ಮೇಲಿದ್ದ ಆರೋಪ- ಎರಡು ಜನರಲ್‌ಗಳ ಕೊಲೆ ಇತ್ಯಾದಿ.

'ಇಂತಿಫದಾದಲ್ಲಿ ಮಹಿಳೆಯರು'

'ಇಂತಿಫದಾ' ಪ್ಯಾಲೆಸ್ಟೀನ್‌ನ ನಿಶಸ್ತ್ರ ಕ್ರುದ್ಧ ಜನತೆ, ಜಗತ್ತಿನ ಅತ್ಯಂತ ದೊಡ್ಡ ಮಿಲಿಟರಿ ಶಕ್ತಿಯ ಪೂರ್ಣ ಕುಮ್ಮಕ್ಕಿನಿಂದ ಭಯೋತ್ಪಾದನೆ ಮಾಡುತ್ತಿರುವ ಇಸ್ರೇಲಿನ ಯುದ್ಧಯಂತ್ರದ ವಿರುದ್ಧ ಹೂಡಿರುವ ದಂಗೆಯ ಹೆಸರು. ಇದರಲ್ಲಿ ಈ ಜನತೆಯ ಶಸ್ತ್ರಗಳು ಕಲ್ಲುಗಳು. 'ಇಂತಿಫದಾದ'ಲ್ಲಿ ಮಹಿಳೆಯರ ಮತ್ತು ಮಕ್ಕಳ ಪಾತ್ರ ವಿಶಿಷ್ಟವಾದದ್ದು. ರೋಮಾಂಚಕಾರಿಯಾದದ್ದು. ಮಹಿಳೆಯರು 'ಇಂತಿಫದಾ'ದ ವಿವಿಧ ವಿಭಾಗಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಭಾಗವಹಿಸುತ್ತಿರುವುದು ಮಾತ್ರವಲ್ಲದೆ, 'ಇಂತಿಫದ'ದ ಬೆನ್ನುಲುಬು. ಮಹಿಳೆಯರ ಈ ವ್ಯಾಪಕ ಹೋರಾಟದಿಂದ ಮಾತ್ರವೇ ಈ ದಂಗೆ 2 ವರ್ಷಗಳಿಗಿಂತಲೂ ಹೆಚ್ಚು ದೀರ್ಘ ಅವಧಿಯಲ್ಲಿ ನಡೆಯುತ್ತಿದೆ.

ಇಸ್ರೇಲಿ ಸೈನಿಕರ, ಮಿಲಿಟರಿ ವಾಹನಗಳ ಮೇಲೆ ಕಲ್ಲು ಎಸೆಯುವಲ್ಲಿ ಚಿಕ್ಕ ಹುಡುಗಿಯರು, ಯುವತಿಯರು, ಎಲ್ಲಾ ಪ್ರಾಯದ ಮಹಿಳೆಯರು(ಅಜ್ಜಿಯರೂ ಸೇರಿದಂತೆ) ಭಾಗವಹಿಸುತ್ತಾರೆ. ತಾಯಂದಿರು ಕೋರ್ಟುಗಳಲ್ಲಿ ಕಟಕಟೆಗೆ ತಮ್ಮನ್ನು ಸರಪಣಿಗಳಿಂದ ಕಟ್ಟಿಕೊಂಡು ತನ್ನ ಮಗನನ್ನು ಬಿಡುಗಡೆ ಮಾಡುವವರೆಗೆ ಕೋರ್ಟು ಬಿಡುವುದಿಲ್ಲ. ಇಸ್ರೇಲಿ ದೈತ್ಯರು ಆಗಾಗ, ಕೆಲವೊಮ್ಮೆ ದಿನಗಟ್ಟಲೆ ಹೇರುವ ಕರ್ಫ್ಯೂಗಳನ್ನು ಲೆಕ್ಕಿಸದೆ ಕುಟುಂಬಕ್ಕೆ ಆಹಾರ ತರಲು ಹೋಗುತ್ತಾರೆ. 'ಇಂತಿಫದಾ' ಸಫಲತೆಗೆ ಇನ್ನೂ ಹತ್ತು ಬಗೆಯಲ್ಲಿ ಪ್ಯಾಲೆಸ್ಟೀನ್ ಮಹಿಳೆಯರು ಕಾರಣರಾಗಿದ್ದಾರೆ. ಬೇಹುಗಾರಿಕೆ, ಇಸ್ರೇಲಿ ಸೈನಿಕರಿಗೆ ಕಿರುಕುಳ ಮತ್ತು ಅವರ ಗಮನ ಬೇರೆ ಕಡೆ ಸೆಳೆಯುವುದು, ಕುಟುಂಬದ ಸದಸ್ಯರೆಲ್ಲರ ನೈತಿಕ ಸ್ಥೈರ್ಯ ಕಾಪಾಡುವುದು- ಇದು ಮಹಿಳೆಯರ ಕೊಡುಗೆ 'ಇಂತಫದಾ' - ಇದು ಸಾಧ್ಯವಾಗಿರುವುದು 21 ವರ್ಷಗಳ ಇಸ್ರೇಲಿ ಆಕ್ರಮಣದಲ್ಲಿ, ಮಹಿಳೆಯರು ಸಂಘಟನೆಯ ಜಾಲವನ್ನು, ಆಕ್ರಮಿತ ಪ್ರದೇಶದಲ್ಲಿ ಬೆಳೆಸಿಕೊಂಡಿರುವುದರಿಂದ. ಮಹಿಳೆಯರ ಈ ವ್ಯಾಪಕ ಸಂಘಟನೆಗಳೇ ಯಾವುದೇ ಸರಕಾರ ಒದಗಿಸಬೇಕಾದ ಸಾಮಾಜಿಕ ಸೇವೆಗಳನ್ನು ಒದಗಿಸುತ್ತದೆ- ಸಂಚಾರಿ ಕ್ಲಿನಿಕ್‌ಗಳು, ಆರೋಗ್ಯ ಕೇಂದ್ರ, ಶಿಶುವಿಹಾರ, ಅಂಗನವಾಡಿಗಳು, ಸಾಕ್ಷರತಾ ಶಾಲೆಗಳು, ಮಹಿಳಾ ವೃತ್ತಿ ತರಬೇತಿ ಕೇಂದ್ರಗಳು. ಪ್ಯಾಲೆಸ್ಟೀನ್ ಮಹಿಳಾ ಸಂಘಟನೆಗಳ ಯೂನಿಯನ್ (UPWA) ಪ್ಯಾಲೆಸ್ಟೀನಿಯರ ಕೇಂದ್ರ ಸಂಘಟನೆ.

ಸ್ವಾಭಾವಿಕವಾಗಿಯೇ ಮಹಿಳೆಯರು, ಇಸ್ರೇಲಿ ದಮನಬಂಧನ, ಚಿತ್ರಹಿಂಸೆ ಎದುರಿಸಬೇಕಾಗಿದೆ UPWA ದ ಅಧ್ಯಕ್ಷೆ ಸೇರಿದಂತೆ ನಾಲ್ಕು ಕೇಂದ್ರ ಸಮಿತಿಯ ಸದಸ್ಯರು ಜೈಲಿನಲ್ಲಿ ಚಿತ್ರಹಿಂಸೆಗೆ ಒಳಗಾಗಿದ್ದಾರೆ. 'ಇಂತಿಫದಾ'ದ ಮೊದಲ ಎರಡು ವರ್ಷಗಳಲ್ಲೇ ನಾಲ್ಕು ಸಾವಿರ ಮಹಿಳೆಯರಿಗೆ ಗರ್ಭಪಾತವಾಗಿದೆ. ಇದು ಸೈನಿಕರ ಬಡಿತ, ಚಿತ್ರಹಿಂಸೆ, ಅಶ್ರುವಾಯು ಮತ್ತಿತರ ವಿಷಾನಿಲಗಳ ಪರಿಣಾಮ (ಅಂತರಾಷ್ಟ್ರೀಯವಾಗಿ ನಿಷೇದಿತ ಅನಿಲಗಳನ್ನು ಅಮೇರಿಕ ಇಸ್ರೇಲಿಗೆ ವಿಶೇಷವಾಗಿ ಸರಬರಾಜು ಮಾಡುತ್ತಿದೆ) . ಇಷ್ಟೆಲ್ಲವನ್ನೂ ಎದುರಿಸಿಯೂ 'ಇಂತಿಫದಾ' ಮುಂದುವರೆಯುತ್ತಿದ್ದರೆ, ಅದರ ಹಿಂದಿರುವ ಶಕ್ತಿ ಸಂಘಟಿತ ಮಹಿಳೆಯ ಶಕ್ತಿ.



ವಿಯೆಟ್ನಾಂನ ವಿಮೋಚಿತ ಮಹಿಳೆಯರು

ವಿಯೆಟ್ನಾಂ ಕ್ರಾಂತಿಯಲ್ಲಿ ಮಹಿಳೆಯರ ತುಕಡಿಗಳನ್ನು 'ಉದ್ದ ಕೂದಲಿನ ಸೈನ್ಯ' ಎಂದು ಜನ ಕರೆಯುತ್ತಿದ್ದರು. ಮಹಿಳೆಯರ ಪಾತ್ರ ಅದರಲ್ಲೂ ಅಮೇರಿಕನ್‌ನ ಸಾಮ್ರಾಜ್ಯಶಾಹಿ ವಿರುದ್ಧ, ವಿಯೆಟ್ನಾಂ ಏಕೀಕರಣಕ್ಕಾಗಿ ಹೋರಾಟದಲ್ಲಿ, ವಿಯೆಟ್ನಾಂ ಹೋರಾಟದಷ್ಟೇ ಚಾರಿತ್ರಿಕವಾದುದು. ಆಗಸ್ಟ್ 1945 ರ ಕ್ರಾಂತಿಯಲ್ಲಿ ಫ್ರೆಂಚ್ ವಸಾಹತುಶಾಹಿಯನ್ನು ಕಿತ್ತೊಗೆಯಲು ವಿಯೆಟ್ನಾಂ ಜನತೆಗೆ ಸಾಧ್ಯವಾಯಿತು. ಈ ಕ್ರಾಂತಿ ಮಹಿಳೆಯರನ್ನು ಬಾಧಿಸುತ್ತಿದ್ದ ಎಲ್ಲಾ ಪಾಳೆಯಗಾರಿ ಮೌಲ್ಯಗಳು, ನಿಯಮಗಳನ್ನು ಗಾಳಿಗೆ ತೂರಿಬಿಟ್ಟಿತು. ಮಹಿಳೆಯರಿಗೆ ಭಾರಿ ಪ್ರಮಾಣದಲ್ಲಿ ಸಾಮಾಜಿಕ ಸವಲತ್ತುಗಳನ್ನು ಒದಗಿಸಲು ಆರಂಭಿಸಿತು. ಆದರೆ ಫ್ರೆಂಚ್ ಮತ್ತು ಆಮೇಲೆ ಅಮೇರಿಕನ್‌ರ ಆಕ್ರಮಣ ಈ ಸುಧಾರಣೆಗಳನ್ನು ದೀರ್ಘಕಾಲ ತಡೆಹಿಡಿಯಿತು. ಆದರೆ ಈ ವ್ಯವಸ್ಥೆಯ ಉತ್ತಮ ಗುಣಗಳನ್ನು ಕಂಡ ವಿಯೆಟ್ನಾಂ ಮಹಿಳೆಯರು ಅದರ ರಕ್ಷಣೆಗೆ ಟೊಂಕ ಕಟ್ಟಿ ನಿಂತರು.

ಆಕ್ರಮಣಕಾರಿ ಸಾಮ್ರಾಜ್ಯಶಾಹಿಗಳಿಗೆ ಪ್ರತಿರೋಧದಲ್ಲಿ ಕೆಲಸ ಮಾಡಿದರು. ಮಕ್ಕಳ ಜವಾಬ್ದಾರಿ ಪೂರ್ತಿ ತಾವೇ ಹೊತ್ತರು. ದೊಡ್ಡ ಗುಮಾಸ್ತ ಪಾತ್ರ ವಹಿಸಿದರು. ಅವರು ಒಳಪ್ರದೇಶಗಳಲ್ಲಿ, ಉತ್ತರ ವಿಯೆಟ್ನಾಂನಲ್ಲಿ, ವಿಮೋಚನೆಗೊಂಡ ಪ್ರದೇಶಗಳನ್ನು ಕಾಯುವ 'ಜನತಾ ಸೈನ್ಯ' ದ ಕೆಲಸ ಬಹುಪಾಲು ಮಹಿಳೆಯರದ್ದೇ ಆಗಿತ್ತು. ವೈರಿಯ ಪ್ರದೇಶದಲ್ಲಿ ಹೋರಾಡಿದ ಮಹಿಳಾ ವಿಶೇಷ ಘಟಕಗಳು, ಗೆರಿಲ್ಲಾಗಳು ಲೆಕ್ಕವಿಲ್ಲದಷ್ಟು. ಅಮೇರಿಕನ್ ಯುದ್ಧ ಹಡಗು ಮತ್ತು ವಿಮಾನಗಳ ವಿರುದ್ಧ ತೋಪು ಹಾರಿಸುವ ಘಟಕಗಳಲ್ಲಿ ಮಹಿಳೆಯರು ಹಿಂದೆಬೀಳಲಿಲ್ಲ. ಸಾವಿರಾರು ಮಹಿಳೆಯರು ಯುದ್ಧ ಪ್ರದೇಶಗಳಿಗೆ ಆಹಾರ ಮತ್ತು ಶಸ್ತ್ರಾಸ್ತ್ರ ಪೂರೈಸಲು ಕಠಿಣ ಜವಾಬ್ದಾರಿ ಹೊತ್ತರು. ಹೆಚ್ಚಾಗಿ ತಮ್ಮ ಹೆಗಲುಗಳ ಮೇಲೆ ಬಾಂಬ್, ಗುಂಡುಗಳ ಸುರಿಮಳೆ ಲೆಕ್ಕಿಸದೆ. ತಮ್ಮ ಹಸಿವು, ಬಾಯಾರಿಕೆ ಚಳಿಮಳೆಗಳನ್ನು ಲೆಕ್ಕಿಸದೆ. ಇದಲ್ಲದೆ ಸೈನಿಕರಿಗೆ ಬೇಕಾಗುವ ಪ್ರತಿಯೊಂದು ಧಾನ್ಯ, ಅಕ್ಕಿಕಾಳು, ಬಟ್ಟೆ, ಗುಂಡುಮದ್ದು ಉಳಿಸಿ ರಕ್ಷಿಸಿ ಶೇಖರಿಸುವುದೂ ಅವರ ಜವಾಬ್ದಾರಿಯಾಗಿತ್ತು.

ವಿಮೋಚನಾ ಸೈನ್ಯ ಪ್ರಯಾಣಮಾಡುವ ರಸ್ತೆಗಳು, ಸೇತುವೆಗಳನ್ನು ರಿಪೇರಿ ಮಾಡುವುದು. ಅದರ ರಕ್ಷಣೆಯಿಂದ ಒಂದಿಂಚೂ ಹಿಂದೆ ಸರಿಯದಿರುವುದು ಮಹಿಳಾ ಘಟಕಗಳ ಸಾಮರ್ಥ್ಯ ತೋರಿಸಿತು. ಇದರ ರಕ್ಷಣೆ ಸಾಮಾನ್ಯವಾಗಿ ಆ ಪ್ರದೇಶದ ಮಹಿಳಾ ಘಟಕಗಳದ್ದಾಗಿತ್ತು. ವೈರಿ ಪ್ರದೇಶದೊಳಗಡೆ ಗುಪ್ತಮಾರ್ಗಗಳನ್ನು ಹುಡುಕುವುದು, ಅದನ್ನು ವಿಮೋಚನಾ ಸೈನ್ಯಕ್ಕೆ ತಿಳಿಸುವುದು ಮಹಿಳಾ ಘಟಕಗಳಿಗೆ ನೀರು ಕುಡಿದಂತೆ.

ಈ ಎಲ್ಲಾ ಪಾತ್ರಗಳಲ್ಲಿ ಮಹಿಳೆಯರು ಭಾರೀ ಕಷ್ಟನಷ್ಟಗಳನ್ನು ಅನುಭವಿಸಬೇಕಾಗಿತ್ತೆಂದು ಬೇರೆ ಹೇಳಬೇಕಾಗಿಲ್ಲ. ಅಮೇರಿಕನ್ ಕಾರಾಗೃಹಗಳು, ಹುಲಿಕೆಣೆಯೆಂದು ಕುಖ್ಯಾತ ಗೃಹಗಳು, ಸೈನಿಕರಿಂದ ಚಿತ್ರಹಿಂಸೆ, ಅತ್ಯಾಚಾರ ಇವೆಲ್ಲವನ್ನೂ ವಿಯೆಟ್ನಾಂ ಮಹಿಳೆ ಕ್ರಾಂತಿಗಾಗಿ ಸಹಿಸಿದಳು. ಸಮಾಜವಾದಿ ಸಮಾಜ ವ್ಯವಸ್ಥೆಯ ಸ್ಥಾಪನೆಯಾಗದೆ ಮಹಿಳಾ ವಿಮೋಚನೆಗೆ ಅವಕಾಶವಿಲ್ಲ ಎಂಬ ಪ್ರಜ್ಞೆಯಿಂದ ಸಹಿಸಿದಳು.

ಇದು ಸಾಧ್ಯವಾದದ್ದು ವಿಯೆಟ್ನಾಂ ಮಹಿಳೆಯ ಸುಸಂಘಟಿತ ಶಕ್ತಿಯಿಂದ. ವಿಯೆಟ್ನಾಂ ಮಹಿಳಾ ಸಂಘಟನೆ ಈಗ

ಮಹಿಳಾ ಕ್ರಾಂತಿಕಾರಿಗಳು

ಜಗತ್ತಿನ ಹಲವು ಪ್ರಮುಖ ಕಾರ್ಮಿಕ-ಜಗತ್ತಿನ ಕ್ರಾಂತಿ ಗಳಲ್ಲಿ ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದ್ದು ಮಾತ್ರವಲ್ಲ. ಸಮರ್ಥ ಮಹಿಳಾ ಧುರೀಣರನ್ನು ಸೃಷ್ಟಿಸಿದೆ. ಇದರಲ್ಲಿ ಕೆಲವರನ್ನು ಹೆಸರಿಸಬಹುದು.

ಕ್ರುಪ್‌ಸ್ಕಯಾ ಲೆನಿನ್

ರಶ್ಯನ್ ಕ್ರಾಂತಿಯ ನೇತೃತ್ವ ವಹಿಸಿದ ಬೋಲ್ಶೆವಿಕ್ ಕೇಂದ್ರ ಸಮಿತಿಯ ಸದಸ್ಯೆಯಾಗಿದ್ದು ವೈಯಕ್ತಿಕವಾಗಿ ರಶ್ಯನ್ ಕ್ರಾಂತಿಗೆ ಅವರ ಕೊಡುಗೆ ಅಪಾರ. ಲೆನಿನ್‌ರ ಬಾಳ ಸಂಗಾತಿ ಕೂಡಾ ಆಕೆ.

ಲಾ ಪಾಸನಾರಿಯಾ-

ಎಂದು ಪ್ರಸಿದ್ಧರಾದ ಸ್ಪಾನಿಷ್ ಕಮ್ಯುನಿಸ್ಟ್ ಪಕ್ಷದ ಸ್ಥಾಪಕ ಸದಸ್ಯೆಯರಲ್ಲಿ ಒಬ್ಬರಾದ ಡಾಲೋರೆಸ್ ಇಬ್ಬಾರುರಿ. ಆಕೆಯ ಪ್ರಖ್ಯಾತ ಘೋಷಣೆ 'ಅವರನ್ನು ಹೋಗಗೊಡೆವು'. ಫ್ಯಾಸಿಸ್ಟ್-ವಿರೋಧಿ ಹೋರಾಟದ ರಣಕಹಳೆಯಾಗಿತ್ತು.

ರೋಸಾ-ಲಕ್ಸಂಬರ್ಗ್

ಜರ್ಮನ್ ಕಮ್ಯುನಿಸ್ಟ್ ಪಕ್ಷದ ಸ್ಥಾಪಕ ಸದಸ್ಯರಲ್ಲಿ ಒಬ್ಬರು. ಅಂತ ರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿ ಯಲ್ಲಿ ಅತ್ಯಂತ ಮೇಧಾವಿ ಸಿದ್ಧಾಂತಿ ಎಂದು ಹೆಸರಾದ ಕಮ್ಯುನಿಸ್ಟ್ ನಾಯಕಿ. ಜರ್ಮನಿಯ ಬೀದಿಯೊಂದರಲ್ಲಿ ಪ್ರತಿಗಾಮಿಗಳಿಂದ ಕೊಲೆಯಾಗಿ ಹುತಾತ್ಮರಾದರು.

K R N M/ BGW - 293 MAG (2) PRB DECR 319 - 78/79

ವಿಳಾಸ:

ಕ್ರಾಂತಿಯಿಲ್ಲದೆ..............

ಪುಟ 7 ರಿಂದ

ಸುಮಾರು 58 ವರ್ಷ ಹಳೆಯದು. ಅದರ ಸದಸ್ಯತ್ವ ಸುಮಾರು 1 ಕೋಟಿ. ಅಮೇರಿಕನ್ ಸಾಮ್ರಾಜ್ಯಶಾಹಿಗಳನ್ನು ಬಡಿದೋಡಿಸಿ ಏಕೀಕರಣವಾದ ನಂತರವೂ ಮಹಿಳೆಯರ ಪಾತ್ರ ಇನ್ನೂ ದೊಡ್ಡ ಪ್ರಮಾಣದಲ್ಲಿ ಮುಂದುವರಿದಿದೆ. ದೇಶದ ಪುನರ್ರಚನೆಯ ಕಾರ್ಯಕ್ಕಾಗಿ ಆಕೆ ಅಷ್ಟೇ ತ್ಯಾಗ ಮಾಡುತ್ತಿದ್ದಾಳೆ. ತನ್ನ ಶ್ರಮದ ಫಲ ಸಮಾನ ಹಕ್ಕುಗಳನ್ನು ಪಡೆದಿದ್ದಾಳೆ.

1945 ರ ಕ್ರಾಂತಿಯ ಮೊದಲು ಕೇವಲ ಶೇಕಡಾ 2 ಮಹಿಳೆಯರು ಅಕ್ಷರಸ್ಥರಾಗಿದ್ದರು. ಉತ್ತರ ವಿಯೇಟ್ನಾಂನಲ್ಲಿ ಮೂರು ವರ್ಷಗಳ ಭಾರಿ ಚಳುವಳಿಯ ಫಲವಾಗಿ 1958 ರಲ್ಲಿ ಪೂರ್ಣ ಸಾಕ್ಷರತೆ ಸಾಧಿಸಲಾಯಿತು. ದಕ್ಷಿಣ ವಿಯೆಟ್ನಾಂನಲ್ಲಿ 1976-78 ರಲ್ಲಿ ಇಂತಹುದೇ ಚಳುವಳಿಯ ನಂತರ ಪೂರ್ಣ ಸಾಕ್ಷರತೆ ಸಾಧ್ಯವಾಯಿತು.

ಈಗ ವಿಯೇಟ್ನಾಂನ ಉದ್ಯೋಗಿಗಳಲ್ಲಿ ಶೇಕಡಾ 46 ಮಹಿಳೆಯರು. ಕೆಲವು ಕ್ಷೇತ್ರಗಳಲ್ಲಿ ಮಹಿಳೆಯರೇ ಬಹು ಸಂಖ್ಯಾತರು. ಉದಾಹರಣೆಗೆ- ಸಾರ್ವಜನಿಕ ಆರೋಗ್ಯ-ಶೇಕಡಾ 81, ಶಿಕ್ಷಣ ಶೇಕಡಾ- 72, ಲಘು ಕೈಗಾರಿಕೆ-ಶೇಕಡಾ 65.

ಸ್ಯಾಂಡಿನೋನ ಹೆಣ್ಣು ಮಕ್ಕಳು

ಸ್ಯಾಂಡಿನೋ ನಿಕರಾಗುವದ ಸ್ವಾತಂತ್ರ್ಯ ಹೋರಾಟದ ಪ್ರತೀಕ. ಸ್ವಾತಂತ್ರ್ಯ ಹೋರಾಟಗಾರನಿಗೆ ಇನ್ನೊಂದು ಹೆಸರು ಇದ್ದ ಹಾಗೆಯೇ ನಿಕರಾಗುವದ ಇಂದಿನ ಪೀಳಿಗೆಯ ಸ್ವಾತಂತ್ರ್ಯ ಹೋರಾಟಗಾರರು 'ಅವನ ಮಕ್ಕಳು' ಎಂದುಕೊಳ್ಳಲು ಹೆಮ್ಮೆ ಪಡುತ್ತಾರೆ. ಸ್ಯಾಂಡಿನಿಸ್ತಾ ರಾಷ್ಟ್ರೀಯ ವಿಮೋಚನಾ ರಂಗದ (FSLN) ಸಾವಿರಾರು ಸಶಸ್ತ್ರ ಗೆರಿಲ್ಲಾ ಹೋರಾಟಗಾರರಲ್ಲಿ ಮೂವರಲ್ಲಿ ಒಬ್ಬಳು ಹೆಣ್ಣು. 1977 ರಲ್ಲಿ 'ರಾಷ್ಟ್ರೀಯ ಸಮಸ್ಯೆಗಳನ್ನೆದುರಿಸಲು ನಿಕರಾಗುವದ ಮಹಿಳೆಯರು ಸಂಘಟನೆಗೆ ಆರಂಭಿಸಿದ್ದರೂ. 1979 ರಲ್ಲಿ ವಿಮೋಚನೆಯ ಹೊತ್ತಿಗೆ ಶೇಕಡಾ 30 ಗೆರಿಲ್ಲಾಗಳು ಮಹಿಳೆಯರಾಗಿದ್ದರು.

ಗ್ಲಾಡಿಸ್ ಬೆಯಾಜ್ ಸೋಶಲಿಸ್ಟ್ ಪಕ್ಷದ ಕಾರ್ಯಕರ್ತೆಯಾಗಿದ್ದು, ಅವರ 'ಶಾಂತಿಯುತ್' ಹೋರಾಟದ ವಿಫಲತೆ ಯಿಂದ ಮತ್ತು ಮಹಿಳಾ-ವಿರೋಧಿ ಧೋರಣೆಯಿಂದ ಬೇಸತ್ತು FSLN ಸೇರಿದವಳು. ಆಕೆ ಪ್ರಥಮ ಮಹಿಳಾ ಗೆರಿಲ್ಲಾ ಹೋರಾಟಗಾರ್ತಿ. ದೋರಾ ಮರಿಯಾ ತೆಲ್ಲೆಜ್ ಗೆರಿಲ್ಲಾ ಹೋರಾಟ ಸೇರಿದ್ದು 16 ವರ್ಷಕ್ಕೆ, ಇನ್ನೂ ವೈದ್ಯಕೀಯ ವಿದ್ಯಾರ್ಥಿನಿಯಾಗಿದ್ದಾಗಲೇ. ಈಕೆ ಆಗಸ್ಟ್ 78 ರಲ್ಲಿ ರಾಷ್ಟ್ರೀಯ ಅರಮನೆಯ ಮೇಲೆ ನಡೆದ ಪ್ರಸಿದ್ಧ ಗೆರಿಲ್ಲಾ ಆಕ್ರಮಣದ ಕಮಾಂಡರ್ ಆಗಿದ್ದಳು. ಕಾರ್ಮಿಕ ಪಾಲಕರ ಮಗಳಾದ ಮೊನಿಕಾ ಬಾಲ್ ಟೊಡಾನೋ ನಿಕರಾಗುವದ ರಾಜಧಾನಿಯನ್ನು ಗೆದ್ದ ಗೆರಿಲ್ಲಾ ಹೋರಾಟದ ಮೂರು ಕಮಾಂಡರ್‌ಗಳಲ್ಲಿ ಒಬ್ಬಳಾಗಿದ್ದಳು. ಆಕೆ ಕ್ರಿಶ್ಚಿಯನ್ ಶಾಂತಿ ಪರ ಚಳುವಳಿಯ ಕಾರ್ಯಕರ್ತೆಯಾಗಿದ್ದು ಕ್ರಮೇಣ ಗೆರಿಲ್ಲಾ ಹೋರಾಟದ ಅಗತ್ಯ ಕಂಡುಕೊಂಡವಳು. ಮೆಲಾನಿಯಾ ಡೆವಲಾ 18 ವರ್ಷದಲ್ಲಿ ಸೂಳೆಗಾರಿಕೆ ವೃತ್ತಿಗೆ ತಳ್ಳಲ್ಪಟ್ಟವಳು. ಆಕೆಯ ದುರ್ಭರ ಬದುಕು ಆಕೆಯನ್ನು ವಿಮೋಚನೆಗಾಗಿ ಸಶಸ್ತ್ರ ಹೋರಾಟ ಅಗತ್ಯ ಎಂದು ಕಲಿಸಿತು. ಆಕೆಯ 17 ವರ್ಷದ ಮಗ ವಿಮೋಚನೆಯ ಕೆಲವು ತಿಂಗಳುಗಳ ಮೊದಲ ಗೆರಿಲ್ಲಾ ಹೋರಾಟ ದಲ್ಲಿ ಮಡಿದ. ಅಲ್ಮಾ ಬಾಲ್‌ಟೋಡಾನೋ 14 ವರ್ಷಕ್ಕೆ FSLN ಸೇರಿದವಳು. ಗೆರಿಲ್ಲಾ ಹೋರಾಟದಲ್ಲಿ ಆಕಸ್ಮಾತ್ತಾಗಿ ಕೈಯಲ್ಲೇ ಬಾಂಬ್ ಸಿಡಿದು ಎರಡು ಕೈಗಳನ್ನು ಕಳಕೊಂಡವಳು. ನೋರಾ ಅಸ್ಟೋಗಾ ಎಂಬ ಮಹಿಳೆ ಕುಖ್ಯಾತ ನ್ಯಾಶನಲ್ ಗಾರ್ಡ್‌ನ ಕುಖ್ಯಾತ ಜನರಲ್ ಒಬ್ಬನನ್ನು ಮನೆಗೆ ಆಕರ್ಷಿಸಿ, ಮನೆಯಲ್ಲೇ ಅತನನ್ನು ಕೊಲೆ ಮಾಡಿದಳು. ಕ್ರಾಂತಿಯ ನಂತರ ಆಕೆ ಮಾಜಿ ನ್ಯಾಶನಲ್ ಗಾರ್ಡ್‌ಗಳನ್ನು ಕಾನೂನಿನ ಪ್ರಕಾರ ಶಿಕ್ಷಿಸುವ ವಿಶೇಷ ಅಟಾರ್ನಿ ಜನರಲ್ ಮಾಡಲಾಯಿತು. ಮಾರ್ತಾ ಕ್ಯಾಥೋಲಿಕ್ ಸಿಸ್ಟರ್. ಸೋಮೋಝ ಸರ್ವಾಧಿಕಾರದ ವಿರುದ್ಧ ಸಶಸ್ತ್ರ ಹೋರಾಟ ಸಮರ್ಥಿಸಿ ಭಾಗವಹಿಸಿದ ಕ್ಯಾಥೋಲಿಕ್ ಚರ್ಚ್‌ನ ಪ್ರಗತಿಪರ ... ಸೇರಿದವಳು.

ಇವರೆಲ್ಲರನ್ನು ನಿಕರಾಗುವದ ಸೋಮೋಝ ಸರ್ವಾಧಿಕಾರದ ವಿರುದ್ಧ ಸ್ಯಾಂಡಿನಿಸ್ತಾ ಹೋರಾಟ ಆಕರ್ಷಿಸಿದ್ದು ಹೇಗೆ? ನಿಕರಾಗುವ (ಹೆಚ್ಚು ಕಡಿಮೆ ಮಧ್ಯ ಅಮೆರಿಕಾದ ಇತರ ದೇಶಗಳಲ್ಲಿ ಕೂಡಾ) ದಲ್ಲಿ ಮಹಿಳೆಯರ ಹೆಚ್ಚು ಕಡಿಮೆ ಕುಟುಂಬದ ಕೇಂದ್ರ- ಭಾವನಾತ್ಮಕವಾಗಿ, ಸೈದ್ಧಾಂತಿಕವಾಗಿ, ಮತ್ತು ಆರ್ಥಿಕವಾಗಿ ಕೂಡಾ. ಇದು ಕಾರ್ಮಿಕನ, ರೈತ ಮಹಿಳೆಯರ ಮಟ್ಟಿಗೆ ಹೆಚ್ಚು ನಿಜ. ಏಕೆಂದರೆ ಹೆಚ್ಚಾಗಿ ನಿರುದ್ಯೋಗಿ ಗಂಡಂದಿರು ಅವರನ್ನು ತ್ಯಜಿಸಿರುತ್ತಾರೆ. ಆಗ ಅವರು ದುಡಿದು ಕುಟುಂಬದ ಎಲ್ಲಾ ಹೊರೆ ಹೊರಬೇಕಾಗುತ್ತದೆ. ಅವರ ... ವರ್ಗಸ್ಥಿತಿ, ಅವರನ್ನು ಸೋಮೋಝ-ಸರ್ವಾಧಿಕಾರಿ ವಿರುದ್ಧ ... ತೊಡಗಿಸುತ್ತದೆ. ಹಲವು ಮಹಿಳೆಯರು ಮಕ್ಕಳ (ಕೆಲವೊಮ್ಮೆ ಹದಿ ಹರೆಯದ) ರಾಜಕೀಯ ಹತ್ಯೆ ವಿರುದ್ಧಪ್ರತಿಭಟನೆ ಯಲ್ಲಿ ಚಳುವಳಿಗೆ ... ಇದೆ.

ಸ್ಯಾಂಡಿನಿಸ್ತಾ ಮಹಿಳೆಯರ ಈ ಪಾತ್ರ ಕ್ರಾಂತಿ ನಂತರದ ಪ್ರವ...ಸಾಮಾಜಿಕ ರಾಜಕೀಯ ಬದಲಾವಣೆಗಳಲ್ಲಿ ಅವರದೇ ಮುದ್ರೆ ಒತ್ತಿದೆ. ಕ್ರಾಂತಿಯ ..., ಮುನ್ನಡೆಗೆ ಭದ್ರ ಬುನಾದಿ ಹಾಕಿದೆ.

ಮತ್ತೆ ಆ ದಾಸ್ಯ ಬೇಡ

1978 ರ ಏಪ್ರಿಲ್ ಕ್ರಾಂತಿಯ ಮೊದಲು ಕೇವಲ 2% ಅಫಘಾನ್ ಮಹಿಳೆಯರು ಓದು-ಬರಹ ಬಲ್ಲವರಾಗಿದ್ದರು. 8 ವರ್ಷಗಳ ನಂತರ 1986 ರಲ್ಲಿ 85 ಸಾವಿರ ಮಹಿಳೆಯರು ಸಾಕ್ಷರತಾ ಕೋರ್ಸ್‌ಗಳಲ್ಲಿ ಕಲಿಯುತ್ತಿದ್ದಾರೆ. ಕೈಗಾರಿಕೆಗಳಲ್ಲಿ ಮಹಿಳೆಯರ ಸಂಖ್ಯೆ 5 ಪಟ್ಟು ಹೆಚ್ಚಿದೆ.

ಇದು ಹೇಗೆ ಸಾಧ್ಯವಾಯಿತು? ಸೌರ ಕ್ರಾಂತಿಯ ನಂತರ ಮಹಿಳಾ ಉದ್ಧಾರಕ್ಕೆ ಹೆಚ್ಚಿನ ಪ್ರಾಧಾನ್ಯ ನೀಡಲಾಯಿತು. 1978 ರಿಂದ ಅಫಘಾನಿಸ್ತಾನ್ ಕುಟುಂಬ ಮಾರ್ಗ ದರ್ಶನ ಸಂಘ ಕಾರ್ಯ ನಿರ್ವಹಿಸುತ್ತಿದೆ. ಒಂದು ಮಹಿಳಾ ಸಂಯೋಜಕ ಸಮಿತಿ ರಚಿಸಲಾಯಿತು. ಈ ಸಮಿತಿ ಮಹಿಳೆಯರಿಗೆ ಸಾಕ್ಷರತಾ ಕೋರ್ಸ್‌ಗಳನ್ನು ನಡೆಸಿದೆ. ಮಹಿಳೆಯರು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ರಂಗದಲ್ಲಿ, ಮಹಿಳೆಯರು ಪಾತ್ರ ವಹಿಸುವಂತೆ ಮಾಡಿದೆ.

ಈಗ ಅಫಘಾನ್ ಮಹಿಳೆಯರ ಮುಂದಿರುವ ಪ್ರಶ್ನೆಯೆಂದರೆ- ಅಫಘಾನ್‌ದಲ್ಲಿ ಸರ್ಕಾರ ಬದಲಾದರೆ ಈ ಸುಧಾರಣೆ ಮುಂದುವರಿಯುವದೆ? ಸಾಮ್ರಾಜ್ಯಶಾಹಿ ಮೂಲಭೂತವಾದಿಗಳಕೈ ಮೇಲಾಯಿತೆಂದರೆ ಒಂದೇ ಏಟಿಗೆ ಧಾರ್ಮಿಕ ಮೂಲಭೂತ ವಾದಿಗಳು ಮಹಿಳೆಯರನ್ನೂ ಮತ್ತೆ ಹನ್ನೆರಡು ವರ್ಷಗಳ ಹಿಂದಿನ ದಾಸ್ಯಕ್ಕೆ ತಳ್ಳಬಹುದು. ಈ ಅಪಾಯದ ಅರಿವಿರುವ ಅಫಘಾನ್ ಮಹಿಳೆಯರು 'ದುಶ್ಮನ್'ಗಳ ವಿರುದ್ಧ ಪ್ರತಿರೋಧದಲ್ಲೂ ಸಕ್ರಿಯರಾಗಿದ್ದಾರೆ.

ಮಹಿಳಾ ಸಂಘಟನೆ

ಪುಟ 5 ರಿಂದ

ಎ.ಐ.ಡಬ್ಲ್ಯು.ಸಿ. ಸಹಜವಾಗಿಯೇ ಕಾಂಗ್ರೆಸ್‌ನೊಂದಿಗೆ ರಾಜಿ ನಿಲುವು ತಳೆಯಿತು. ಎನ್.ಎಫ್.ಐ. ಡಬ್ಲ್ಯು. ಕೂಡಾ ಕ್ರಮೇಣ ಅದೇ ನಿಲುವು ತಳೆಯಲಾರಂಭಿಸಿತು. ಈ ಸಂಧರ್ಭದಲ್ಲಿ ಮಹಿಳಾ ಆಂದೋಲನ ತನ್ನ ಗುರಿಯತ್ತ ಅಂದರೆ ನಿಜವಾದ ಮಹಿಳಾ ಸಮಾನತೆಗೆ ಅವಕಾಶ ನೀಡಬಲ್ಲ ಸಾಮಾಜಿಕ ಪರಿವರ್ತನೆಯತ್ತ ಸಾಗಬೇಕಾದರೆ ಶ್ರಮಜೀವಿ ಮಹಿಳೆಯರನ್ನು- ಕಾರ್ಮಿಕ, ರೈತ, ಮಧ್ಯಮವರ್ಗದ ಮಹಿಳೆಯರು ಪ್ರಮುಖ ಶಕ್ತಿಯಾಗುಳ್ಳ ಒಂದು ಮಹಿಳಾ ಸಂಘಟನೆಯ ಅಗತ್ಯವಿತ್ತು. ಬೂರ್ಜ್ವಾ-ಭೂಮಾಲಕ ಆಳ್ವಿಕೆ ಹೇರಿದ ಸಮಾಜಿಕ-ಆರ್ಥಿಕ ಪರಿಸ್ಥಿತಿಗಳ ವಿರುದ್ಧ ಹೋರಾಟ ನಡೆಸುತ್ತಿದ್ದ ಸಿ.ಪಿ.ಐ.(ಎಂ) ಈ ದಿಕ್ಕಿನಲ್ಲಿ ಮೊದಲ ಹೆಜ್ಜೆಯಿಟ್ಟಿತು. ಪರಿಣಾಮವಾಗಿ ಅಖಿಲಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘ (ಎ.ಐ.ಡಿ. ಡಬ್ಲ್ಯು.ಎ.) ಸ್ಥಾಪನೆಗೊಂಡಿತು. 1981 ರ ಮಾರ್ಚ್ 10-12 ರ ವರೆಗೆ ಮದ್ರಾಸಿನಲ್ಲಿ ಈ ಸಂಘದ ಮೊದಲ ಸಮ್ಮೇಳನ ನಡೆಯಿತು. 16 ರಾಜ್ಯಗಳ 20 ಲಕ್ಷಕ್ಕೂ ಹೆಚ್ಚು ಮಹಿಳೆಯರನ್ನು ಇದು ಒಂದು ಅಖಿಲ ಭಾರತ ಸಂಘಟನೆಯರಿಗೆ ತಂದಿತು.

"ಪ್ರಜಾಪ್ರಭುತ್ವ, ಸಮಾನತೆ, ಮಹಿಳಾ ವಿಮೋಚನೆ" ಈ ಸಂಘಟನೆಯ ಧ್ಯೇಯ ವಾಕ್ಯ. "ಭಾರತ ನಗರಗಳು ಮತ್ತು ಹಳ್ಳಿಗಳಲ್ಲಿರುವ ಮಹಿಳಾ ಸಮೂಹವನ್ನು ಸಂಘಟಿಸುವ ಕೆಲಸವನ್ನು ಅ.ಭಾ.ಪ್ರ.ಮ .ಸಂಘ ವಹಿಸಿಕೊಳ್ಳುತ್ತದೆ ಮತ್ತು ಮಹಿಳಾ ಜನಾಂಗದ ಉನ್ನತಿ ಮತ್ತು ಸುಧಾರಣೆ ಗಾಗಿ, ಗಂಡಸು ಮತ್ತು ಹೆಂಗಸಿನ ನಡುವೆ ಇರುವ ಎಲ್ಲ ವ್ಯಾತ್ಯಾಸಗಳನ್ನು ನಿರ್ಮೂಲ ಗೊಳಿಸುವುದಕ್ಕಾಗಿ ಪ್ರಜಾಪ್ರಭುತ್ವ, ಸಮಾನ ಹಕ್ಕುಗಳು, ಮಹಿಳೆಯರ ವಿಮೋಚನೆ ಇವುಗಳಿಗಾಗಿ, ಶೋಷಣಾ ರಹಿತ ಸಮಾಜಕ್ಕಾಗಿ, ಬಲಿಷ್ಠವಾದ ವಿಶಾಲ ತಳಹದಿಯ ಮಹಿಳಾ ಚಳುವಳಿಯನ್ನು ಕಟ್ಟುವ ಕರ್ತವ್ಯವನ್ನು ಸಂಘ ಹೊತ್ತುಕೊಳ್ಳುತ್ತದೆ" ಎಂದು ಅದು ಘೋಷಿಸಿತು.

"ಸಮಾಜದ ವಿವಿಧ ಸ್ತರಗಳಿಂದ ಬಂದಿರುವ ಭಾರತೀಯ ಮಹಿಳೆಯರು ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಮತ್ತು ಸಾಮಾಜಿಕ ಅನ್ಯಾಯಗಳ ವಿರುದ್ಧ ನಡೆಸಿದ ಹೋರಾಟಗಳಲ್ಲಿ ಭಾಗವಹಿಸಿರುವ ಉಜ್ವಲವಾದ ಪರಂಪರೆ ಹೊಂದಿದ್ದಾರೆ. ಆ ಹುತಾತ್ಮರ ಉಜ್ವಲ ಪರಂಪರೆಯನ್ನು ಮುನ್ನಡೆಸಲು ಮತ್ತು ಮಹಿಳೆಯರ ವಿರುದ್ಧ ಪಕ್ಷಪಾತವಿಲ್ಲದ, ಅವರ ಶೋಷಣೆಯಿಲ್ಲದ ಸಾಮಾಜಿಕ ವ್ಯವಸ್ಥೆಗಾಗಿ ಮತ್ತು ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಹೋರಾಟ ನಡೆಸಲು" ಎ.ಐ.ಡಿ.ಡಬ್ಲ್ಯು.ಎ. ಪ್ರತಿಜ್ಞೆ ತೊಟ್ಟಿತು.

ಕತ್ತೆ ಮತ್ತೆ ಅರಚುತ್ತಿದೆ-ಕೇಳಿದಿರಾ?

ಆರ್.ಎಸ್.ಎಸ್.ನ ತುತ್ತೂರಿ "ಆರ್ಗನೈಸರ್" ತನ್ನ ಜುಲೈ 22 ರ ಸಂಚಿಕೆಯಲ್ಲಿ ಒಂದು 'ಮಹತ್ವದ' ಸುದ್ದಿ ಪ್ರಕಟಿಸಿದ್ದಕ್ಕೆ ತನ್ನ ಬೆನ್ನು ತಟ್ಟಿಕೊಂಡಿತ್ತು. ಅದು ಸಿ.ಪಿ.ಐ.(ಎಂ) ಕುರಿತಾದ ಸುದ್ದಿ ಎಂದು ಬೇರೆ ಹೇಳಬೇಕಾಗಿಲ್ಲ. ಸುದ್ದಿಯೇನು ಗೊತ್ತೇ? ನವದೆಹಲಿಯ ಗೋಲೆ ಮಾರ್ಕೆಟ್ ಪ್ರದೇಶದಲ್ಲಿ ಎ.ಕೆ. ಗೋಪಾಲ್‌ನ ಹೆಸರಿನಲ್ಲಿ "1.75 ಎಕ್ರೆ ಜಾಗದಲ್ಲಿ" ಒಂದು ಕಚೇರಿ ಕಟ್ಟುತ್ತಿದೆ! ಈ ಜಾಗದ ಬೆಲೆಯೇ 10 ಕೋಟಿ ರೂ. ಆದರೆ ಸಿ.ಪಿ.ಐ.(ಎಂ) ತೆತ್ತಿದ್ದು ಕೇವಲ 7 ಲಕ್ಷ. 'ಆರ್ಗನೈಸರ್' ಪ್ರಕಾರ ಈ ಜಾಗಕ್ಕೆ ಸಿ.ಪಿ.ಐ. (ಎಂ) ಅರ್ಜಿ ಹಾಕಿದ್ದು 1989 ರಲ್ಲಿ.

'ಪೀಪಲ್ಸ್ ಡೆಮಾಕ್ರಸಿ' 'ಪತ್ರರಂಗ' ಓದುಗರಿಗೆ ಆರ್.ಎಸ್.ಎಸ್.ನ ಈ 'ಸುದ್ದಿ' ಎಷ್ಟೊಂದು ತೂತುಗಳಿಂದ ಕೂಡಿದೆ ಎಂಬುದು ಮೊದಲ ನೋಟಕ್ಕೇ ಗೊತ್ತಾಗುತ್ತದೆ. 1984 ರಿಂದಲೇ ಬಹಳ ಜನಕ್ಕೆ ಗೊತ್ತಿರುವ ಸಿ.ಪಿ.ಐ.(ಎಂ) ಕಚೇರಿ ಕಟ್ಟುವ ಸುದ್ದಿ ಬಟ್ಟರೆ ಆರ್.ಎಸ್.ಎಸ್.ನ ಈ " ವರದಿ" ಯ ಇತರ ಅಂಶಗಳೆಲ್ಲಾ ಹಸಿ-ಹಸಿ ಸುಳ್ಳುಗಳ ಸರಮಾಲೆ-ಆರ್.ಎಸ್.ಎಸ್.ನ ಜಾಯಮಾನಕ್ಕೆ ತಕ್ಕಂತೆ. ಈ "ಸುದ್ದಿ" ಪ್ರಕಟಿಸಿ ತಾನು ಬೆನ್ನು ತಟ್ಟಿಕೊಳ್ಳುವ ಬದಲು ಮುಖ ಮುಚ್ಚಿಕೊಳ್ಳ ಬೇಕಾ ಗುತ್ತದೆ ಎಂದು ಅದನ್ನು ಮುದ್ರಿಸುವಾಗ "ಆರ್ಗನೈಸರ್" ವಾಲಾಗಳ ಮನಸ್ಸಿಗೂ ಬಂದಿರ ಬಹುದು. ಆದರೂ ಎರಚಿದ ಕೆಸರು ಸ್ವಲ್ಪವಾದರೂ ಮೆತ್ತಿಕೊಳ್ಳ ಬಹುದಲ್ಲವೋ ಎಂದು ಅವರ ಲೆಕ್ಕಾಚಾರವಿರಬಹುದು.

ಆರ್.ಎಸ್.ಎಸ್. ಈ 'ಸುದ್ದಿ' ಯಲ್ಲಿ ಎಷ್ಟೊಂದು ಸುಳ್ಳುಗಳನ್ನು ಪೋಣಿಸಿದೆ ನೋಡೋಣ.

1. ಕಟ್ಟಡದ ಜಾಗಕ್ಕೆ ಅರ್ಜಿ ಹಾಕಿದ್ದು 1989 ರಲ್ಲಿ ಅಲ್ಲ. 1983 ರಲ್ಲಿ ಎ.ಕೆ.ಜಿ. ಭವನ್ ಟ್ರಸ್ಟ್‌ಗೆ ಗೋಲೆ ಮಾರ್ಕೆಟ್ ಬಳಿ ಭಾಯಿ ವೀರ್ ಸಿಂಗ್ ಮಾರ್ಗದ ಇನ್ಸ್‌ಟ್ಯೂಶನಲ್ ಏರಿಯಾದಲ್ಲಿ ಜಾಗ ಮಂಜೂರಾದದ್ದು ನವೆಂಬರ್ 1983 ರಲ್ಲಿ. ಸಿ.ಪಿ.ಐ.(ಎಂ) ಮಾತ್ರವಲ್ಲ, ಇನ್ನೂ ಇತರ ಹಲವಾರು ಸಂಸ್ಥೆಗಳಿಗೆ ಇಲ್ಲಿ ಜಾಗ ಕೊಡಲಾಗಿದೆ.
2. ಸಿ.ಪಿ.ಐ. (ಎಂ) ತೆತ್ತಿರುವುದು 7 ಲಕ್ಷ ರೂ. ಮಾತ್ರವಲ್ಲ. ಜನವರಿ 1984 ರಲ್ಲೇ ಎ.ಕೆ.ಜಿ.ಭವನ ಟ್ರಸ್ಟ್ ಜಾಗದ ಪೂರ್ಣ ಬೆಲೆ 32.2 ಲಕ್ಷ ರೂ.ಗಳನ್ನು ಸರಕಾರಕ್ಕೆ ತೆತ್ತಿದೆ.
3. ಜಾಗದ ಒಟ್ಟು ಕ್ಷೇತ್ರ 1197 ಚದರ ಮೀಟರುಗಳು. 'ಆರ್ಗನೈಸರ್' ಹೇಳಿರುವ 1.75 ಎಕ್ರೆ ಎಂದರೆ 70 80 ಚದರ ಮೀಟರ್ ಆಗುತ್ತದೆ.
4. 1983 ರಲ್ಲೇ ಸಿ.ಪಿ.ಐ.(ಎಂ) ಕಟ್ಟಡ ನಿಧಿಗೆ ಕರೆ ನೀಡಿ ಸಾಮೂಹಿಕ ಸಂಗ್ರಹಣೆಯಿಂದ 72 ಲಕ್ಷ ಸಂಗ್ರಹಿಸ ಲಾಯಿತು. ಸಂಗ್ರಹವಾದ ಈ ಹಣದ ವಿವರಗಳನ್ನು ಸತತವಾಗಿ 'ಪೀಪಲ್ಸ್ ಡೆಮಾಕ್ರಸಿ' ಯಲ್ಲಿ ಪ್ರಕಟಿಸಲಾಗಿದೆ.
5. ಜನವರಿ 1984 ರಲ್ಲೇ ಪೂರ್ಣಹಣ ತೆತ್ತಿದ್ದರೂ ಒಂದಿಲ್ಲೊಂದು ನೆವ ಮಾಡಿ ಐದೂವರೆ ವರ್ಷಕಾಲ ಕಟ್ಟಡ ನಿರ್ಮಾಣಕ್ಕೆ ಅನುಮತಿಯನ್ನು ನಿರಾಕರಿಸುತ್ತಾ ಬರಲಾಯಿತು. ಕೊನೆಗೂ ಜೂನ್1, 1989 ರಲ್ಲಷ್ಟೇ ಅನುಮತಿ ದೊರೆಯಿತು.ಇವೆಲ್ಲಾ ಬಹಿರಂಗ ವಿಷಯಗಳು. ಯಾರು ಬೇಕಾದರೂ ಇದನ್ನು ಪರೀಕ್ಷಿಸಬಹುದು.

ಆರ್.ಎಸ್.ಎಸ್.ನ ಈ "ಕಥೆಯ ಸಾರಾಂಶ ಕಾಂಗ್ರೆಸ್ (ಐ) ಗುಟ್ಟಾಗಿ ಸಿ.ಪಿ.ಐ. (ಎಂ) ಗೆ ನೆರವಾಗಿದೆ ಎಂಬುದು. ಈ ಗುಟ್ಟಿನ ನೆರವು ಯಾವ ತರಹದ್ದು ಎಂದು ಮೇಲಿನ ಸಂಗತಿಯಿಂದಲೇ ಗೊತ್ತಾಗುತ್ತದೆ. ಕಾಂಗ್ರೆಸ್ (ಐ) ಸರ್ಕಾರ ಐದೂವರೆ ವರ್ಷ ಅನಗತ್ಯ ವಿಳಂಬ ಮಾಡಿಸಿ ಈ ನಡುವೆ ಕಟ್ಟಡ ನಿರ್ಮಾಣದ ಖರ್ಚಿನಲ್ಲಿ ವಿಪರೀತ ಹೆಚ್ಚಳದಿಂದಾಗಿ ಹೆಚ್ಚಿನ ಖರ್ಚಿನ ಹೊರೆಯೇ ಕಾಂಗ್ರೆಸ್(ಐ) ನೀಡಿರುವ ಗುಟ್ಟಿನ ನೆರವು"!

ತಮ್ಮ ರಾಜಕೀಯ ವಿರೋಧಿಗಳನ್ನು ಸುಳ್ಳು, ನಿಂದೆಗಳು, ಮಿಥ್ಯಾಪವಾದಗಳ ಮೂಲಕವಲ್ಲದೆ ಬೇರೆ ಯಾವ ರೀತಿಯಲ್ಲೂ ಎದುರಿಸಲಾರದವರಿಗೆ ಏನು ಹೇಳೋಣ? ಎಲ್ಲೋ ಕತ್ತೆಗಳು ಅರಚುವ ಸದ್ದು ಕೇಳುತ್ತಿದೆಯೇ?

ಅನಕ್ಷರತೆ, ಅನಾರೋಗ್ಯ ...

ಬಿ.ಇ.ಎಲ್. ಕಾರ್ಮಿಕರಿಗೆ ಮಹತ್ವದ ಜಯ

ಬಿಇಎಲ್ ಕಾರ್ಮಿಕರು ಎರಡು ದಿನಗಳ ಒಗ್ಗಟ್ಟಿನ ಹೋರಾಟ ನಡೆಸಿ ಜಯಗಳಿಸಿದ್ದಾರೆ. ಅವರ ಈ ಮಹತ್ವದ ಜಯಕ್ಕಾಗಿ ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ಬಿಇಎಲ್ ಕಾರ್ಮಿಕರನ್ನು ಅಭಿನಂದಿಸಿದೆ.

ಬೋನಸ್ ಹಣವನ್ನು ಗಣೇಶ ಚತುರ್ಥಿಮೊದಲು ಕೊಡಲುಮ್ಯಾನೇಜ್ ಮೆಂಟ್ ನಿರಾಕರಿಸಿದಾಗ ಕಾರ್ಮಿಕರು ಕಾರ್ಖಾನೆಯೊಳಗೇ ಕುಳಿತು ಮುಷ್ಕರ ಆರಂಭಿಸಿದರು. ನಂತರ ಹೊರಬಂದು ಕಾರ್ಮಿಕರ ಎಲ್ಲಾ ಸಂಘಗಳೂ ಒಗ್ಗಟ್ಟಾಗಿ ಮುಷ್ಕರ ಮುಂದುವರೆಯಿತು. ಆಡಳಿತ ವರ್ಗ ಬಸ್‌ಗಳನ್ನು ನಿಲ್ಲಿಸಿ ಮುಷ್ಕರ ಮುರಿಯಲು ಪ್ರಯತ್ನಿಸಿತು. ಆದರೂ ಕಾರ್ಮಿಕರು ಜಗ್ಗಲಿಲ್ಲ. ಜಂಟಿ ಹೋರಾಟ ಮುಂದುವರೆಯಿತು.

ಆಗಸ್ಟ್ 29 ರಂದು ಕೊನೆಗೂ ಆಡಳಿತ ವರ್ಗ 20ಶೇಕಡಾ ಬೋನಸ್ಸನ್ನು ಸೆಪ್ಟೆಂಬರ್ 25 ರ ಮೊದಲು ಕೊಡುವುದಾಗಿಒಪ್ಪಬೇಕಾಯಿತು. ಅದರ ಮೊದಲು ಕೇಂದ್ರ ಸರ್ಕಾರದ ಮಂಜೂರಾತಿ ಪಡೆಯಲು ಪ್ರಯತ್ನಿಸುವುದಾಗಿಯೂ, ಸಾಧ್ಯವಾಗದಿದ್ದರೆ 85 ಶೇಕಡಾ ವನ್ನು ಮುಂಗಡವಾಗಿ ಕೊಡುವುದಾಗಿ ಒಪ್ಪಿಕೊಂಡಿತು. ಬೋನಸ್ ಕಾಯ್ದೆ ಪ್ರಕಾರ ಬೋನಸ್ ಅರ್ಹತೆಯಿಲ್ಲದವರಿಗೂ 2200 ರೂ ಕೊಡಲು ಆಡಳಿತ ವರ್ಗ ಒಪ್ಪಿದೆ. 15 ದಿನದೊಳಗೆ ಉತ್ಪಾದನಾ ಅವಾರ್ಡ್ ಯೋಜನೆಯನ್ನು ಮಾತುಕತೆ ಮೂಲಕ ಅಂತಿಮಗೊಳಿಸಲು ಒಪ್ಪಲಾಯಿತು.

ಗಣೇಶ ಚತುರ್ಥಿ, ಭಾನುವಾರ ಹಾಗೂ ಆಗಸ್ಟ್ 29 ರ ವೇತನವನ್ನು ಕೊಡಲೂ ಕೂಡ ಒಪ್ಪಿದೆ.

ಭಾರತ್ ಎಲೆಕ್ಟ್ರಾನಿಕ್ ಕಾರ್ಮಿಕರ ಸಂಘದ ಅಧ್ಯಕ್ಷ ಎಸ್. ಸೂರ್ಯನಾರಾಯಣರಾವ್, ಭಾರತ್ ಇಲೆಕ್ಟ್ರಾನಿಕ್ಸ್ ನೌಕರರ ಸಂಘದ ಅಧ್ಯಕ್ಷ ಎಂ.ಎಸ್.ಕೃಷ್ಣನ್ ಮತ್ತು ಇತರ ಸಂಘಗಳ ಮುಖಂಡರು ಮಾತುಕತೆಯಲ್ಲಿ ಭಾಗವಹಿದ್ದರು.

ಸಾರ್ವಜನಿಕ ವಲಯದ ಕಾರ್ಮಿಕರ ಭವಿಷ್ಯದ ಹೋರಾಟಗಳಿಗೆ ಬಿ.ಇ.ಎಲ್. ಕಾರ್ಮಿಕರ ಈ ಒಗ್ಗಟ್ಟಿನ ಹೋರಾಟ ಒಂದು ಮಾದರಿಯಾಗಬೇಕೆಂದು ಕಾರ್ಮಿಕರನ್ನು ಅಭಿನಂದಿಸಿ ಹೇಳಿಕೆ ನೀಡಿರುವ ಸಿಐಟಿಯು ಕಾರ್ಯದರ್ಶಿ ಕಾಂ. ಎಸ್.ಕೆ. ಉಪಾಧ್ಯಾಯ ಹೇಳಿದ್ದಾರೆ.

Printed and Published by P.Ramachandra Rao on behalf of the Communist Party of India (Marxist) Karnataka State Committee, 95(A), 2nd Cross, Muneshwara Block, Palace Guttahalli, Bangalore-3: Phone No. 366489 EDITOR : P. RAMACHANDRA RAO